ಜನಪ್ರಿಯ ದೇಶಿ ಕಲಾಮಾಲೆ

# ಕಸೂತಿ ಚಿತ್ರಕಲೆ

• ಮಹಾದೇವ ಎಮ್. ಜಗತಾಪ



# ಕಸೂತಿ ಚಿತ್ರಕಲೆ

ಪ್ರಧಾನ ಸಂಪಾದಕರು
ಪೀಟರ್ ಎ. ಲೂಯಿಸ್

ಲೇಖಕರು
ಮಹಾದೇವ ಮಾ. ಜಗತಾಪ

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು ೫೬೦೦೦೨

**KASUTI CHITRAKALE**
*By* : **Mahadeva M. Jagatap**

***Published by***
**B.T. Munirajayya, Registrar**
**Karnataka Lalithakala Academy**
**Kannada Bhavana, J.C.Road**
**BANGALORE-560002**

**First Impression : 2004**

**Pages : XII + 41   Price Rs : 40-00**

ಬೆಲೆ ರೂ. : ೪೦-೦೦

ಪ್ರಥಮ ಮುದ್ರಣ : ೨೦೦೪

© ಲೇಖಕರದು

ಈ ಪುಸ್ತಕದಲ್ಲಿರುವ ಅಭಿಪ್ರಾಯಗಳು
ಆಯಾ ಲೇಖಕರಿಗೆ ಸಂಬಂಧಿಸಿದ್ದು

*ಪ್ರಧಾನ ಸಂಪಾದಕರು*
ಶ್ರೀ ಪೀಟರ್ ಎ. ಲೂಯಿಸ್

*ಸಂಪಾದಕರು*
ಡಾ.ಎಸ್.ಸಿ.ಪಾಟೀಲ

*ಪ್ರಕಟಣಾ ಸಮಿತಿ ಸದಸ್ಯರು*
ಶ್ರೀ ಸುರೇಶ ಡಿ.ಹಾಲಬಾವಿ
ಡಾ. ಪೂರ್ಣಿಮಾ ಪಾಟೀಲ
ಶ್ರೀ ಪಿ.ಎಸ್.ಕಡೇಮನಿ
ಶ್ರೀ ಬಿ.ಎಸ್.ದೇಸಾಯಿ
ಶ್ರೀ ದಿಲೀಪಕುಮಾರ ಕಾಳೆ

*ಪ್ರಕಾಶಕರು*
ಶ್ರೀ ಬಿ.ಟಿ.ಮುನಿರಾಜಯ್ಯ, ರಿಜಿಸ್ಟ್ರಾರ್.
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

*ಸಮನ್ವಯಕಾರ* : ಶ್ರೀ ಪ.ಸ.ಕುಮಾರ

*ಮುಖಪುಟ* : ಶ್ರೀ ಸುಧಾಕರ ದರ್ಬೆ

*ಅಕ್ಷರ ಜೋಡಣೆ* : ಯಾಜಿ ಗ್ರಾಫಿಕ್ಸ್, ಹೊಸಪೇಟೆ

ಮುದ್ರಣ : ಶ್ರೀ ಮಾರುತಿ ಪ್ರಿಂಟರ್ಸ್, ಸುಧಾಮನಗರ, ಬೆಂಗಳೂರು-೨೭

# ಅಧ್ಯಕ್ಷರ ಮಾತು

ಆತ್ಮೀಯರೆ,

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ, ರೂಪಿಸಿ ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡುವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳು ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್' 'ನಿಮ್ಮೊಂದಿಗೆ ನಾವು' 'ಮನೆಗೊಂದು ಕಲಾಕೃತಿ', 'ಜನಪದ ಶೃತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

**ಯಂಗ್ ಸ್ಟ್ರೋಕ್ಸ್:** ಕರ್ನಾಟಕದ ನಾಲ್ಕು ವಿಭಾಗಗಳಿಂದ ಆಯ್ದ ಪ್ರತಿಭಾವಂತ ಯುವಕಲಾವಿದರ ಕಲಾಪ್ರದರ್ಶನವನ್ನು ಬೆಂಗಳೂರು, ಮುಂಬೈ ಮತ್ತು ನವದೆಹಲಿಯಲ್ಲಿ ಪ್ರದರ್ಶಿಸಿದ್ದೇವೆ. ಸುಂದರ ಕೈಪಿಡಿಯನ್ನು ಮುದ್ರಿಸಿದ್ದೇವೆ.

**ಮನೆಗೊಂದು ಕಲಾಕೃತಿ :** ಮಧ್ಯಮ ವರ್ಗದ ಜನರ ಮನೆಯಲ್ಲಿ ನಾಡಿನ ಕಲಾವಿದರ ಕೃತಿಗಳು ರಾರಾಜಿಸಬೇಕೆಂಬ ಉದ್ದೇಶದಿಂದ ಕಡಿಮೆ ಬೆಲೆಯಲ್ಲಿ ಕಲಾಕೃತಿಗಳನ್ನು ಮಾರಾಟ ಮಾಡಿದೆವು. ಜನರ ಉತ್ಸಾಹ ಹಾಗೂ ಪ್ರೋತ್ಸಾಹ ನಮ್ಮನ್ನು ನಿಬ್ಬೆರಗಾಗಿಸಿತು. ಐದು ನೂರಕ್ಕೂ ಹೆಚ್ಚು ಕಲಾಕೃತಿಗಳು ಮಧ್ಯಮ ವರ್ಗದ ಮನೆಗಳನ್ನು ಅಲಂಕರಿಸಿದರೆ, ಅಕಾಡೆಮಿ ಬೊಕ್ಕಸಕ್ಕೆ ಲಕ್ಷಕ್ಕೂ ಹೆಚ್ಚು ಆದಾಯ ಬಂತು.

**ನಿಮ್ಮೊಂದಿಗೆ ನಾವು :** ಕರ್ನಾಟಕದ ಎಲ್ಲ ಕಡೆಗಳಲ್ಲೂ ಈ ಕಾರ್ಯಕ್ರಮಕ್ಕೆ ನಿರೀಕ್ಷೆಗೆ ಮೀರಿದ ಯಶಸ್ಸು ಲಭಿಸಿದೆ. ಈಗಾಗಲೇ ಎಪ್ಪತ್ತೈದು ಸಾವಿರ ಜನರಿಗೆ ಕಲೆಯ ಕಿರು ಪರಿಚಯವನ್ನು ಮಾಡಿಸಿದೆ.

**ಜನಪದ ಶ್ರುತಿ-ಆಧುನಿಕ ಕೃತಿ :** ಜಾನಪದದ ಬೇರುಗಳು ಗಟ್ಟಿಯಾಗಿರುವ ಹಳ್ಳಿಯಲ್ಲಿ ಆಧುನಿಕ ಚಿತ್ರಕಲೆಯನ್ನು ಎತ್ತಿನ ಬಂಡಿಗಳ ಮೇಲೆ ಚಿತ್ರಿಸಿ 'ಚಲಿಸುವ ಗ್ಯಾಲರಿ'ಗಳನ್ನು ನಿರ್ಮಿಸಿದ್ದೇವೆ.

**ಯುವ ಕಲಾವಿದರಿಗೆ ಫೆಲೋಶಿಪ್ :** ಮೂವರು ಯುವ ಪ್ರತಿಭೆಗಳನ್ನು ಆಯ್ಕೆ ಮಾಡಿ ಅವರಿಗೆ ಒಂದು ವರ್ಷದ ಅವಧಿಗೆ ತಿಂಗಳಿಗೆ ರೂ.೩೦೦೦ (ಮೂರು ಸಾವಿರ) ಧನ ಸಹಾಯ ನೀಡಿ ಸ್ವತಂತ್ರವಾಗಿ ಚಿಂತಿಸಿ ಅಭಿವ್ಯಕ್ತಿಸುವ ವಾತಾವರಣವನ್ನು ನಿರ್ಮಿಸಿ ಕೊಟ್ಟಿದ್ದೇವೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಹೊಸದುರ್ಗದ ಹತ್ತಿರವಿರುವ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ.ಎಸ್.ದಂಡಾವತಿಮಠ ಹಾಗೂ ಡಾ.ಎಂ.ವಿ.ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫೆಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡುವ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸುತ್ತಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕೊರೆಯುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಲವು ಹತ್ತು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯು ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಕಲಾವಾರ್ತೆ ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. ಹಾಗೆಯೇ ಅಕಾಡೆಮಿಯ

ಎಲ್ಲ ಸದಸ್ಯರ ತೀರ್ಮಾನದಂತೆ ಹತ್ತು ಜನ ಹಿರಿಯ ಕಲಾವಿದರ ಚಿತ್ರಸಂಪುಟ ಮತ್ತು ಒಂಬತ್ತು ಜನ ಹಿರಿಯ ಕಲಾವಿದರಾದ ಪ್ರೊ.ವ್ಹಿ.ಜಿ.ಅಂದಾನಿ, ಎಸ್.ಕಾಳಪ್ಪ, ಎಚ್.ಎಸ್. ಇನಾಮತಿ, ಕೆ.ಕೇಶವಯ್ಯ, ಪುರುಷೋತ್ತಮ ಕಾರಂತ, ಎಂ.ಆರ್.ಬಾಳೀಕಾಯಿ, ರಘೋತ್ತಮ ಪುಟ್ಟಿ, ವ್ಹಿ.ಟಿ.ಕಾಳೆ ಹಾಗೂ ಸಿ.ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು ಆಯಾ ಲೇಖಕರು ಆ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಸಂಪಾದಿಸಿಕೊಟ್ಟ ಡಾ.ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಅಕಾಡೆಮಿಯ ಇನ್ನೊಂದು ಗ್ರಂಥ 'ಮುಖಗಳೊಂದಿಗೆ ಮುಖಾಮುಖಿ' ಭಾವಚಿತ್ರ ಪರಂಪರೆ ಶೀರ್ಷಿಕೆಯ ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದು ಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ.ಸುಬ್ರಹ್ಮಣ್ಯಂರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲ ನೋಟವನ್ನು ಒಂದೆಡೆಗೆ ಮಾಡಿಕೊಡುವ ಉದ್ದೇಶದಿಂದ ಕರ್ನಾಟಕ ಚಿತ್ರಕಲಾ ದರ್ಶನ ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು, ಇದನ್ನು ಡಾ.ಎಸ್.ಸಿ.ಪಾಟೀಲ ಅವರು ಸಂಪಾದಿಸಿ ಕೊಡುತ್ತಿದ್ದಾರೆ. ಅದಕ್ಕಾಗಿ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ಪರಿಚಯಿಸುವ ದೃಷ್ಟಿಯಿಂದ ಈ ಕೆಳಗಿನ ಗ್ರಂಥಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ.

೧. ರಂಗೋಲಿ ಚಿತ್ರಕಲೆ
೨. ಶೀಗಿ ಚಿತ್ರಕಲೆ
೩. ಕಸೂತಿ ಚಿತ್ರಕಲೆ
೪. ಹಚ್ಚೆ ಚಿತ್ರಕಲೆ
೫. ಬೆಳದಿಂಗಳ ಚಿತ್ರಕಲೆ
೬. ಚಿತ್ತಾರಗೊಂಬೆ ಚಿತ್ರಕಲೆ
೭. ನಾಗಾರಾಧನೆ ಮತ್ತು ಚಿತ್ರಕಲೆ
೮. ಯಕ್ಷಗಾನ ಮತ್ತು ಚಿತ್ರಕಲೆ
೯. ಬಿದರಿ ಚಿತ್ರಕಲೆ
೧೦. ಭೂತಾರಾಧನೆ ಮತ್ತು ಚಿತ್ರಕಲೆ

ಅಳಿದು ಹೋಗುತ್ತಿರುವ ನಮ್ಮ ಜಾನಪದರ ಈ ಚಿತ್ರಕಲೆಯನ್ನು ಉಳಿಸಿ ಬೆಳೆಸಿ ಕೊಳ್ಳುವ ಮತ್ತು ಜನಸಾಮಾನ್ಯರಿಗೂ ಪರಿಣಿತರಿಗೂ ಸುಲಭ ಬೆಲೆಯಲ್ಲಿ ಕಲೆಯ ಈ ಸಾಹಿತ್ಯವನ್ನು ತಲುಪಿಸುವುದು ನಮ್ಮ ಉದ್ದೇಶವಾಗಿದೆ. ಎಲ್ಲ ವರ್ಗದ ಜನರು ಕಲೆಯನ್ನು ಅರ್ಥೈಸಿಕೊಳ್ಳಬೇಕು ಮತ್ತು ಅದರೊಂದಿಗೆ ತಾವೂ ಬೆರೆತುಕೊಳ್ಳಬೇಕು ಅಂದಾಗ ಮಾತ್ರ ಕಲೆ ಉಳಿಯುತ್ತದೆ ಮತ್ತು ಬೆಳೆಯುತ್ತದೆ. ಇಂತಹ ಕೆಲಸಗಳು ಹಲವಾರು ರೀತಿಯಿಂದ ಆಗಬೇಕಾಗಿದೆ. ಕಲಾ ಪ್ರದರ್ಶನ, ಕಲಾಶಿಬಿರ, ವಿಚಾರ ಸಂಕಿರಣ, ಕಲಾ ಪ್ರಾತ್ಯಕ್ಷಿಕೆ ಇತ್ಯಾದಿ ಯಾಗಿ ಮಾಡುತ್ತ ಹೆಚ್ಚು ಹೆಚ್ಚು ಜನಪ್ರಿಯಗೊಳಿಸುವ ಕೆಲಸಗಳು ನಡೆದಷ್ಟು ಈ ಕ್ಷೇತ್ರ ಬೆಳೆಯುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಜನಪ್ರಿಯ ಕಲಾಮಾಲಿಕೆಯಲ್ಲಿ ಈ ಹೊತ್ತಿಗೆಗಳನ್ನು ಪ್ರಕಟಿಸು ತ್ತಿದ್ದೇವೆ. ನಮ್ಮ ಮನವಿಯನ್ನು ಒಪ್ಪಿ ಈ ಹೊತ್ತಿಗೆಗಳನ್ನು ತಮ್ಮ ಬಿಡುವಿಲ್ಲದ ವೇಳೆಯಲ್ಲಿಯೂ ನಮಗಾಗಿ ಕಷ್ಟಪಟ್ಟು ಬರೆದುಕೊಟ್ಟ ಎಲ್ಲ ಲೇಖಕರಿಗೆ ಮತ್ತು ಈ ಪುಸ್ತಕಗಳ ಯೋಜನೆಯನ್ನು ರೂಪಿಸಿ, ಪರಿಣಿತ ಲೇಖಕರನ್ನು ಹುಡುಕಿ, ಅವರಿಂದ ಬರ ವಣಿಗೆಯನ್ನು ಬರೆಯಿಸಿ ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟವರು ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ.ಎಸ್.ಸಿ.ಪಾಟೀಲ ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ನಿಮ್ಮ ಮುಂದಿಟ್ಟಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫೇಕ್ಸ್ ಸಂಸ್ಥೆಗೆ ವಂದನೆಗಳು. ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ವಿಶೇಷವಾಗಿ ಸಮನ್ವಯಕಾರರಾಗಿ ಈ ಕಾರ್ಯ ಆಗು ಮಾಡಿದ ಸದಸ್ಯ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯ ಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿವರ್ಗ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು. ನಮ್ಮ ಈ ಕಿರುಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಬೆಂಗಳೂರು
೨೦೦೪

ಪೀಟರ್ ಎ. ಲೂಯಿಸ್
ಅಧ್ಯಕ್ಷರು

# ಸಂಪಾದಕೀಯ

ಎಲ್ಲ ಅನ್ವಶಿಸ್ತುಗಳಲ್ಲಿ ಆದಂತೆ ದೃಶ್ಯಕಲೆಯ ಕ್ಷೇತ್ರದಲ್ಲೂ ಹೊಸ ನೀರು ಪಶ್ಚಿಮದಿಂದ ಹರಿದು ಬಂದಿದೆ. ಅದರೊಂದಿಗೆ ನಮ್ಮದೇ ಆದ ದೇಶಿಪರಂಪರೆಯ ತಿಳುವಳಿಕೆಯ ಹಿನ್ನಲೆಯಲ್ಲಿಯೂ ಈ ಕಲೆ ಬೆಳೆದು ಬಂದಿದೆ. ಈ ಎರಡೂ ವಿಭಿನ್ನ ಜ್ಞಾನ ಪರಂಪರೆಯ ತಿಳುವಳಿಕೆಯ ಸಂಪರ್ಕ, ಸಂಸರ್ಗದಲ್ಲಿ ಮತ್ತೊಂದು ಬಗೆಯ ಹೊಸಜ್ಞಾನ ಪ್ರವಾಹ ನಮ್ಮ ಕಲಾಪ್ರಪಂಚದಲ್ಲಿ ಸಂಚಲನೆಗೊಂಡಿದ್ದು ಅದು ನಮ್ಮನ್ನು ದಿಗ್ಭ್ರಮೆಗೊಳಿಸುವಷ್ಟು ಈ ಕ್ಷೇತ್ರವನ್ನು ಆವರಿಸಿಕೊಳ್ಳುತ್ತಿದೆ.

ನಮ್ಮ ತನವನ್ನೆಲ್ಲ ನಾವು ಎಲ್ಲಿ ಕಳೆದುಕೊಳ್ಳುತ್ತೇವೆ ಎಂಬ ಆತಂಕ ಕೊಡ ಕಲಾವಲಯದಲ್ಲಿ ಉಂಟಾಗುತ್ತದೆ. ಜಾಗತೀಕರಣ ನಮ್ಮ ಸ್ಥಳೀಕರಣದ ಕಲಾ ಸಂಸ್ಕೃತಿಯ ಮೇಲೆ ಮೂಡಿಸಿದ ಈ ಪರಿಣಾಮದ ಬಗ್ಗೆ ಗಂಭೀರ ಚಿಂತನೆಗಳು ನಡೆಯಬೇಕಾಗಿವೆ. ಇಂತಹ ಸಂಕ್ರಮಣ ಕಾಲದಲ್ಲಿ ಸಹಜವಾಗಿಯೇ ದೇಶಿಕಲಾ ಚಿಂತನೆಗೆ ಹೆಚ್ಚು ಪ್ರಾಮುಖ್ಯತೆ ಪ್ರಾಪ್ತವಾಗುತ್ತಲಿದೆ.

ಕರ್ನಾಟಕದಲ್ಲಿ ಈಗ ಸ್ಥಾನಿಕ ನೆಲೆಯಲ್ಲಿ ಪ್ರಾದೇಶಿಕ ಹಿನ್ನೆಲೆಯ ದೇಶಿಚಿತ್ರ ಕಲೆಯ ಬಹುವಿನ್ಯಾಸಗಳ ಕಡೆಗೆ ನಾವು ಗಮನಹರಿಸಬೇಕಾಗಿದೆ. ಇಂದು ಶಿಷ್ಟಪರಂಪರೆಯ ಚಿತ್ರಕಲೆಯೇ ಎಂಬ ವಾತಾವರಣ ಉಂಟಾಗಿದೆ. ಆದರೆ ಕಲೆಯ ತಾಯಿ ಬೇರುಗಳು ಜನಪದ ಚಿತ್ರಕಲೆಯಿಂದ ಬಂದವುಗಳು ಎಂಬ ಪ್ರಜ್ಞೆಯನ್ನು ನಾವು ಅರಿಯಬೇಕಾಗಿದೆ. ಈ ಹಿನ್ನಲೆಯಲ್ಲಿ ನಮ್ಮ ಜಾನಪದ ನೆಲೆಯ ಚಿತ್ರಕಲಾ ಸಂಸ್ಕೃತಿಯನ್ನು ನಾವು ಜಾಗತಿಕ ನೆಲೆಯಲ್ಲಿ ಪರಿಚಯಿಸುವ, ಅನ್ವಯಗೊಳಿಸುವ, ಕಾರ್ಯಕ್ರಮಗಳನ್ನು ಅಸ್ತಿತ್ವಕ್ಕೆ ತರಬೇಕಾಗಿದೆ. ಈ ದಿಸೆಯಲ್ಲಿ ಅಕಾಡೆಮಿಯ ಈ ಯೋಜನೆ ಒಂದು ಸಣ್ಣ ಪ್ರಯತ್ನ ಮಾತ್ರ. ಹೆಚ್ಚಿನ ಅಧ್ಯಯನಗಳಿಗೆ ಇದು ನಾಂದಿಯಾಗುತ್ತದೆ ಎಂಬ ವಿಶ್ವಾಸ ನಮ್ಮದಾಗಿದೆ. ಸಾವಿರಾರು ವರ್ಷಗಳ ನಮ್ಮ ಚಿತ್ರಕಲೆಯನ್ನು

ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಅದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿ ಒದಗಿಸಿರುವುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಹೀಗೆ ಜಾನಪದ ನಮ್ಮ ಪ್ರಾಚೀನ ಮಾರ್ಗ ಚಿತ್ರಕಲೆಯ ಒಂದು ಅವಿಭಾಜ್ಯ ಅಂಗವಾಗಿರುವುದನ್ನು ಯಾರು ಅಲ್ಲಗಳೆಯುವಂತಿಲ್ಲ.

ಜಾನಪದ ಜನಪದರ ಬದುಕಿನ ಸಂಸ್ಕೃತಿಯನ್ನು ಬಿಂಬಿಸುವ ಜೀವಂತ ವ್ಯವಸ್ಥೆ. ಜನಾಂಗದ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದು ಬಂದಿರುವ ಜನಪದ ಚಿತ್ರಕಲೆ ಆಯಾ ಪ್ರದೇಶದ ಜನಾಂಗದ ಸಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರ ಸಾಮಾಗ್ರಿಯಾಗಿದೆ. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಮೌಖಿಕ ಪರಂಪರೆಯಲ್ಲಿ ಉಳಿಸಿಕೊಂಡು ಬಂದ ಹಿರಿಮೆ ಇವುಗಳಿಗೆ ಇದೆ. ವ್ಯಕ್ತಿ ತನ್ನ ಅನುಭವಗಳಿಗೆ ಜೀವ ಕೊಟ್ಟಿದ್ದು ಬಣ್ಣ ತುಂಬಿದ್ದು ಇಂಥ ಕಲೆಗಳ ಮೂಲಕವೇ. ವ್ಯಕ್ತಿಯ ಬದುಕಿನಷ್ಟೇ ವೈವಿಧ್ಯಮಯ, ವರ್ಣಮಯವಾಗಿ ಈ ಕಲೆ ಬೆಳೆದು ಬಂದಿದೆ.

ಇಂದಿನ ಶಿಷ್ಟಪರಂಪರೆ ಚಿತ್ರಕಲೆಯೇ ನಮ್ಮ ಚಿತ್ರಕಲೆ ಎಂಬ ಭ್ರಮೆಯಲ್ಲಿರುವ ನಮಗೆ ನಮ್ಮ ದೇಶಿಚಿತ್ರಕಲೆಯ ಬಗೆಗಿನ ತಿಳುವಳಿಕೆ ತೀರ ಕಡಿಮೆ. ಈ ಕೊರತೆಯನ್ನು ಹೋಗಲಾಡಿಸುವ ಪ್ರಯತ್ನವಾಗಿ ಅಕಾಡೆಮಿ ದೇಶೀ ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕ ವಿವಿಧ ಪ್ರದೇಶದ ಪ್ರಾತಿನಿಧಿಕವಾದ ಜನಪದ ಚಿತ್ರಕಲೆಯ ಗ್ರಂಥಗಳನ್ನು ಹೊರತರಲಾಗುತ್ತಿದೆ. ಇಲ್ಲಿ ಜನಪದ ಚಿತ್ರಕಲೆಯನ್ನು ತಾತ್ವಿಕ ಮತ್ತು ಸೈದ್ಧಾಂತಿಕ ನೆಲೆಯಲ್ಲಿ ವ್ಯಾಖ್ಯಾನಿಸುವ, ವಿಶ್ಲೇಷಿಸುವ ಮತ್ತು ದಾಖಲೀಕರಣಗೊಳಿಸುವ ಮಹತ್ವದ ಉದ್ದೇಶವನ್ನು ಹೊಂದಲಾಗಿದ್ದು ಕ್ಷೇತ್ರ ಕಾರ್ಯದಿಂದ ಮೂಲ ಪ್ರಮಾಣಭೂತವಾದ ಸಂಶೋಧನಾ ವಿವರಗಳು ಇಲ್ಲಿ ಹರಳುಗಟ್ಟಿ ನಿಂತಿವೆ.

ನಮ್ಮ ಮಾರ್ಗ ಸೂಚನೆಯ ಮೇರೆಗೆ ಹತ್ತುಜನ ವಿದ್ವಾಂಸರಿಗೆ ರಂಗೋಲಿ ಚಿತ್ರಕಲೆ, ಶೀಗಿ ಚಿತ್ರಕಲೆ, ಕಸೂತಿ ಚಿತ್ರಕಲೆ, ಹಚ್ಚೆ ಚಿತ್ರಕಲೆ, ಬೆಳದಿಂಗಳ ಚಿತ್ರಕಲೆ, ಚಿತ್ತಾರದ ಗೊಂಬೆ ಚಿತ್ರಕಲೆ, ನಾಗಾರಾಧನೆ ಮತ್ತು ಚಿತ್ರಕಲೆ ಯಕ್ಷಗಾನ ಮತ್ತು ಚಿತ್ರಕಲೆ, ಬಿದರಿ ಚಿತ್ರಕಲೆ, ಭೂತಾರಾಧನೆ ಮತ್ತು ಚಿತ್ರಕಲೆ ಎಂಬ ಹತ್ತು ವಿಷಯಗಳ ಕುರಿತು ಕಿರುಗ್ರಂಥಗಳನ್ನು ಬರೆಯಲು ವಿನಂತಿಸಿಕೊಳ್ಳಲಾಗಿತ್ತು. ಆದರೆ ಕೆಲವು ಜನ ವಿದ್ವಾಂಸರು ಒಪ್ಪಿಗೆ ಸೂಚಿಸಿ ಬರೆದು ಕೊಡುತ್ತೇವೆ ಎನ್ನುತ್ತಲೇ ದಿನಗಳನ್ನು ಮುಂದೂಡಿ ಕೊನೆಗೂ ಅವರಿಂದ ಬರವಣಿಗೆ ಬರದೇ ಇದ್ದಾಗ ಇಬ್ಬರು ಎರಡೆರಡು ಗ್ರಂಥಗಳನ್ನು ಬರೆಯುವುದು ಅನಿವಾರ್ಯವಾಯಿತು. ಭೂತಾರಾಧನೆ ಮತ್ತು ಚಿತ್ರಕಲೆ ಕುರಿತು ಗ್ರಂಥ ಇನ್ನು ನಮ್ಮ ಕೈ ಸೇರದೇ ಇರುವುದರಿಂದ ಸಧ್ಯ ಬಂದಿರುವ ಒಂಬತ್ತು ಕಿರು ಗ್ರಂಥಗಳನ್ನು ಪ್ರಕಟಿಸುತ್ತಿದ್ದೇವೆ.

ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪೀಟರ್ ಎ. ಲೂಯಿಸ್ ಮತ್ತು ಪ್ರಕಟಣಾ ಸಮಿತಿಯ ಸದಸ್ಯರು ಹಾಗೂ ಅಕಾಡೆಮಿಯ ಎಲ್ಲಾ ಸದಸ್ಯರು ಈ ಯೋಜನೆಯಲ್ಲಿ ಈ ಗ್ರಂಥಗಳನ್ನು ಪ್ರಕಟಿಸಲು ಸರ್ವಾನುಮತದ ಅಭಿಪ್ರಾಯವನ್ನು ವ್ಯಕ್ತಪಡಿಸುವುದರೊಂದಿಗೆ ಸಹಕಾರ ನೀಡಿದ್ದಾರೆ. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಅವರು ನನಗಿಂತಲೂ ಹೆಚ್ಚು ಕಾಳಜಿ ವಹಿಸಿ ಬರಹಗಳನ್ನು ತರಿಸಿಕೊಡಲು ಮತ್ತು ಮುದ್ರಣದ ಜವಾಬ್ದಾರಿಯನ್ನು ಹೊತ್ತು ಸಹಾಯ ಮಾಡಿದ್ದಾರೆ. ಅವರು ತೋರಿದ ಪ್ರೀತಿ, ಸಹಕಾರಕ್ಕೆ ವಂದನೆಗಳು. ಪ್ರಕಟಣೆಯಲ್ಲಿ ಸಹಾಯ ಮಾಡಿದ ಸ್ನೇಹಿತ ಸದಸ್ಯರಾದ ಪ.ಸ.ಕುಮಾರ ಅವರಿಗೂ ಅಕಾಡೆಮಿಯ ಸಿಬ್ಬಂದಿ ವರ್ಗದವರಿಗೂ ಮತ್ತು ಕಡಿಮೆ ವೇಳೆಯಲ್ಲಿ ಅಕ್ಷರ ಜೋಡಣೆ ಮತ್ತು ಪುಟವಿನ್ಯಾಸ ಮಾಡಿಕೊಟ್ಟ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಸವಿತಾ ಯಾಜಿ ಮತ್ತು ಗಣೇಶ ಯಾಜಿಯವರಿಗೆ ಸಹ ವಂದನೆಗಳನ್ನು ತಿಳಿಸುವುದು ನನ್ನ ಕರ್ತವ್ಯ ವಾಗಿದೆ.

ಬಸವ ಜಯಂತಿ
೨೦೦೪

ಡಾ. ಎಸ್. ಸಿ. ಪಾಟೀಲ
ಸಂಪಾದಕರು

ಪುರಾತನ ಕಾಲದಿಂದಲೂ ಮಾನವ, ನಿಸರ್ಗದೊಂದಿಗೆ ನಿಕಟವರ್ತಿಯಾಗಿ ತನ್ನ ಜೀವನವನ್ನು ಸಾಗಿಸಲು ಹೊಟ್ಟೆ, ಬಟ್ಟೆ, ತಟ್ಟೆಯ ಅರಿವಾಯಿತು. ಸಹಜವಾಗಿಯೇ ವಿಕಸಿಸುತ್ತಿರುವ ಮಾನವ ಜೀವಿಯ ಮನಸ್ಸು, ಹೃದಯ, ಚೆಲುವಿನ ಕಡೆಗೆ ಹರಿಯಿತು. ಸೌಂದರ್ಯವನ್ನು ಕಂಡು ಏನೋ ಒಂದು ಅವರ್ಣನೀಯ ಸಂತೋಷದ ಅರಿವಾಗ ಹತ್ತಿತು.

ಹೊಟ್ಟೆಗೆ ಪ್ರಕೃತಿ ಮಾತೆಯಿಂದ ಮೃಷ್ಟಾನ್ನ ಹಾಗೂ ಸುಖವಾಗಿ ಬೆಚ್ಚಗೆ ಜೀವಿಸಲು ಗುಡಿಸಲು ಸಿಕ್ಕಾಗ, ಮಾನ ಮುಚ್ಚಿಕೊಳ್ಳುವ ಸಾದಾ ಬಟ್ಟೆ ಏಕೆ? ಅದನ್ನು ಅಲಂಕರಿಸಿ ತನ್ನ ಅವಯವಗಳಿಗೆ ಸುತ್ತಿಕೊಂಡು ತಾನು ಆನಂದಪಡುತ್ತಾ ಬೇರೆಯವರನ್ನು ಆನಂದದ ಸಾಗರದಲ್ಲಿ ತೇಲಾಡಿಸಿ ಮಾನವ ಸುಖಜೀವನ ಆರಂಭಿಸಿದ. ಮುಂದೆ ತನ್ನ ನಿತ್ಯೋಪಯೋಗಿ ವಸ್ತುಗಳಲ್ಲಿ ಸಹಿತ ಕಲಾತ್ಮಕತೆಯನ್ನು ಅಳವಡಿಸಿಕೊಂಡು ನೋಡಹತ್ತಿದ. ಹೀಗೆ ಕಸೂತಿ ಕಲೆಯಂತಹ ಕಲೆ ಹುಟ್ಟಿ ಬರುವಂತಾಯಿತು.

ವಸ್ತ್ರಕಲೆಯ ಹಾಗೂ ಬಣ್ಣದ ದಾರಗಳ ಸಂಯೋಜನಾತ್ಮಕ ಹೊಂದಾಣಿಕೆಯೇ ಕಸೂತಿ ಕಲೆಯಾಗಿದೆ. ಇದೊಂದು ಕಲಾತ್ಮಕ ಅಂಗ. ಕಸೂತಿ ಕರ್ನಾಟಕದಲ್ಲಿ ಕಸೂತಿ ಎನಿಸಿಕೊಂಡರೆ ಪಂಜಾಬದಲ್ಲಿ ಪುಲ್ಕರಿ, ಗುಜರಾಥದಲ್ಲಿ ಕಥಿ, ರಾಜಸ್ಥಾನದಲ್ಲಿ ಪಿಚವಾಯಿ, ಬಂಗಾಲದಲ್ಲಿ ಕಂಥೆ, ಬಿಹಾರದಲ್ಲಿ ಕಸಿದಾ, ಒರಿಸ್ಸಾದಲ್ಲಿ ಪುರಿ, ಉತ್ತರ ಪ್ರದೇಶದಲ್ಲಿ ಚಿಕನ್, ಕಾಶ್ಮೀರದಲ್ಲಿ ಕಸೀದಾ, ಮಣಿಪುರದಲ್ಲಿ ಪಾನ್ಯೆಕ್, ಹಿಮಾಚಲ ಪ್ರದೇಶದಲ್ಲಿ ಛಂಬಾ, ಸಿಂಧ ಪ್ರಾಂತದಲ್ಲಿ ಕಚ್, ಲಖನೌದಲ್ಲಿ ಚಿಕನ್‌ಕಾರಿ, ಮಹಾರಾಷ್ಟ್ರದಲ್ಲಿ ಕಶಿದಾ, ಫರ್ಷಿಯನ್ ಮತ್ತು ಹಿಂದಿಯಲ್ಲಿ ಕಶೀದಹ ಎಂದು ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಿರುತ್ತವೆ.

''ಕಸೂತಿ'' ಎಂದರೆ ಬಣ್ಣದ ದಾರಗಳಿಂದ ಬಟ್ಟೆಗಳಿಗೆ ಮಾಡುವ ಹೆಣಿಗೆಯ ಅಲಂಕಾರ ಇಲ್ಲವೆ ಚರ್ಮ ಮತ್ತು ಇತರ ವಸ್ತುಗಳ ಮೇಲೆ ಸೂಜಿದಾರಗಳಿಂದ ಹೆಣೆದು ಮಾಡಿದ ಅಲಂಕಾರವನ್ನೇ ಕಸೂತಿ ಎಂದು ಡಾ.ಎಸ್.ಸಿ.ಪಾಟೀಲರು ತಮ್ಮ ಸಂಶೋಧನಾ ಪ್ರಬಂಧ ''ಕರ್ನಾಟಕದ ಜನಪದ ಚಿತ್ರಕಲೆ'' ಎಂಬ ಗ್ರಂಥದಲ್ಲಿ ಅಭಿಪ್ರಾಯಪಟ್ಟಿದ್ದಾರೆ.[೧]

ಬೆಚ್ಚಗೆ ಮಲಗಲು ಹೊದ್ದುಕೊಳ್ಳಲು ಪುಟ್ಟ ಪುಟ್ಟ ಕೌದಿಗಳನ್ನು ಹೆಣ್ಣುಮಕ್ಕಳು ದುಬಟಿ ಎಂದು ತಯಾರಿಸುತ್ತಾರೆ. ಆ ಪುಟ್ಟಮಕ್ಕಳ ಹಾಸಿಗೆ ಹೊದಿಕೆಗೆ ನಿರ್ಮಿಸುವ ಕಲಾತ್ಮಕ ಕೌದಿಯ ಮೇಲೆ ಬರುವ ದಾರದೆಳೆಗಳ ಅಲಂಕಾರ ಕಸೂತಿಯಾಗಿ ಮಾರ್ಪಟ್ಟಿದೆ. ಈ ಕಸೂತಿ ಕಲೆ ಬಿಡುವಿನ ವೇಳೆಯನ್ನು ಪೂರ್ತಿ ಆಕ್ರಮಣ ಮಾಡುತ್ತಿದೆ. ಇದು ಹೆಣ್ಣುಮಕ್ಕಳಲ್ಲಿ ಸೃಜನಶೀಲತೆಯನ್ನು ಮೂಡಿಸುತ್ತದೆ. ಬಣ್ಣದ ದಾರ ತುಂಡು ಬಟ್ಟೆಗಳು ಶಾಂತಿ, ತಾಳ್ಮೆಯ, ಸಹನಶೀಲತೆಯ ಗುಣಗಳಿಗೆ ನಾಂದಿ ಹಾಡುತ್ತದೆ. ಆ ಕಸೂತಿಯ ಆನಂದ ಕಂಡು ಹಿರಿಹಿರಿ ಹಿಗ್ಗುತ್ತಾಳೆ ಗೃಹಿಣಿ. ಅಲ್ಲದೆ ಎಲ್ಲರಿಗೂ ಆನಂದದ ವಲಯದಲ್ಲಿ ಮುಳು ಗಿಸಿ, ನೋಡುಗರಲ್ಲಿ ಸಂತೃಪ್ತಿಯ ವಾತಾವರಣವನ್ನು ಸೃಷ್ಟಿಸುವಲ್ಲಿ ಈ ಕಸೂತಿ ಕಲೆಯ ಪಾತ್ರ ವಿಶಿಷ್ಟವಾಗಿದೆ.

ಪ್ರಕೃತಿಯ ಋತುಮಾನಗಳಿಂದ ರಕ್ಷಣೆಪಡೆಯಲು ಉಪಯೋಗಿಸುವ ಬಟ್ಟೆ ಪ್ರಾರಂಭದಲ್ಲಿ ಕೇವಲ ಉಡುಪಾಗಿ ಜನ್ಮ ತಾಳಿದ್ದರೆ; ಅದು ಕಾಲಕ್ರಮೇಣ ಅಂತಸ್ತಿನ ವಸ್ತುವಾಯಿತು. ಮತ್ತು ಪ್ರಾದೇಶಿಕ-ಜನಾಂಗೀಯ ವೈವಿಧ್ಯತೆಯ ವೈಭವಗಳ ದರ್ಪಣವಾಗಿ ಸಹ ಕಂಗೊಳಿಸಿದೆ.

"ಪಾಶ್ಚಾತ್ಯರಲ್ಲಿ 'ಆ್ಯಡಂ ಮತ್ತು ಈವ್'ರ ನಂತರ ನಾಚಿಕೆಯನ್ನು ಹೋಗಲಾಡಿಸಲು ಉಡುಪಿನ ಉಗಮವಾಯಿತು ಎಂಬ ಅಭಿಪ್ರಾಯ ಮೂಡಿಸುತ್ತಾರೆ. ವಯ್ಯಾರ ಪ್ರದರ್ಶನವು ಉಡುಪುಗಳ ಅವಶ್ಯಕತೆಯ ಕಾರಣಗಳಲ್ಲಿ ಒಂದಾಗಿದ್ದು ಇದು 'ನಾರ್ಸಿಸಿಸಂ' ಅಥವಾ ಸ್ವದೇಹಾರಾಧನೆಯ ಇನ್ನೊಂದು ರೂಪ ಎಂಬ ಅಭಿಪ್ರಾಯವೂ ಇದೆ.

ಮಾನವ ತನ್ನ ದೇಹಕ್ಕೆ ಬಣ್ಣ ಬಳಿದುಕೊಳ್ಳುವುದು, ಕುತ್ತಿಗೆ ಕಿವಿಗಳಿಗೆ ಆಭರಣಗಳನ್ನು ಹಾಕಿಕೊಳ್ಳುವುದು, ಉಡುಗೆಯನ್ನು ಅಂದವಾಗಿ ತೊಡುವುದು ಆರಂಭಿಸಿದಾಗ ಕಸೂತಿಯಂತಹ ಹೆಣಿಕೆಯ ಕಲೆಯೂ ಜನ್ಮ ತಾಳಿತು.

ಶಿಲಾಯುಗದಲ್ಲಿ ಎಸ್ಕಿಮೋಗಳಲ್ಲಿ ನಿಯಾಂಡರ್ ತಾಲ, ಕ್ರೊಮ್ಯಾಗ್ನನ್, ಗುಹಾ ಮನುಷ್ಯರಲ್ಲಿ, ಡಾರ್ಡಗ್ನೆ, ತಾಗುರ್ ಲೆಂಡಾ, ಸ್ಪೇನ್‌ಗಳ ಪ್ರಾಚೀನ ಗುಹೆಯ ಚಿತ್ರಗಳಲ್ಲಿ ಕಸೂತಿಯಂತಹ ಚಿತ್ರಗಳ ಮಾದರಿಗಳಿರುವುದನ್ನು ಗುರುತಿಸಲಾಗಿದೆ. ಇದಲ್ಲದೆ ಸೂಜಿಯಿಂದ ಹೊಲಿದ ಉಡುಪುಗಳ ಅವಶೇಷಗಳೂ ದೊರೆತಿವೆ. ಇಜಿಪ್ತದ ದೇವತೆ ಹಾಗೂ ವೀರಯೋಧರ ಶಿಲ್ಪಗಳು ಉಡುಪುಗಳನ್ನು ಹಾಗೂ ಮೆಸೋಪೊಟೋಮಿಯಾದಲ್ಲಿ ಹೆಣ್ಣುಮಕ್ಕಳ ಉಡುಪು ಗಳನ್ನು ಕಸೂತಿಯಿಂದ ಅಲಂಕರಿಸುತ್ತಿದ್ದುದೂ ಗೊತ್ತಾಗುತ್ತದೆ."(ನೋಡಿ: ಡಾ.ಎಸ್.ಸಿ.ಪಾಟೀಲ : ವರ್ಣಸಂಚಯ, ಪುಟ ೯)

ಮೊಹೆಂಜೋದಾರೋದ ಕಂಚಿನ ಸೂಜಿಗಳನ್ನು ಬಹುಶ: ಕಸೂತಿಗಾಗಿಯೇ ಉಪಯೋಗಿಸುತ್ತಿರಬಹುದು. ಸಿಂಧೂ ನದಿ ಹಾಗೂ ತತ್ಕಾಲೀನ ನಾಗರಿಕತೆಗಳ ಶೋಧನೆಯಲ್ಲಿ ಸಿಕ್ಕಿರುವ ಅನೇಕ ಉಡುಪುಗಳಲ್ಲಿ ಉತ್ಕೃಷ್ಟವಾದ ಕಸೂತಿಯ ನಮೂನೆಗಳಿವೆ. ಋಗ್ವೇದ

ದಲ್ಲಿ ಬರುವ 'ಹಿರಣ್ಯವೇಶಸ್' ಶಬ್ದವನ್ನಾಧರಿಸಿ ಆ ಕಾಲದಲ್ಲಿಯೂ ಭಾರತದಲ್ಲಿ ಚಿನ್ನದ ಕಸೂತಿ ಇತ್ತೆಂದು ಹೇಳಲಾಗುತ್ತದೆ. ಕ್ರಿ.ಪೂ. ೬ನೆಯ ಶತಮಾನದ ಭಾರತದ ವಾಣಿಜ್ಯ ವಸ್ತುಗಳಲ್ಲಿ ಕಸೂತಿ ಮಾಡಿದ ವಸ್ತುಗಳೂ ಸೇರಿವೆ. ಇವು ವಿದೇಶಗಳಲ್ಲಿ ಅತ್ಯಂತ ಜನಪ್ರಿಯ ವಾಗಿದ್ದವು.

ಭಾರತದ ಕಸೂತಿಯಲ್ಲಿ ಚಿನ್ನದ ಎಳೆ ಹಾಗೂ ರತ್ನ ಉಪಯೋಗಿಸುತ್ತಿದ್ದುದನ್ನು ಮೆಗಸ್ತನಿಸ್ (ಕ್ರಿ.ಪೂ. ೩೨೦) ಹೇಳುತ್ತಾರೆ. ಹೀಗೆ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಕಸೂತಿ ಕಲೆ ಪ್ರಚಲಿತದಲ್ಲಿದ್ದಿತು ಎಂಬ ಅಭಿಪ್ರಾಯವನ್ನು ಡಾ. ಎಸ್.ಸಿ.ಪಾಟೀಲರು ನೀಡುತ್ತಾರೆ. ಕರ್ನಾಟಕದಲ್ಲಿಯೂ ಇದು ಪ್ರಾಚೀನತೆಯನ್ನು ಹೊಂದಿದೆ. ಈ ಕಸೂತಿಕಲೆ ಕೇವಲ ಕಲೆಗಾಗಿ ಕಲೆ ಎಂಬ ಪಂಥದಲ್ಲಿ ಮಾತ್ರ ಪವಡಿಸದೇ ತನ್ನ ಕ್ಷೇತ್ರವನ್ನು ವಾಣಿಜ್ಯ ಕ್ಷೇತ್ರಕ್ಕೂ ವ್ಯಾಪಿಸಿದೆ.

## ಕಸೂತಿ ರಚನೆಯ ಸಾಮಗ್ರಿಗಳು

**ಕಸೂತಿ ರಚನೆಗೆ ಬೇಕಾಗುವ ಸಾಮಗ್ರಿಗಳೆಂದರೆ :** ೧. ಕಟ್ಟಿಗೆಯ ಅಥವಾ ಧಾತುವಿನ ರಿಂಗಗಳು ೨. ಸೂಜಿ ೩. ಕತ್ತರಿ ೪. ವಿವಿಧ ವರ್ಣಗಳ ದಾರ ಹಾಗೂ ರೇಷ್ಮೆಯ ದಾರಗಳು ೫. ಅಂಗುಸ್ಥಾನ ೬. ಚಿತ್ರದ ಬಾಹ್ಯರೇಖೆಗಳನ್ನು ಹಾಕಿಕೊಳ್ಳಲು ಪೆನ್ಸಿಲ್ ೭. ಹಾಲು ಮುತ್ತಿನ ಬೇರೆ ಬೇರೆ ಬಣ್ಣದ ಮಣಿಗಳು ೮. ತೂತಿರುವ ರಟ್ಟು ೯. ಮ್ಯಾಟಿಬಟ್ಟೆ ೧೦. ನೆಯ್ಗೆಯ ಬಟ್ಟೆ ೧೧. ಪ್ಲಾಸ್ಟಿಕ್ ಚಪ್ಪಟೆ ದಾರವಿರುವ ಬಟ್ಟೆ ೧೨. ಉಲನ್ ದಾರಗಳು ೧೩. ದುಂಡು ತೂತಿರುವ ಕೊಳವೆಯ ಸೂಜಿ ೧೪. ಕಾಜಿನ ಹಾಗೂ ಹೊಳಪುಳ್ಳ ಬಣ್ಣದ ಮುತ್ತು, ಪೈಪು, ಗುಂಡಿಗಳು.

**೧. ವಸ್ತುಗಳ ವಿವರಣೆ :** ಕಟ್ಟಿಗೆಯ ಅಥವಾ ಧಾತುವಿನ ರಿಂಗ : ಕಸೂತಿಯ ಅರಿವೆಯನ್ನು ಈ ಕಟ್ಟಿಗೆಯ ಅಥವಾ ಧಾತುವಿನ ಗಾಲಿಗಳಿಗೆ ಹಾಕಿ ಬಟ್ಟೆಯನ್ನು ಬಿಗಿಗೊಳಿಸುತ್ತಾರೆ. ಅರಿವೆಯನ್ನು ಸಮನಾಗಿ ಮಡಿಕೆ ಬೀಳದಂತೆ ಮಾಡಲು ಈ ರಿಂಗ ಸಹಾಯಕಾರಿಯಾಗುತ್ತದೆ. ಈ ತರಹದ ರಿಂಗಗಳು ಇತ್ತೀಚೆಗೆ ಬಳಕೆಗೆ ಬಂದಂತಿವೆ.

ಮೊದಲು ನೇರವಾಗಿ ಅರಿವೆಯ ಮೇಲೆಯೇ ಕಸೂತಿ ಮಾಡುತ್ತಿದ್ದುದು ತಿಳಿದು ಬರುತ್ತದೆ. ಈ ರೀತಿಯ ರಿಂಗಗಳು ಪ್ಲಾಸ್ಟಿಕ್, ಕಟ್ಟಿಗೆ, ಧಾತುವಿನಲ್ಲಿ ನಿರ್ಮಿಸಿರುತ್ತಾರೆ. ಒಳಗಡೆಯ ರಿಂಗ ಪೂರ್ತಿಯಾಗಿದ್ದು ಹೊರಗಡೆಯ ರಿಂಗ ನಟ್ಟಿನಿಂದ ಆಧರಿಸಿದ್ದು ಇದನ್ನು ಆಕುಂಚನ ಪ್ರಸರಣ ಮಾಡಲು ಬರುತ್ತದೆ. ಚಿಕ್ಕ ರಿಂಗಿಗೆ ಬಟ್ಟೆಯನ್ನು ಹಾಕಿ ಅದರ ಮೇಲೆ ದೊಡ್ಡ ರಿಂಗನ್ನು ಹಾಕಿ ಬಟ್ಟೆಯನ್ನು ನೀಟಾಗಿಸಿಕೊಂಡು ಮೇಲ್ಭಾಗದ ರಿಂಗನ್ನು ನಟ್ಟಿನ ಸಹಾಯದಿಂದ ಬಿಗಿಗೊಳಿಸಿ ಕೈ ಕಸೂತಿ ಅಥವಾ ಯಂತ್ರದ ಕಸೂತಿ ಮಾಡುತ್ತಾರೆ.

**೨. ಸೂಜಿ :** ಇದರಲ್ಲಿ ಎರಡು ಪ್ರಕಾರಗಳು

ಅ. ಸಾಮಾನ್ಯ ಸೂಜಿ

ಆ. ಕೊಕ್ಕೆ ಸೂಜಿ

ಅ. ಸಾಮಾನ್ಯ ಸೂಜಿ : ಹೊಲಿಗೆ ಕಸೂತಿಯಲ್ಲಿ ಸಾಮಾನ್ಯ ರೀತಿಯ ಸೂಜಿಗಳು ಬೇಕಾಗುತ್ತವೆ. ಕಸೂತಿ ವಿನ್ಯಾಸದ ಕುಸುರಿನ ಕೆಲಸಕ್ಕಾಗಿ ಸಣ್ಣ ಮತ್ತು ಮಧ್ಯಮ ದೊಡ್ಡ ಗಾತ್ರದ ಸೂಜಿಗಳನ್ನು ಸಂಗ್ರಹಿಸಿಟ್ಟುಕೊಂಡು ಉಪಯೋಗಿಸುತ್ತಾರೆ.

ಆ. ಕೊಕ್ಕೆ ಸೂಜಿ : ಇದು ಹೆಣಿಕೆಯ ಕಸೂತಿಯಲ್ಲಿ ಉಪಯೋಗಿಸುತ್ತಾರೆ. ಉಣ್ಣೆಯ ಹಾಗೂ ಬಾಗಿಲು ಪರದೆ, ಬಾಟಲಿಯಲ್ಲಿಳಿಸುವ ಚೆಂಡುಗಳ ಹೆಣಿಕೆಗೆ ಹಾಗೂ ತಾಟಿನ ಮೇಲೆ ಹೊದಿಸುವ ಹೊದಿಕೆಯ ನಕ್ಷೆಗೆ ಈ ಸೂಜಿಯನ್ನು ಉಪಯೋಗಿಸುತ್ತಾರೆ.

ಇ. ಕತ್ತರಿಗಳಲ್ಲಿ ವಿವಿಧ ರೀತಿಯ ನಮೂನೆಗಳಿದ್ದು ಅಂಕುಡೊಂಕಾದ ಕತ್ತರಿಗಳು : ಕಸೂತಿಯಲ್ಲಿ ಹೆಚ್ಚು ಪ್ರಯೋಜನಕಾರಿ ಎನಿಸಿವೆ. ಕಸೂತಿ ಮುಗಿದ ಮೇಲೆ ಹೆಚ್ಚಿನ ದಾರವನ್ನು ಕತ್ತರಿಸಲು ಇವನ್ನು ಉಪಯೋಗಿಸುತ್ತಾರೆ. ಪ್ರಸ್ತುತ ಕೆಲಸಕ್ಕಾಗಿ ಮೊದಲು ಈಳಿಗೆ, ಕುಡುಗೋಲುಗಳನ್ನು ಉಪಯೋಗಿಸುತ್ತಿದ್ದರು. ಈ ವಸ್ತುಗಳ ಬದಲಾಗಿ ಸೂಕ್ಷ್ಮ ಕತ್ತರಿಗಳು ಬಂದಿವೆ.

ಈ. ವಿವಿಧ ವರ್ಣಗಳ ನೂಲಿನ, ರೇಷ್ಮೆಯ, ಉಣ್ಣೆಯ ದಾರ : ಇಲ್ಲಿ ಹತ್ತಿ ಮತ್ತು ರೇಷ್ಮೆಯ ಹಾಗೂ ಉಣ್ಣೆಯ ದಾರಗಳನ್ನು ಉಪಯೋಗಿಸುತ್ತಾರೆ. ಕಸೂತಿ ಹಾಕುವವರ ಅಭಿರುಚಿಗಳಿಗನುಗುಣವಾಗಿ ಇವು ಉಪಯೋಗವಾಗುತ್ತವೆ. ಹೆಚ್ಚಾಗಿ ಸಿದ್ಧ ದಾರಗಳನ್ನೇ ಬಳಸುತ್ತಾರೆ.

ಉ. ಅಂಗುಸ್ಥಾನ : ಕೈಗೆ ಸೂಜಿ ನಡಬಾರದೆನ್ನುವ ದೃಷ್ಟಿಯಿಂದ ಕೈ ಬೆರಳಿಗೆ ಹಾಕಿಕೊಳ್ಳುವ ಲೋಹದ ಸಾಧನ ಇದಾಗಿದೆ. ಇದು ಇತ್ತೀಚಿನ ಕಸೂತಿ ಕಾರ್ಯದಲ್ಲಿ ಉಪಯೋಗಿಸಲಾಗುತ್ತದೆ.

ಊ. ಚಿತ್ರದ ಬಾಹ್ಯರೇಖೆಗಳನ್ನು ಗುರುತು ಹಾಕಿಕೊಳ್ಳಲು ಬಳಸುವ ಪೆನ್ಸಿಲ್ : ಅರಿವೆಯ ಮೇಲೆ ಚಿತ್ರಗಳನ್ನು ಹೆಣೆಯ ಬೇಕಾದರೆ ಚಿತ್ರ ಬರೆಯುವುದರಿಂದ ಮೊದಲು ಬಾಹ್ಯ ರೇಖೆಗಳನ್ನು ಹಾಕಿಸಿಕೊಂಡು, ಆ ರೇಖೆಗಳ ಮೇಲೆ ಕಸೂತಿ ಹೆಣೆಯುತ್ತಾರೆ. ಇದಕ್ಕಾಗಿ ಬೇರೆ ಬೇರೆ ಬಣ್ಣದ ಪೆನ್ಸಿಲುಗಳನ್ನು ಉಪಯೋಗಿಸಬೇಕಾಗುತ್ತದೆ. ಈ ಮೊದಲು ಇದ್ದಲಿ, ವಿಭೂತಿ ಬಳಸುತ್ತಿದ್ದುದಾಗಿ ಗೊತ್ತಾಗುತ್ತದೆ. ಚಿತ್ರ ಬರೆಯಲು ಬರುವವರು ತಾವೇ ಚಿತ್ರ ಬಿಡಿಸಿಕೊಂಡು ಕಸೂತಿ ಹೆಣೆಯುತ್ತಾರೆ.

ಇತ್ತಿತ್ತಲಾಗಿ ಕಾರ್ಬನ್ ಕಾಗದದ ಸಹಾಯದಿಂದ ತಮಗಿಷ್ಟವಾದ ಚಿತ್ರವನ್ನು ಬಟ್ಟೆಯ ಅಥವಾ ತೂತಿನ ರಟ್ಟಿನ ಮೇಲೆ ಚಿತ್ರ ಬಿಡಿಸಿಕೊಂಡು ಕಸೂತಿ ಹೆಣೆಯುತ್ತಾರೆ.

ಗಾಜಿನ ಕಟ್ಟಿನ ಒಳಗಡೆ ಹಾಕುವ ಕಸೂತಿಯ ಸಾಮಗ್ರಿಗಳು ಇಂಥಹುಗಳೇ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಈ ತರಹದ ಕಸೂತಿಯಲ್ಲಿ ವಿವಿಧ ಮಾಧ್ಯಮಗಳ ವಸ್ತುಗಳು ಬಳಕೆಯಾಗುತ್ತವೆ. ಉದಾಹರಣೆಗಾಗಿ ಗಾಜಿನ ಮುತ್ತುಗಳು, ಹಾಲುಮುತ್ತಿನ

ಬಣ್ಣದ ಚಿಕ್ಕಗಾತ್ರದ ಮಣಿಗಳು, ಕೊಳವೆಗಳು, ಗುಂಡಿಗಳು ಬಣ್ಣದ ಹಿನ್ನೆಲೆಗಾಗಿ ಧಾತುವಿನ ಅಥವಾ ಬಣ್ಣದ ತಗಡನ್ನು ಉಪಯೋಗಿಸುತ್ತಾರೆ.

**ಕಸೂತಿ ಹಾಕುವ ವಿಧಾನ :** ಕಸೂತಿ ಹಾಕುವದರಲ್ಲಿ ೧. ಕೈ ಕಸೂತಿ ೨. ಯಂತ್ರದ ಕಸೂತಿ ಎಂಬ ಎರಡು ವಿಧಾನಗಳಿದ್ದು ಇವುಗಳನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

**೧. ಕೈ ಕಸೂತಿ :** ಕೈ ಕಸೂತಿ, ಕೈಯಿಂದ ಕಸೂತಿಯ ಚಿತ್ರ ವಿನ್ಯಾಸಗಳನ್ನು ನಿರ್ಮಾಣ ಮಾಡುವ ಕೌಶಲಯುಕ್ತ ಕಾರ್ಯವಿದಾಗಿದೆ. ಈ ಕೈ ಕಸೂತಿಯಲ್ಲಿಯೇ ಅ) ಹೊಲಿಗೆಯ ಕಸೂತಿ ಆ) ಹೆಣಿಗೆಯ ಕಸೂತಿಗಳಿರುತ್ತವೆ.

**ಅ. ಹೊಲಿಗೆಯ ಕಸೂತಿ :** ಸೂಜಿಯಲ್ಲಿ ವರ್ಣರಂಜಿತವಾದ ದಾರಗಳನ್ನು ಪೋಣಿಸಿ ಅರಿವೆಯ ಮೇಲೆ ಹೊಲಿಗೆಯಿಂದ ಮಾಡುವ ಕಸೂತಿಯ ಕೆಲಸವನ್ನು ಹೊಲಿಗೆಯ ಕಸೂತಿ ಎಂದು ಕರೆಯುತ್ತಾರೆ. ಇತ್ತೀತ್ತಲಾಗಿ ಲಾಂಗ್‌ಸ್ಟಿಚ್ ಅಂಡ್ ಶಾರ್ಟ್‌ಸ್ಟಿಚ್ ಎಂದು ದೊಡ್ಡ ಹಾಗೂ ಸಣ್ಣಗಾತ್ರದ ಹೊಲಿಗೆಗಳಿಂದ ಪೂರ್ತಿಯಾಗಿ ಎಳೆ ತುಂಬಿಕೊಂಡು ಸುಂದರ ಕಸೂತಿಯನ್ನು ನಿರ್ಮಿಸಹತ್ತಿದ್ದಾರೆ.

ಈ ಹೊಲಿಗೆ ಕಸೂತಿಯಲ್ಲಿ ಎಳೆ, ಕತ್ತರಿ, ಕಾಶ್ಮೀರಿ, ಕಂಬಳಿ, ಸರಪಳಿ, ರೆಕ್ಕೆ, ಅಂಚಿನ, ದೇಟಿನ, ಗುಂಡಿಮನಿ, ಗಂಟಿನ, ಎಲೆ, ಹೂವಿನ, ಜೇನು ಹರಿಟ್ಟಿನ, ಜೇಡರ ಬಲೆ, ಮೀನಿನ ಎಲುವಿನ, ಸುತ್ತಿದ ಎಂಬ ಹಲವಾರು ಬಗೆ ಹೊಲಿಗೆಗಳಿವೆ. ಕೈಚೀಲ, ಟೇಬಲ್ ಕ್ಲಾಥ್, ಕುರ್ಚಿಯ ಹಿನ್ನೆಲೆ, ಬಾಗಿಲು ತೋರಣ, ತಲೆದಿಂಬು, ಮಕ್ಕಳ ತೊಟ್ಟಿಲು, ಚೆಟ್ಟು, ಕುಲಾಯಿ, ಕುಂಚಿಗೆ ಮುಂತಾದವುಗಳಿಗಾಗಿ ಹೊಲಿಗೆಯ ಕಸೂತಿ ಹಾಕುತ್ತಾರೆ.

**ಆ. ಹೆಣಿಕೆಯ ಕಸೂತಿ :** ಈ ವಿಧಾನದಲ್ಲಿ ದಾರದಲ್ಲಿ ದಾರವನ್ನು ಅಥವಾ ರೇಷ್ಮೆಯ ನೂಲನ್ನು ತೆಗೆದುಕೊಂಡು ಕೊಕ್ಕೆ ಸೂಜಿಯಿಂದ ದಾರವನ್ನೇ ಹೆಣೆಯುತ್ತಾ ಕಸೂತಿ ಚಿತ್ರ ವಿನ್ಯಾಸ ಬಿಡಿಸುತ್ತಾರೆ.

ನೂಲನ್ನು ಅಥವಾ ದಾರವನ್ನು ಎಡಗೈ ತೋರ್ಬೆರಳಿಗೆ ಸುತ್ತಿಕೊಂಡು ಅಲ್ಲಿಂದ ದಾರ ವನ್ನು ಎಡಗೈ ಹೆಬ್ಬೆರಳು ಮತ್ತು ನಡುವಿನ ಬೆರಳುಗಳ ಮೂಲಕ ಸ್ವಲ್ಪ ಸ್ವಲ್ಪ ದಾರವನ್ನು ಬಿಡುತ್ತಾ ಬಲಗೈಯಲ್ಲಿ ಹಿಡಿದು, ಕೊಕ್ಕೆ ಸೂಜಿಯಿಂದ ಹೆಣೆಯುತ್ತಾ ಹೋಗುತ್ತಾರೆ. ಈ ಕೊಕ್ಕೆ ಸೂಜಿಯನ್ನು ಬೇರೆ ಬೇರೆ ನಂಬರಗಳಲ್ಲಿ ಪಡೆಯುತ್ತಾರೆ.

ಮೇಲೆ ಹೇಳಿದ ಪ್ರಕಾರ ಎರಡೂ ಪ್ರಕಾರಗಳ ಕೈ ಕಸೂತಿಯನ್ನು ಸಾಮಾನ್ಯವಾಗಿ ಹೆಣ್ಣು ಮಕ್ಕಳೇ ಹಾಕುತ್ತಾರೆ. ಹೆಣಿಗೆ ಕಸೂತಿ ಕಡಿಮೆ ಪ್ರಮಾಣದಲ್ಲಿಯೂ ಹೊಲಿಗೆ ಕಸೂತಿ ಅಧಿಕವಾಗಿಯೂ ಕಂಡುಬರುತ್ತದೆ. ಹೊಲಿಗೆಯ ಕಸೂತಿಗಿಂತ ಹೆಣಿಕೆಯ ಕಸೂತಿ ಸ್ವಲ್ಪ ಕಷ್ಟದಾಯಕವಾದುದಾಗಿದೆ. ಈ ಕಾರಣದಿಂದಾಗಿಯೇ ಹಳ್ಳಿಗಳಲ್ಲಿ ಹೊಲಿಗೆಯ ಕಸೂತಿಯೇ ಹೆಚ್ಚು ಬಳಕೆಯಲ್ಲಿದೆ.

ಇತ್ತೀಚೆಗೆ ಲಾಂಗ್ ಸ್ಟಿಚ್ ಶಾರ್ಟ್ ಸ್ಟಿಚ್ ಎಂಬ ಚಿಕ್ಕ ದೊಡ್ಡ ಅಂತರದಲ್ಲಿ ದಾರವನ್ನು ಮೇಲ್ಭಾಗಕ್ಕೆ ಮಾತ್ರ ಕಾಣುವ ಹಾಗೆ ಹಾಕುತ್ತಾರೆ. ಇಲ್ಲಿ ಚಿತ್ರದ ವಾಸ್ತವಿಕ ರೂಪ ಕಾಣುವ ಹಾಗೆ ನೆರಳು ಬೆಳಕಿನ ಪ್ರಭಾವ ಚೆನ್ನಾಗಿ ಮೂಡಿಬರುವಂತೆ ದಟ್ಟ ತಿಳಿಯಾದ ಅತೀ ತಿಳಿಯಾದ ಅನೇಕ ಮಿಶ್ರವರ್ಣಗಳ ದಾರವನ್ನು ಬಳಸಿ ಸುಂದರವಾದ ಪ್ರಕೃತಿಯ ಅಥವಾ ಪ್ರಕೃತಿಯ ರೂಪಗಳಾದ ಹೂವಿನ ಟೊಂಗೆಯ ಅಥವಾ ವ್ಯಕ್ತಿಯ ಚಿತ್ತಾರವನ್ನು ಈ ಚಿಕ್ಕ ದೊಡ್ಡ ಹೊಲಿಗೆಯ ಟೆಬ್ಬಿಗಳ ಮುಖಾಂತರ ಕಸೂತಿ ಹಾಕುತ್ತಾರೆ. ಈ ಕಸೂತಿಗಾಗಿ ಚಮಕಾದ ಸೇಡ್ ಎಂಡ್‌ಲೈಟ್‌ನ ತಿಳಿಯಾದ ದಾರ ಅಥವಾ ರೇಷ್ಮೆಯ ತಿಳಿಯಾದ ದಾರವನ್ನು ಬಳಸಿ ಕೊಂಡು ಸುಂದರ ಕೃತಿಯನ್ನು ನಿರ್ಮಿಸುತ್ತಾರೆ.

**೨. ಯಂತ್ರದ ಕಸೂತಿ :** ಯಂತ್ರದ ಸಹಾಯದಿಂದ ಆಧುನಿಕ ರೀತಿಯಲ್ಲಿ ಹಾಕುವ ಕಸೂತಿ ಯನ್ನು ಯಂತ್ರದ ಕಸೂತಿಯೆಂದು ಹೇಳಬಹುದು. ಇತ್ತೀಚಿನ ದಿನಗಳಲ್ಲಿ ಕೈ ಕಸೂತಿಯಂತೆ ವರ್ಣ ರಂಜಿತ ಚಿತ್ರಗಳನ್ನು ಯಂತ್ರವೇ ಮಾಡಹತ್ತಿವೆ. ಇಲ್ಲಿ ಕಡಿಮೆ ವೇಳೆಯಲ್ಲಿ ಹೆಚ್ಚಿನ ರೀತಿಯ ಕಸೂತಿಯ ಚಿತ್ರಗಳನ್ನು ತಯಾರಿಸಲು ಸಾಧ್ಯವಾದರೂ ಕೈ ಕಸೂತಿಯಲ್ಲಿ ಸಿಗುವ ಸಂತೃಪ್ತಿ, ಸಂತೋಷ, ಸೃಜನಶೀಲತೆ ಯಂತ್ರದ ಕಸೂತಿಯಲ್ಲಿ ಸಿಗುವುದಿಲ್ಲ. ಅಧಿಕ ಖರ್ಚಿನ ಈ ಯಂತ್ರವನ್ನು ಖರೀದಿಸಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ವೃತ್ತಿನಿರತ ಕಸಬುದಾರರಿಗೆ ಮಾತ್ರ ಯಂತ್ರದ ಕಸೂತಿ ಸಹಾಯವಾಗುವುದು. ಪಟ್ಟಣಗಳಲ್ಲಿ ಯಂತ್ರ ದಿಂದ ಕಸೂತಿ ಹಾಕುವದು ಕಂಡುಬಂದರೆ, ಹಳ್ಳಿಗಳಲ್ಲಿ ಕೈ ಕಸೂತಿ ಹಾಕುವ ವಿಧಾನವೇ ಹೆಚ್ಚು ಬಳಕೆ ಯಲ್ಲಿದೆ.

## ಕಸೂತಿ ಪ್ರಕಾರಗಳು

ಕರ್ನಾಟಕದಲ್ಲಿ ಕಂಡುಬರುವ ಕಸೂತಿಯ ಪ್ರಕಾರಗಳನ್ನು ಈ ಕೆಳಗಿನಂತೆ ಗುರುತಿಸಿ ವಿವರಿಸಬಹುದಾಗಿದೆ. ೧. ಗಾಂವಟಿ (ದೇಶೀ) ಕಸೂತಿ ೨. ಮೆಂತೆ ಕಸೂತಿ. ನೇಯ್ಗೆ (ನೇಗಿ ಕಸೂತಿ) ೪. ಮುರುಗಿ ಕಸೂತಿ ೫. ಪ್ಲಾಸ್ಟಿಕ್ ಬಟ್ಟೆಯ ಮೇಲೆ ಉಲನ್ ಕಸೂತಿ ೬. ಗಾಜಿನ ಕಟ್ಟಿನಲ್ಲಿ ಹಾಕುವ ಕಸೂತಿ ೭. ಗಂಟೆಣಿಕೆಯ ಈ ಕೈ ಕಸೂತಿಗಳು ಈಗಲೂ ಪ್ರಚಲಿತದಲ್ಲಿದ್ದು ಇವುಗಳನ್ನು ಒಂದೊಂದಾಗಿ ಹೀಗೆ ವಿವರಿಸಬಹುದು.

**೧. ಗಾಂವಟಿ (ದೇಶೀ) ಕಸೂತಿ :** ಹಳ್ಳಿಯ ಕಸೂತಿ 'ಕನ್ನಡ ಕಸೂತಿ'ಯೆಂದು ಕರೆಯಿಸಿ ಕೊಳ್ಳುವ ಇದು ಕರ್ನಾಟಕದ ಇತರ ಕಸೂತಿಗಳಿಗಿಂತ ತೀರಾ ಭಿನ್ನವಾದುದಾಗಿದೆ. ಅತ್ಯಂತ ಸುಂದರವಾದುದೆಂದೂ ನಯನಾಜುಕಿನದೆಂದೂ ಇದು ಪ್ರಸಿದ್ಧಿ ಪಡೆದಿದೆ. ಸಿದ್ಧ ವಾದ ಗಾಂವಟಿ ಕಸೂತಿಯ ಆದಿ ಅಂತ್ಯಗಳನ್ನು ಗುರುತಿಸುವುದು ಅಷ್ಟು ಸುಲಭದ ಕೆಲಸವಲ್ಲ. ಕೆಳಗಿನ ಬದಿ ಮತ್ತು ಮೇಲಿನ ಬದಿಗಳೆರಡನ್ನೂ ಬೇಕಾದ ಹಾಗೆ ತಿರುಗಿಸಿ ನೋಡಿದರೂ ಈ ಕಸೂತಿಯ ವಿನ್ಯಾಸ ಒಂದೇ ರೀತಿಯಾಗಿ ಕಾಣಿಸುತ್ತದೆ.

ಬೆರಗುಗೊಳಿಸುವ ಕಂಗೋಳಿಸುವ ಕಲಾತ್ಮಕತೆ, ಸೂಕ್ಷ್ಮತೆಗಳು ಈ ಕಸೂತಿಯಲ್ಲಿ ಅಡಕವಾಗಿರುತ್ತವೆ. ನೂಲಿನ ಬಟ್ಟೆಯ ಎಳೆಗಳನ್ನು ಎಣಿಸಿ ಈ ಕಸೂತಿ ಹಾಕುತ್ತಾರೆ. ಇದರಲ್ಲಿ ಕಲಶ, ಕಮಲ, ಪದ್ಮ, ಹೂಬಳ್ಳಿ, ವಿವಿಧ ರೀತಿಯ ನಕ್ಷತ್ರ, ನಂದಿ, ಈಶ್ವರ, ಪಕ್ಷಿ, ಗಿಳಿ, ನವಿಲು ಹೀಗೆ ನೂರಾರು ರೀತಿಯ ಚಿತ್ರಗಳನ್ನು ಕೈಯಿಂದ ಹೆಣೆಯುತ್ತಾರೆ.

ಧಾರವಾಡದ ಶ್ರೀಮತಿ ಲಕ್ಷ್ಮೀ ಕೇಸರಕರ ಅವರು ಈ ತರನಾದ ದೇಶೀ ಕಸೂತಿಯಲ್ಲಿ ಅನೇಕ ಆಕೃತಿಗಳನ್ನು ಕಸೂತಿಯ ಮುಖಾಂತರ ಹೆಣೆದು ಆಧುನಿಕ ಮಹಿಳೆಯರಿಗೆ ಮಾರ್ಗ ತೋರಿ ಹೋಗಿದ್ದಾರೆ. ೧.೫ ಮೀಟರ್ ೨ ಮೀಟರ್ ಕೈಮಗ್ಗದಿಂದ ನೇಯ್ದ ಬಟ್ಟೆಯನ್ನು ಉಪಯೋಗಿಸಿದ್ದಾರೆ. ಹತ್ತಿಬಟ್ಟೆಯ ಪ್ರತಿ ಎಳೆಯನ್ನು ಹೆಣಿಕೆಗೆ ಬಳಸಿಕೊಂಡಿದ್ದಾರೆ. ಒಂದೊಂದೆ ಎಳೆಯನ್ನು ಮೇಲಕ್ಕೆತ್ತಿ ಪುಟ್ಟ ಸೂಜಿಯಿಂದ ಹನುಮನ ಆಕಾರ ಹಾಗೂ ಕುಳಿತ ಸಿಂಹದ ಆಕಾರ ಒಳ್ಳೆಯ ಜಾನಪದ ಶೈಲಿಯ ಗತ್ತನ್ನು ತೋರಿಸಿವೆ.

ಗುಡಿಯಂತೆ ಕಾಣುವ ಹಾಗೂ ತೇರಿನಂತೆ ಕಾಣುವ ಆಕಾರವಂತೂ ಎರಡು ಮೂರು ಗಾತ್ರ ಹೊಸ ಅಲಂಕಾರವನ್ನು ಹೊಂದಿರುವದು ಮಾತ್ರ ವಿಶೇಷವಲ್ಲ. ಈ ಆಕಾರಗಳು ಮುಂದೆ ಅಥವಾ ಹಿಂದೆ ಎರಡೂ ಕಡೆಗೆ ಒಂದೇ ತರನಾದ ಜಾನಪದೀಯ ಕಸೂತಿ ಅಲಂಕಾರ ವನ್ನು ಹೊರಸೂಸುತ್ತವೆ. ಗುಬ್ಬಿ, ಪುಟ್ಟ ಪುಟ್ಟ ಗಿಳಿ ಮತ್ತು ನವಿಲು, ಹೂಬಳ್ಳಿ ಎಲೆ ಬಳ್ಳಿ ಗಳಂತೂ ನೋಡುಗನ ದೃಷ್ಟಿಯನ್ನು ಶರವೇಗದಲ್ಲಿ ತೇಲಿಸುತ್ತವೆ.

ವನರಾಜ ಸಿಂಹದ ಕಸೂತಿ ತೀಕ್ಷ್ಣವಾದ ರೇಖಾವಿನ್ಯಾಸದ ಚಿತ್ರಕಲಾವಿದನ ಕೃತಿಯಂತೆ ಭಾಸವಾಗುತ್ತದೆ. ಆ ಸಿಂಹ ಘರ್ಜನೆಯನ್ನು ಕೂಡ ಈ ಕಸೂತಿ ಕೇಳಿಸುವಷ್ಟು ಶಕ್ತಿಯುತ ವಾಗಿದೆ. ಹೊರಚಾಚಿದ ನಾಲಿಗೆ, ನಿಗರಿನಿಂತ ಬಾಲ, ಠೀವಿಯಿಂದ ಮೇಲೆತ್ತಿದ ಎದುರು ಗಡೆಯ ಕಾಲುಗಳು, ಹಿಂದೆ ಬಲಿಷ್ಠವಾದ ಕಾಲುಗಳು ಅವುಗಳಿಗಿರುವ ಉಗುರುಗಳನ್ನು ಕೂಡಾ ಚಿತ್ರಿಸಿ ನೆಯ್ಗೆಯ ಸೂಕ್ಷ್ಮತೆಯ ಪರಾಕಾಷ್ಠೆಯನ್ನು ಮೆರೆಯುವದರೊಂದಿಗೆ ವನರಾಜ ಸಿಂಹವನ್ನು ಕಸೂತಿಕಲೆಯಲ್ಲಿ ಸೂಕ್ಷ್ಮವಾಗಿ ಮೂಡಿಸಿ ಜನರಲ್ಲಿ ಪ್ರಾಣಿ ಪ್ರಪಂಚದ ಮಹತ್ವ ವನ್ನು ತೋರುವದರೊಂದಿಗೆ ಪ್ರಾಣಿ ಪ್ರೇಮವನ್ನು ಹೆಚ್ಚಿಸಿಕೊಳ್ಳಲು ಮಾರ್ಗವಾಗಿ ಸಿದ್ದಾರೆ.

ಬಣ್ಣದ ಹೂವುಗಳು ಮತ್ತು ಅಂಬಾರಿಯಿಂದ ಅಲಂಕೃತ ಆನೆಯ ಕಸೂತಿಗಳು ವಿಶೇಷ ವೆನಿಸಿವೆ. ಹೂವುಗಳಿಗೆ ಕೆಲವು ಕಡೆ ನೈಜವಾದ ಗುಲಾಬಿ, ಕೆಂಪು ಬಣ್ಣದ ಕಸೂತಿ ಎಳೆಗಳನ್ನು ಬಳಸಿದ್ದರೆ, ಇನ್ನು ಕೆಲವೊಂದು ಕಡೆಗೆ ಕೇವಲ ಹಸಿರು ಕೇವಲ ನೀಲಿ ದಟ್ಟ ಚಾಕಲೇಟ (ಕಂದು) ಬಣ್ಣವನ್ನು ಬಳಸಿ ಸಮತೋಲನಯುಕ್ತವಾದ ಬಣ್ಣಗಳನ್ನು ಬಳಸಿ; ಕಸೂತಿ ನೋಡು ಗರಿಗೆ ಆನಂದವನ್ನೀಯುವಂತೆ ಮಾಡಿದ್ದಾರೆ.

ದಟ್ಟವಾದ ದಡಿ, ನಕ್ಷೆಗಳು ಕೆಲಕಡೆಗೆ ಒಳಗಿರುವ ಹೂವಿನಾಕಾರಗಳು ಎದ್ದು ಕಾಣುವಂತೆ ಮಾಡಿದ್ದಾರೆ. ಕೆಲವು ಕಡೆಗೆ ನಕ್ಷೆಯಲ್ಲಿ ಆ ಹೂವನ್ನೇ ವರ್ಣಮಯ ಮಾಡಿ ಹೆಣೆದಿದ್ದಾ ಗಿದೆ.

ಜಾನಪದ ದೇವರು ಹನುಮ, ಹನುಮನ ಬಾಲಕ್ಕೆ ಗಂಟೆ ಇದು ಕಸೂತಿಕಲೆಗೆ ಒಳ್ಳೆಯ ಧಾರ್ಮಿಕ ಪಾವಿತ್ರ್ಯ ಒದಗಿಸಿದೆ. ಈ ಕಸೂತಿಕಲೆಯು ಸಹಿತ ಎಷ್ಟೇ ಪ್ರಾಕೃತಿಕ ಅಲಂಕಾರದ ಪ್ರಾಧಾನ್ಯತೆಯನ್ನು ಮೆರೆದರೂ ದೇವರ ಪಡಿನೆರಳಿನಲ್ಲಿ ತನ್ನ ಗಟ್ಟಿತನವನ್ನು ನಿರ್ಮಿಸಿ ಕೊಂಡಿರುವುದು ಕಸೂತಿಯ ವಿಶೇಷತೆಯಾಗಿದೆ. ಪ್ರಸ್ತುತ ಕಸೂತಿಗಳು ಎಪ್ಪತ್ತೈದು ವರ್ಷದ ಹಿಂದೆ ನಿರ್ಮಿತಗೊಂಡಿವೆ. ದಿವಂಗತ ಲಕ್ಷ್ಮೀ ಕೇಸರಕರ ಅವರು ಇಂಗ್ಳೆ ಮನೆತನದ ಹೆಣ್ಣು ಮಗಳು ಹೊಸೆಲ್ಲಾಪುರದಲ್ಲಿ ಧಾರವಾಡದ ತಂಪು ವಾತಾವರಣದಲ್ಲಿ ಕಸೂತಿ ರಚನೆಯಾಗಿದೆ.

ದಿವಂಗತ ಶ್ರೀಮತಿ ಬಾಯಕ್ಕ ಇಂಗಳೆ. ಧಾರವಾಡದ ತಂಪಾದ ವಾತಾವರಣದ ಹೊಸೆಲ್ಲಾಪುರದ ವಾಸಿಗಳಾದ ಇವರು ಏಕತಾನತೆಯಿಂದ ಆಕರ್ಷಕವಾದ ನೆಯ್ಗೆಯ ಬಟ್ಟೆಯ ಮೇಲೆ ಕಸೂತಿ ನಿರ್ಮಿಸಿದ್ದಾರೆ. ಶತಮಾನ ಪೂರ್ವದ ಇವು ದೇವಿ ದೇವತೆಯರ ಕಸೂತಿಗಳು ಭಕ್ತಿ ಸಂಪ್ರದಾಯವನ್ನು ಸಮಾಜದಲ್ಲಿ ಭಿತ್ತರಿಸುತ್ತವೆ. ಲಕ್ಷ್ಮೀಯ ಚಿತ್ರ ಅತ್ಯಾಕರ್ಷಣೆ ಯಾಗಿದೆ. ಚತುರ್ಭುಜವುಳ್ಳ ದೇವಿಯ ಮೇಲ್ಬದಿಯ ಎರಡು ಕೈಗಳಲ್ಲಿ ಕಮಲಗಳು ಕಂಗೊಳಿ ಸುತ್ತವೆ. ಇನ್ನೆರಡು ಕೈಗಳಲ್ಲಿ ಸರಮಾಲೆಗಳಿವೆ. ಲಕ್ಷ್ಮೀಯು ಕಮಲದ ಹೂವಿನ ಮೇಲಿರು ವುದು ಸಂಪ್ರದಾಯಬದ್ಧ ಚಿತ್ರವಾಗಿದೆ. ಗುಡಿಗೋಪುರ ಹಾಗೂ ತೇರು ಹೂವು ಬಳ್ಳಿಗಳು ವರ್ಣ ಮಯ ಆಕರ್ಷಕ ಆಕಾರದ್ದಾಗಿದೆ. ರಾಮನ ತೊಟ್ಟಿಲು ಹಾಗೂ ಗೋಣನ್ನು ಹೊರಳಿಸಿ ನಿಂತ ನವಿಲು ನೋಡುಗರನ್ನು ಆಕರ್ಷಿಸುತ್ತವೆ.

ಗೋಣು ಹೊರಳಿಸಿದ ನವಿಲಿನ ಕಸೂತಿಯಲ್ಲಿ ಗೋಣಿನವರೆಗೆ ಒಂದೇ ಬಣ್ಣದಿಂದ ಕಸೂತಿ ಮಾಡಿದ್ದರೆ ಅದರ ಕೆಳಭಾಗವನ್ನು ಹಸಿರು ಬಣ್ಣದ ದಾರ ಬಳಸಿದ್ದಾರೆ. ಗೋಣಿಗೆ ಕಂದು ಕೆಳಗೆ ಹಸಿರು ಬಳಸುವ ಉದ್ದೇಶ ವಿವಿಧ ವರ್ಣಗಳ ಅಧಿಪತಿ ನವಿಲಿನ ವಾಸ್ತವಿಕ ಬಣ್ಣ ಗೋಚರಿಸುತ್ತದೆ.

ಚಕ್ರದ ಸರಳ ಹಸ್ತ ಚಿತ್ರ ಕಸೂತಿಯಲ್ಲಿ ಬಳಸಿದ್ದ ಚಕ್ರಕ್ಕೆ ಅರ್ಧ ದಟ್ಟ ಕಂದು ಇನ್ನರ್ಧ ತಿಳಿ ಹಸಿರು ಹಾಕಿ ಸಂಪ್ರದಾಯ ತೊರೆದೆ ತೋರಿದ ಕಸೂತಿ ಅಲಂಕಾರ ಇದಾಗಿದೆ. ಕಸೂತಿ ಯಲ್ಲಿಯೇ ತಮ್ಮ ಹೆಸರುಗಳನ್ನು ಸುಂದರವಾಗಿ ಬರೆದಿದ್ದಾರೆ. ಕೆಲ ನಕ್ಷೆಗಳ ಆಕಾರವನ್ನು ಭರ್ತಿ (ಪೂರ್ತಿ) ತುಂಬಿದರೆ ಇನ್ನು ಕೆಲವು ನಕ್ಷೆಗಳು ಹೊರರೇಖೆಗಳನ್ನು ಮಾತ್ರ ಕಸೂತಿಯಲ್ಲಿ ಪೂರ್ತಿ ಮಾಡಿದ್ದಾರೆ. ಆನೆ, ಒಂಟಿ, ಹಾಲಕ್ಕಿಗಳು, ಬಾತುಕೋಳಿ, ಹೂವು ಬಳ್ಳಿಯ ಅಲಂಕಾರಿಕ ನಕ್ಷೆಗಳು, ದೇವರಮೂರ್ತಿಗಳಾದ ಸರಸ್ವತಿ, ಬಾಲಕೃಷ್ಣ, ಕುದುರೆ ಸವಾರಿ ಮಾಡುತ್ತಿರುವ ಸವಾರ ಅತ್ಯಾಕರ್ಷಕ ಕಸೂತಿಗಳಾಗಿವೆ. ಪವನಪುತ್ರ ಹನುಮಾನನ ಮಹಿಮೆ ಕಸೂತಿಯಲ್ಲಿದೆ.

ಧಾರವಾಡದ ದಿವಂಗತ ಶ್ರೀಮತಿ ಲಕ್ಷ್ಮೀ ಕೇಸರಕರ ಅವರು ನೇಯ್ದ ಕಸೂತಿ ಸರಸ್ವತಿ ವೀಣಾಧಾರಿಯಾಗಿದ್ದಾಳೆ. ಬಲಗಾಲನ್ನು ಮೇಲ್ಗಡೆ ಇಟ್ಟುಕೊಂಡು ಸಾಂಪ್ರದಾಯಬದ್ಧವಾದ ಕಸೂತಿ ಇದಾಗಿದೆ. ಇದರಂತೆ ಬಾಲಕೃಷ್ಣ ಕೈಯಲ್ಲಿ ಕೊಳಲು ಅಂಬೆಗಾಲಿಕ್ಕುತ್ತಿರುವ ಬಾಲಕೃಷ್ಣ ಅವನ ತಲೆ ಹಾಗೂ ಮುಖದ ಭಾವ ಚೆನ್ನಾಗಿ ಮೂಡಿಬಂದಿದೆ.

ಕುದುರೆಯ ಸವಾರಿ ಚಿತ್ರ ಕಸೂತಿ ಕೈಯಲ್ಲಿ ಕುದುರೆಯ ಲಗಾಮ ಹಿಡಿದಿದ್ದು, ಅದರ ಹಿಡಿತಕ್ಕೆ ಮುಂದಿನ ಕಾಲುಗಳನ್ನು ಮೇಲಕ್ಕೆತ್ತಿದೆ. ಆ ಕುದುರೆಯ ಸವಾರಿ ಮಾಡುತ್ತಿರುವ ವ್ಯಕ್ತಿಯ (ಕಸೂತಿ) ಕಿತ್ತೂರಿನ ರಾಣಿ ಚೆನ್ನಮ್ಮನನ್ನು, ಛತ್ರಪತಿ ಶಿವಾಜಿಯನ್ನು ಹಾಗೂ ಶೂರ ಸೈನಿಕರನ್ನು ಅಥವಾ ಆಧುನಿಕ ಕುದುರೆ ಸವಾರ ಸೈನಿಕನಂತೆ ಕಂಗೊಳಿಸುತ್ತವೆ.

ಆನೆಯ ಕಸೂತಿ ಸುಂದರವಾದ ಶೈಲಿಯದ್ದಾಗಿದೆ. ತನ್ನ ಸೊಂಡಿಲನ್ನು ಕಲಾತ್ಮಕವಾಗಿ ಅಲುಗಾಡಿಸುತ್ತಿರುವುದು ಸೊಂಡಿಲಲ್ಲಿ ಆಹಾರವನ್ನು ಹಿಡಿದಿರುವುದು, ಅಲಂಕಾರಿಕ ಎರಡನೆಯ ಬಾಲ ಸುಂದರವಾಗಿ ಕಸೂತಿ ಹಾಕಲ್ಪಟ್ಟಿದೆ. ಅದರ ಬೆನ್ನಿನ ಮೇಲೆ ಮೈಸೂರಿನ ಅರಮನೆಯ ಆನೆಗೆ ಅಲಂಕರಿಸಿದಂತೆ ನಕ್ಷೆಯುಕ್ತ ಕಸೂತಿ ಇದಾಗಿದೆ.

ಪವನಪುತ್ರ ಹನುಮಾನನ ಅಲಂಕಾರಿಕ ಬಾಲ, ಬಾಲಕ್ಕೆ ಗಂಟೆ ಬಲಗೈಯಲ್ಲಿ ಪರ್ವತ ಇರುವ ಕಸೂತಿ ಹನುಮಾನನ ಮಹತ್ವವನ್ನು ತೋರುತ್ತದೆ. ಈ ಕಸೂತಿ ಪ್ರತಿಯೊಬ್ಬ ಹೆಣ್ಣುಮಕ್ಕಳಲ್ಲಿ ಹನುಮಾನ ಧೈರ್ಯ, ಪಾವಿತ್ರ್ಯ ಒಡಮೂಡುತ್ತ ಧೈರ್ಯ ತುಂಬುತ್ತದೆ.

ನವಿಲಂತೂ ಗರಿಗೆದರಿ ನಿಂತ, ತನ್ನ ಠೀವಿಯುತ ಗೋಣನ್ನು ನೆಲದವರೆಗೆ ಹಚ್ಚಿ ತನ್ನ ಚೊಂಚಿನಿಂದ ಹುಳ ಹುಪ್ಪಡಿಗಳನ್ನು ಹುಡುಕುವ ಹಾಗೂ ಠೀವಿಯಿಂದ ಎದೆಸೆಟೆಸಿ ನಿಂತ ಹಾಗೂ ಹಿಂದೆ ಅಲಂಕಾರಿಕ ಪುಚ್ಚಗಳಿಂದ ಅಲಂಕೃತ ನವಿಲುಗಳು ನೋಡಿಸಿಕೊಳ್ಳುತ್ತವೆ.

ಕುದುರೆ ಸಿಂಹಗಳಂತೂ ಎಲ್ಲಾ ತರಹದ ಅಲಂಕಾರವನ್ನು ಹೊರಸೂಸುತ್ತವೆ. ಸಿಂಹದ ಎದುರಿಗೆ ಗೋಣೆರುವ ಹಾಗೂ ಹಿಂದುಗಡೆ ಗೋಣು ಮಾಡಿ ನೋಡುತ್ತಿರುವ ಹಸಿದ ಸಿಂಹಗಳ ಘರ್ಜನೆಯ ಕೂಡಾ ಕಸೂತಿಯಲ್ಲಿ ಒಡಮೂಡಿಸಿದ್ದು, ಪ್ರಾಣಿ ಪ್ರೇಮಭಾವವನ್ನು ಹೊರ ಸೂಸುತ್ತವೆ.

ಕುಂಭಗಳ ಅಲಂಕಾರಗಳೆ ಹೂಬಳ್ಳಿಯ ಹೂದಾನಿಯ ಅಲಂಕಾರದಂತೆ, ರಾಮನ ತೊಟ್ಟಿಲು ನಕ್ಷೆಗಳು ವರ್ಣಮಯವಾಗಿವೆ. ಮೂರು ಹೂವುಗಳುಳ್ಳ ಗಿಡಗಳು ಒಂದೇ ಹೂವಿರುವ ಟೊಂಗೆ ನೋಡಿಸಿಕೊಳ್ಳುತ್ತದೆ.

ಚಾಂಬಳಿ ಬಣ್ಣದಲ್ಲಿ ಕಂಗೊಳಿಸುವ ನೀರಿನಲ್ಲಿ ತೇಲುವ ಬಾತುಕೋಳಿ, ನದಿದಂಡೆಗಿರುವ ಕೊಕ್ಕರೆಗಳು ಹಾಗೂ ವರ್ಣಮಯ ರಾಮನ ತೊಟ್ಟಿಲು ನೋಡಿದರೆ ಮನಸ್ಸೆ ಮುದಗೊಳ್ಳುತ್ತದೆ. ಗಿಳಿಯ ಅಲಂಕಾರಿಕ ರೂಪಗಳು ಅಲ್ಲಲ್ಲಿ ಕಂಗೊಳಿಸುತ್ತದೆ.

ಇನ್ನೊಂದು ಮರಗಿಡದ ಅಲಂಕಾರಿಕ ರೂಪ ಚೆನ್ನಾಗಿ ಕಸೂತಿ ಮಾಡಲ್ಪಟ್ಟಿದೆ. ವಿಶಾಲವಾದ ಮರದ ಅಲಂಕಾರ ಚಿಕ್ಕ ಮರಗಳ ಅಲಂಕಾರಗಳನ್ನು ನೋಡಿದರೆ ಕಸೂತಿಯ ಪ್ರಬಲವಾದ ಮಾಧ್ಯಮದಿಂದ ಪ್ರಕೃತಿಯಲ್ಲಿರುವ ಮರಗಳ ರಕ್ಷಣೆಯಿಂದ ಮಳೆ ಬೆಳೆಗೆ ಮಾರ್ಗವನ್ನು ಸೂಚಿಸುತ್ತವೆ. ಅಶ್ವಥ ವೃಕ್ಷದ ಪೂಜೆಯ ಧಾರ್ಮಿಕಭಾವ ಈ ಮರದ ಕಸೂತಿಯಿಂದ ಒಡ ಮೂಡುತ್ತದೆ.

ಈ ದೇಶಿ ಗಾಂವಟಿ ಕಸೂತಿಯೇ ಮುಂದುವರಿಯುತ್ತಾ ತೊಟ್ಟುಕೊಳ್ಳುವ ಸೀರೆಗಳಲ್ಲಿ ಅದರಲ್ಲೂ ಸೀರೆಯ ಸೆರಗಿನ ಮೇಲೆ ಹಾಗೂ ಮಕ್ಕಳ ಕುಂಚಿಗೆ ಕುಲಾಯಿಗಳ ಮೇಲೆ ರಾರಾಜಿಸತೊಡಗಿರುವುದರಲ್ಲಿ ಸಂದೇಹವೇ ಇಲ್ಲ. ಏಕೆಂದರೆ ಇದೇ ಶೈಲಿಯ ಇದೆ ಆಕಾರ ಗಳು ಸಾಕ್ಷಿಯಾಗಿದೆ.

ನಮ್ಮ ನಾಡಿನಲ್ಲಿ ಬೆಲೆಬಾಳುವ ರೇಷ್ಮೆ ಸೀರಿಗೆ ಮಾರುಹೋಗದ ನೀರೆಯರೇ ಇಲ್ಲ ಈ ದಡಿ ಸೆರಗು ರೇಷ್ಮೆ ಹೊಟ್ಟೆಯಭಾಗ ಮಾತ್ರ ನೂಲಿನಿಂದ ತಯಾರಿಸಿದ ಕರ್ನಾಟಕ ಕರಿ "ಚಂದ್ರಕಾಳಿ" ಸೀರೆಯಲ್ಲಿ ಈ ತೆರನಾದ ಕಸೂತಿಗಳನ್ನು ಕಾಣುತ್ತೇವೆ. ಗುಳೇದಗುಡ್ಡದ "ಚಂದ್ರಕಾಳಿ" ಹೆಸರಿನ ಕರಕುಶಲ ಕಲಾತ್ಮಕ ಕಸೂತಿಯ ಸೀರೆಗಳು ನಾಡಿನಾದ್ಯಂತ ತಮ್ಮ ಹಿರಿಮೆಯನ್ನು ಮೆರೆದಿವೆ.

ಭಾರತೀಯ ಗೃಹಿಣಿಯರಿಗೆ ರೇಷ್ಮೆ ಸೀರೆಯ ಬಗ್ಗೆ ಅಪಾರ ಮೋಹ, ಹೆಣ್ಣಿನ ಕೋಮಲ ದೇಹಕ್ಕೆ ಹಗುರವಾದ ಮಲ್ಲಿಗೆಯ ಹೂವಿನಂತೆ ಮೆತ್ತನೆಯ ಸ್ಪರ್ಶಸುಖ ನೀಡುವ ಈ ಚಂದ್ರಕಾಳಿ ಸೀರೆಯ ದಡಿ ಸೆರಗು, ಮಧ್ಯಭಾಗವೆಲ್ಲ ರೇಷ್ಮೆಯಿಂದ ಕೂಡಿರುತ್ತದೆ. ಸೀರೆಯ ಮಧ್ಯದಲ್ಲಿ ಅಡ್ಡವಾಗಿ ಬರುವ ಎಳೆಗಳು ಎಲ್ಲವೂ ನೂಲಿನವೂ ಅದಕ್ಕಾಗಿ ತಾಳಿಕೆ ಬಾಳಿಕೆ ಹೆಚ್ಚಿಗೆ ಬರುತ್ತದೆ.

ದಟ್ಟ ನೀಲಿ ಬಣ್ಣದ ಈ ಸೀರೆಯ ಸೆರಗು ಹಾಗೂ ದಡಿಗಳು ಮಾತ್ರ ಕೆಂಪು ವರ್ಣ ದ್ದಿರುತ್ತವೆ. ದಡಿಯಲ್ಲಿ ಅತಿ ಸೂಕ್ಷ್ಮ ಬಿಂದುಗಳಿಂದ ಅಲಂಕೃತಪಟ್ಟಿ ಇರುತ್ತದೆ. ಚಂದ್ರಕಾಳಿ ಕಸೂತಿ ಸೀರೆಯು ಸಾಮಾನ್ಯವಾಗಿ ಹದಿನೆಂಟು ಮೊಳ ಅಂದರೆ ಒಂಭತ್ತು ಮೀಟರ್ ಉದ್ದ ವಿರುತ್ತದೆ. ದಡಿಯ ಗಾತ್ರ ಐದು ಅಂಗುಲ. ಸೆರಗು ಸಾಮಾನ್ಯವಾಗಿ ಮೂರು ಅಡಿ ಉದ್ದ ಮೂರು ಅಡಿ ಅಗಲವಿರುತ್ತದೆ. ಸೀರೆಯ ಮಧ್ಯಭಾಗದಲ್ಲಿ ಸೂಜಿ ಮಲ್ಲಿಗೆ ಎಂಬ ಸುಂದರ ವಾದ ಹೂವಿನ ಕಸೂತಿ ಬಣ್ಣದ ರೇಷ್ಮೆ ಎಳೆಗಳಿಂದ ತುಂಬಿ ಇಡೀ ಸೀರೆಯನ್ನು ಅಲಂಕಾರ ಮಯಗೊಳಿಸುತ್ತಾರೆ.

ಚಂದ್ರಕಾಳಿ ಸೀರೆಯ ಸೆರಗಿನ ಭಾಗದಲ್ಲಿ ಹುಲಿ, ಸಿಂಹ, ಜಿಂಕೆ, ಅಳಿಲು, ಗುಬ್ಬಿ, ನವಿಲು ಮುಂತಾದ ಪ್ರಾಣಿ ಪಕ್ಷಿಗಳ ಚಿತ್ತಾರಗಳು, ಹೂಬಳ್ಳಿಗಳು, ತೇರು, ಕಾಳಿಂಗನ ಮಡು, ಕಮಲದಲ್ಲಿ ಕುಳಿತ ಲಕ್ಷ್ಮಿ ಮುಂತಾದ ಕಸೂತಿ ಚಿತ್ತಾರಗಳಿರುತ್ತವೆ. ಚಂದ್ರಕಾಳಿ ಸೀರೆಯಲ್ಲಿ ಸಾಮಾನ್ಯವಾಗಿ ಹಳದಿ, ಕೆಂಪು, ತಿಳಿಗೆಂಪು, ತಿಳಿಹಸಿರು, ಗುಲಾಬಿ, ಬಿಳಿಬಣ್ಣದ ರೇಷ್ಮೆ ದಾರಗಳಿಂದ ರಚಿತಗೊಂಡ ವರ್ಣಮಯ ಚಿತ್ತಾರಗಳಿರುತ್ತವೆ. ಇವು ಸೀರೆಯ ಬಾಳಿಕೆ ಯನ್ನು, ಸೌಂದರ್ಯವನ್ನು ಕಾಪಾಡಿಕೊಂಡು ಬರುತ್ತವೆ.

ದೈನಂದಿನ ಜೀವನದಲ್ಲಿ ಹಬ್ಬ, ಹುಣ್ಣಿಮೆ, ಮದುವೆ, ಮಂಗಲಕಾರ್ಯಗಳಲ್ಲಿ ಗೃಹಿಣಿ ಯರು ಚಂತ್ರಕಾಳಿ ಸೀರೆ ತೊಟ್ಟುಕೊಂಡು ಆನಂದಪಡುತ್ತಾರೆ. ದೃಶ್ಯ ಮಾಧ್ಯಮದಿಂದ ಈ ಕಸೂತಿ ಸೀರೆ ಪ್ರೌಢಿಮೆ ಮೆರೆಯುತ್ತಿದೆ. ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿರುವ

ಬಯಲಾಟಗಳಲ್ಲಿ ಸ್ತ್ರೀ ಪಾತ್ರಗಳು ಚಂದ್ರಕಾಳಿ ಸೀರೆಯನ್ನುಟ್ಟು ಬಯಲಾಟಕ್ಕೆ ಮೆರಗು ನೀಡುತ್ತವೆ.

ಕರ್ನಾಟಕದ ಬಹುಭಾಗದಲ್ಲಿ ಕೌದಿಯನ್ನು ಉಪಯೋಗಿಸುತ್ತಾರೆ. ಇದಕ್ಕೆ ಮರಾಠಿಯಲ್ಲಿ ಕಂಥಾ ಎನ್ನುವರು. ಕ್ರಿ.ಶ.೨ನೆಯ ಶತಮಾನದಲ್ಲಿ ನಿರ್ಮಾಣವಾದ "ಚರಕ ಸಂಹಿತಾ"ದಲ್ಲಿ ಕೌದಿಯನ್ನು 'ಕಂಥಾ' ಎಂದು ಕರೆಯಲಾಗಿದೆ. ಕೌದಿಗಳಲ್ಲಿ ಅನೇಕ ನಮೂನೆಯ ಗಾತ್ರದ ಕೌದಿಗಳನ್ನು ತಯಾರಿಸುತ್ತಾರೆ. ಹೆಚ್ಚಾಗಿ ಬೇಸಿಗೆಯ ಬೇಸರದ ಅವಧಿಯನ್ನು ಸುಂದರ ಕೌದಿ ತಯಾರಿಸುವಲ್ಲಿ ತೊಡಗುತ್ತಾರೆ. ಈ ಕೌದಿ ನೋಡುಗರಿಗೆ ಸುಂದರವಾಗಿ ಕಾಣುವಲ್ಲಿ ಕಸೂತಿ ಹಾಕಿದಂತೆ ಬರುವ ದಾರದ ಮೇಲ್ಭಾಗ ಮುಖ್ಯ ಪಾತ್ರ ವಹಿಸುತ್ತದೆ.

ಹೆಚ್ಚಾಗಿ ಬಿಳಿದಾರವನ್ನೆ ಕೌದಿ ತಯಾರಿಸುವಲ್ಲಿ ಉಪಯೋಗಿಸುತ್ತಾರೆ. ಕೌದಿ ಕೆಲಸ ಪ್ರಾರಂಭಕ್ಕೆ ಹಾಗೂ ಮುಕ್ತಾಯಕ್ಕೆ ಶುಭ ದಿನಗಳನ್ನೆ ಆಯ್ದುಕೊಳ್ಳುತ್ತಾರೆ. ಪ್ರಾರಂಭದಲ್ಲಿ ತೆಳುವಾದ ದೊಡ್ಡಗಾತ್ರದ ಅರಿವೆಗಳನ್ನು ನೀರಿನಲ್ಲಿ ತೊಯಿಸಿ ಅಗಲವಾಗಿ ಬಗ್ಗಿ ಹಿಡಿದು ನೆಲದ ಮೇಲಿರಿಸಿ ಎರಡು ಮೂರು ಪದರ ಅರಿವೆ, ಹೆಚ್ಚಾಗಿ ಹಡದವ್ವನ ಹಡದಿಯನ್ನೇ ಮೂಲ ತಳವನ್ನಾಗಿ ಆರಿಸಿಕೊಂಡು ಹಾಸಿ, ನಾಲ್ಕು ಮೂಲೆಗೆ ಭಾರವಾದ ಕಲ್ಲುಗಳನ್ನಿಟ್ಟು ಅಥವಾ ನಾಲ್ಕಾರು ಮಂದಿ ಹಿಡಿದು, ದೊಡ್ಡ ಸೂಜಿಯಿಂದ ಕೌದಿದಾರ ಪೋಣಿಸಿ ದೂರ ದೂರ ಒಂದು ಪೂಟಿಗೊಂದರಂತೆ ಹೊಲಿಗೆ ಹಾಕಿ, ನಂತರ ಮಡಿಸಿ ಅದರ ಮೇಲೆ ಭಾರಹಾಕಿ ಇಡುತ್ತಾರೆ. ನೀರಿನ ಅಂಶ ಆರಿ ಹೋಗುತ್ತಿದ್ದಂತೆ ಕೌದಿಗೆ ಬೇಕಾದ ತಳ ಸಿದ್ಧವಾಗುತ್ತದೆ.

ಈ ಬುನಾದಿಯ ಮೇಲೆಯೇ ದಂಡೆಗೆಲ್ಲ ಗಟ್ಟಿಯಾದ ರೇಷ್ಮೆಯ ಸೆರಗಿನ ದಡಿಗಳನ್ನು ಹೆಚ್ಚಾಗಿ ಬಳಸುತ್ತಾರೆ. ಆ ದಡಿ ಅದರಲ್ಲಿರುವ ಸುಂದರ ಸೂಕ್ಷ್ಮ ಬಣ್ಣದ ಬಿಂದುಗಳು ಈ ಕೌದಿಗೆ ಮೆರಗು ಕೊಡುತ್ತವೆ. ಈ ಅಲಂಕಾರಿಕ ಬಟ್ಟೆಯನ್ನು ಭದ್ರವಾಗಿ ಹಿಡಿಯುವ ಕೆಲಸವನ್ನು ಕಸೂತಿಯಂತೆ ಇರುವ ದಾರ ಮಾಡುತ್ತದೆ. ದಪ್ಪನೆಯದಾರ ಬಿಳಿ ಚುಕ್ಕೆಗಳಂತೆ ಉದ್ದನೆಯ ಅಕ್ಕಿ ಕಾಳಿನಂತೆ ಗೋಚರಿಸುತ್ತವೆ. ಯಾವ ತಾಂತ್ರಿಕ ವಸ್ತುವಿನ ಸಹಾಯವಿಲ್ಲದೆ ನೀಟಾದ ಗೆರೆಗಳ ಮಾರ್ಗದಿಂದ ಕೌದಿ ಕಸೂತಿ ನಿರ್ಮಾಣವಾಗುತ್ತದೆ.

ಕೌದಿಗಳಲ್ಲಿ ದೊಡ್ಡವರ ಕೌದಿ, ಚಿಕ್ಕವರ ಕೌದಿ, ಅಲಂಕಾರ ಕೌದಿ, ಅಲಂಕಾರಿಕೇತರ ಕೌದಿ, ಪೂಜೆಯ ಕೌದಿ ಎಂಬ ನಮೂನೆಗಳಿವೆ. ಡಾ.ಎಸ್.ಸಿ.ಪಾಟೀಲರು ಶೋಧ ಮಾಡಿರುವ ಶೇಷಗಿರಿ ಗ್ರಾಮದಲ್ಲಿ ಪೂಜೆಗೊಳ್ಳುವ ಕೌದಿಯನ್ನು ಗಮನಿಸಬಹುದು.

ಇಂದಿಗೂ ಹುಬ್ಬಳಿಯ ಶ್ರೀ ಸಿದ್ಧಾರೂಢ ಮಠದಲ್ಲಿ ಕೌದಿಯ ಪೂಜೆ ನಡೆಯುತ್ತಿದೆ. ಕೌದಿಯ ಹೃದಯ ನರ ನಾಡಿಯೇ ದಾರವಾಗಿದೆ. ಆ ದಾರ ಕಲಾತ್ಮಕವಾಗಿ ನಿಂತು ಕಸೂತಿಯಾಗಿದೆ.

ಸುಂದರ ಗಾತ್ರದ ಬಣ್ಣ ಬಣ್ಣದ ಅರಿವೆಯ ತುಕಡಿಗಳನ್ನು ತೆಳುವಾದ ಅರಿವೆಯ ಮೇಲ್ಪದಿಗೆ ದಾರದ ಸಹಾಯದಿಂದ ಜೋಡಿಸುವಲ್ಲಿ ದಾರವೂ ತನ್ನತನ ಮರೆದು ಕೌದಿ ಕಸೂತಿಯಾಗಿ ಕಂಗೊಳಿಸುತ್ತದೆ.

ಬಿಜಾಪುರದ ಶ್ರೀ ಸಿದ್ದೇಶ್ವರ ಕಲಾಮಂದಿರದ ಉಪನ್ಯಾಸಕರಾದ ಶ್ರೀ ಪೊನ್ನಪ್ಪ ಕಡೇಮನಿ ಯವರ ತಾಯಿಯವರು ಉತ್ತರ ಕರ್ನಾಟಕದ ಕೌದಿಗಳ ನಿರ್ಮಾಣದಲ್ಲಿ ಸಿದ್ಧ ಹಸ್ತರು. ಕೈ ಕೆಲಸದ ಸೂಕ್ಷ್ಮ ಹೊಲಿಗೆಗಳ ಮುಖಾಂತರ ಸುಂದರ ಬಣ್ಣದ ಅರಿವೆಯ ತುಕಡಿಗಳು ಒಂದು ರೂಪಧರಿಸಿ ನಿಂತಾಗ ನೋಡುಗರ ಗಮನ ಸೆಳೆಯುತ್ತವೆ.

ಕೌದಿ ಮೊದಲ ರೂಪ ತಾಳಿದ್ದು ಬಡ ಜನರ ಹಾಸಿಗೆ ಹೊದಿಕೆಯಾಗಿ. ಕೌದಿಯನ್ನು ಕಂಡಾಗ ಸಾತ್ವಿಕ, ಸಾದು, ವಿಶಾಲ ಗುಣಗಳ ಭಾವ ಹೊರಬೀಳುತ್ತವೆ. ದೊಡ್ಡ ಗಾತ್ರದ ಕೌದಿ, ಚಿಕ್ಕಮಕ್ಕಳಿಗೆ ಹಾಸುವ, ಹೊದಿಸುವ ಕೌದಿ, ಮಧ್ಯಮ ವಯಸ್ಕರ ಮಧ್ಯಮ ಗಾತ್ರದ ಕೌದಿಗಳು ಎಂಬ ಅನೇಕ ವಿಭಾಗಗಳನ್ನು ಮಾಡಬಹುದು.

ಕೌದಿ ಕಸೂತಿಗೆ ಮೂಲವೇ ದಾರ. ಈ ಮಾಧ್ಯಮವು ದಟ್ಟವಾದ ಬಟ್ಟೆಗಳನ್ನು ಚನ್ನಾಗಿ ಗಟ್ಟಿಯಾಗಿ ಅಂಟಿಸುತ್ತದೆ. ಈ ಬಣ್ಣದ ಅರಿವೆಯ ತುಕಡಿಗಳು ಮೊದಮೊದಲು ವಿಶಿಷ್ಟ ವಾದ ರೂಪ ತಳೆಯದೇ ಕೈಗೆ ಸಿಕ್ಕದ್ದನ್ನು ಹಚ್ಚುತ್ತಾ ಹೋಗುತ್ತಿದ್ದರು. ಆ ಕೌದಿಯನ್ನು ಹೊದ್ದು ಮಲಗಿದವರ ಕಡೆಗೆ ನೋಡಿದಾಗ ಅದೊಂದು ಆಧುನಿಕ ಕಲಾಕೃತಿಯಂತೆ ಕಂಡುಬರುತ್ತದೆ. ಇಲ್ಲಿ ಸೂಕ್ಷ್ಮವಲ್ಲದ ದೂರ ದೂರ ಹಾಕಿದ ದಾರದ ಹೊಲಿಗೆಗಳು ಬರ ಬರುತ್ತಾ ಸೂಕ್ಷ್ಮತೆ ಎಡೆಗೆ ಹೊರಟು ಕೌದಿ ಒಂದು ಸುಂದರ ಹಾಗೂ ಉಪಯುಕ್ತ ವಸ್ತು ವಾಗಿ, ಚಳಿಗಾಲದಲ್ಲಿ ಬೆಚ್ಚನೆಯ ಹೊದಿಕೆಯಾಗಿಯೂ ರೂಪ ಪಡೆದಿದೆ.

ಗೃಹಣಿ ತನ್ನ ಪ್ರಸೂತಿ ಮುಗಿಸಿಕೊಂಡು ಗಂಡನ ಮನೆಗೆ ಮಗುವನ್ನು ಕರೆದುಕೊಂಡು ಹೋಗುವಾಗ ಹಾಡುವ ಹಾಡು,

ತೊಟ್ಟಿಲು ಹೊತ್ಕೊಂಡು ತೌರ್ಬಣ್ಣ ವುಟ್ಕೊಂಡು
ತಿಟ್ಟ ಹತ್ತಿ ತಿರುಗಿ ನೋಡ್ಯಾಳ ...... ನನ ಮಗಳು
ತೌರ್ಮನೀಯ ಬಳ್ಳಿ ಹಬ್ಬಲೆಂದು ಹರಿಸ್ಯಾಳ ......

ಎಂಬ ತ್ರಿಪದಿಯನ್ನು ನೋಡಿದಾಗ ಮಗುವಿಗೆ ಹಾಸಲು, ಹೊದಿಯಲು ಮಾಡಿದ ಕಸೂತಿ ಕೌದಿಗಳ ತೌರ್ಬಣ್ಣ ರಮ್ಯವಾಗಿರುತ್ತದೆ. ಚಿಕ್ಕಗಾತ್ರದ ಚೊಕ್ಕಬಣ್ಣಗಳ ಸಾಧಾರಣ ತೆಳುವಾದ ಕೌದಿ ಸೂಕ್ಷ್ಮ ಹೊಲಿಗೆಗಳಿಂದ ಅಲಂಕೃತವಾಗಿರುತ್ತದೆ. ನಾಲ್ಕು ಮೂಲೆಗಳು ಚಿಕ್ಕ ಅರಿವೆಯ ಗೊಂಡೆಗಳಿಂದ ಕಂಗೊಳಿಸುತ್ತದೆ.

ಶ್ರೀಮತಿ ಕಡೆಮನಿಯವರ ಬಗಲ ಚೀಲ, ಹೊದಿಯುವ ಕೌದಿ ಕಸೂತಿಗಳು ಇತ್ತಿತ್ತಲಾಗಿ ತಮ್ಮ ಕ್ಷೇತ್ರವನ್ನು ಬೆಳೆಸಿಕೊಂಡಿವೆ.

ಸೋಫಾ ಹಾಗೂ ಕುರ್ಚಿಯ ಆಸನದ ಕೆಳಭಾಗ ಹಾಗೂ ಟೀವಿ ಕವರ್ ಮತ್ತು ಟೇಬಲ್ ಕ್ಲಾಥ್‌ಗಳಾಗಿ ಕಂಗೊಳಿಸತೊಡಗಿವೆ.

ಈ ಕಸೂತಿಯ ವಸ್ತುಗಳು ದಂಡೆಗೆ ಗಟ್ಟಿಯಾದ ಬಟ್ಟೆಯ ತುಣುಕುಗಳನ್ನು ಉಪಯೋಗಿಸುತ್ತಾರೆ. ಬಟ್ಟೆಯ ಗಟ್ಟಿ ದಡಿಯಿರುವ ದಟ್ಟ ಬಣ್ಣದ ಅರಿವೆಗಳನ್ನು ದಂಡೆಗೆ ಹಚ್ಚಿಕೊಂಡು ನಡುವೆ ಅನೇಕ ಸುಂದರ ಆಕಾರಗಳನ್ನು ಮೂಡಿಸುವ ಹಾಗೆ ಅರಿವೆಯ ತುಕಡಿಗಳನ್ನು ಹೊಲಿಯುತ್ತಾರೆ.

ಭೂಮಿತಿಯ ಅಲಂಕಾರಿಕ ರೂಪಗಳಾದ ತ್ರಿಕೋನ ಚೌಕ, ವರ್ತುಲ, ಅರ್ಧ ವರ್ತುಲ ಮುಂತಾದ ರೂಪಗಳು ಕಾಣುತ್ತವೆ. ಆ ದಟ್ಟ ವರ್ಣದ ಬಟ್ಟೆಗಳ ಮೇಲೆ ದಾರ ಮಾತ್ರ ಸೀದಾ, ಅಡ್ಡವಾಗಿ, ಅಥವಾ ಗುಬ್ಬಿ ಕಾಲುಗಳಂತೆ ಹಾಕಿ ಗಟ್ಟಿಗೊಳಿಸುತ್ತಾರೆ.

ಕೌದಿಯ ಮಧ್ಯದಲ್ಲಿ ತೇರಿನ ಹಾಗೂ ಕಾಲು ಮಡಿಚಿ ಕುಳಿತ ಬಸವಣ್ಣನ, ಈಶ್ವರ ಲಿಂಗದ ಆಕಾರಗಳನ್ನು ಬಟ್ಟೆಯಲ್ಲಿ ಕತ್ತರಿಸಿಕೊಂಡು ದಾರದ ಕಸೂತಿಯ ಮುಖಾಂತರ ಸ್ಥಿರಗೊಳಿಸುತ್ತಾರೆ. ಕೆಲ ಸಂದರ್ಭದಲ್ಲಿ ಪ್ರಾಣಿ, ಪಕ್ಷಿಗಳಾದ, ಚಿಗರಿ, ಮೊಲ, ನವಿಲು, ಬಾತುಕೋಳಿಗಳನ್ನು ಕೂಡಾ ಕತ್ತರಿಸಿಕೊಂಡು ತಂದು ದಪ್ಪನೆಯ ಲ್ಯಾವಿಯ ಮೇಲೆ ಹಚ್ಚಿಕೊಂಡು ದಾರದಿಂದ ಚಿಕ್ಕ, ಚಿಕ್ಕ ಟಿಬ್ಬೆಗಳಿಂದ ಕೌದಿಯನ್ನು ರಚಿಸಿದ್ದಾರೆ.

ದಟ್ಟ ಬಣ್ಣದ ಬಟ್ಟೆಯ ಮೇಲೆ ಬಿಳೆ ಬಣ್ಣದ ದಾರ ಗಾಢವಾಗಿ ಕಂಡರೆ ತೆಳುವಾದ ಹಾಗೂ ಅತೀ ತೆಳುವಾದ ಬಣ್ಣದ ಬಟ್ಟೆಯ ಮೇಲೆ ಮಧ್ಯಮ ಹಾಗೂ ತಿಳಿಗಾತ್ರದಲ್ಲಿ ಕಾಣುವ ಬಿಳೆ ಕಸೂತಿ ದಾರ ಆಧುನಿಕ ಕಲಾವಿದನ ಕಲಾಕೃತಿಯ ರೂಪಗಳಂತೆ ಕಾಣುತ್ತದೆ. ಪೂರ್ತಿಯಾದ ಕೌದಿ ಕಸೂತಿಯು ಒಂದು ಕೋಲಾಜ ಕೃತಿಯಂತೆ ಆಧುನಿಕ ಪೈಂಟಿಂಗ್‌ನಂತೆ ಕಾಣಿಸುತ್ತದೆ.

ಭಾರತೀಯರ ಆಧ್ಯಾತ್ಮಿಕ ಭಾವನೆಗಳ ಸರಳತೆಯನ್ನು ವಿಶಾಲತೆಯ ಮಾಧ್ಯಮದಿಂದ ಸದಾ ಮೆರೆಯಿಸುತ್ತಿದೆ. ಈ ಕಸೂತಿ ಕೌದಿಗಳು ಕೌದಿಯ ಮೇಲೆ ಕಂಡ ಹೊಲಿಗೆಯ ಟಿಬ್ಬಿಗಳೇ ಕಸೂತಿಗೆ ಕಸರತ್ತಾಗಿದೆ.

ಗುಬ್ಬಿ ಚೆಟ್ಟಿನಲ್ಲಿ ಕಸೂತಿ : ತೊಟ್ಟಿಲಿನ ನಾಲ್ಕು ಹಗ್ಗಗಳಿಗೆ ಆಯತಾಕಾರದ "ಗುಬ್ಬಿ ಚೆಟ್ಟ"ನ್ನು ಕಟ್ಟುತ್ತಾರೆ. ಆ ಗುಬ್ಬಿ ಚೆಟ್ಟಿನಲ್ಲಿ ಬಣ್ಣ ಬಣ್ಣದ ತ್ರಿಕೋನಾಕಾರದ ಬಟ್ಟೆಯನ್ನು ಪೂರ್ತಿ ಹೊಲಿಯದೆ ಮೂಲೆಯಲ್ಲಿ ಸ್ವಲ್ಪವನ್ನು ಬಿಟ್ಟು ಆ ತ್ರಿಕೋನವನ್ನು ಆ ಬಿಡಿಭಾಗದ ಮಾಧ್ಯಮದಿಂದ ತಿರುಗಿಸಿ ಅದರಲ್ಲಿ ಅರಳೆ ತುಂಬಿ ನಂತರ ಆ ಬಾಯ್ಬಿಟ್ಟ ಭಾಗವನ್ನು ಸೂಜಿಯ ಸಹಾಯದಿಂದ ಹೊಲಿಯುತ್ತಾರೆ. ಅದಕ್ಕೆ ಕಲ್ಲಮುತ್ತು, ಹಾಲುಮುತ್ತ, ಟಿಕಳಿಗಳನ್ನು ಹಚ್ಚಿ ಸೂಜಿಯಿಂದ ದಾರದ ಸಹಾಯದಿಂದ ಗುಬ್ಬಿಗಳನ್ನು ತಯಾರಿಸಿ ಆ ಗುಬ್ಬಿಯ ಬೆನ್ನಿನ ಮೇಲೆ ಸಮತೋಲದ ಸ್ಥಾನದಲ್ಲಿ ದಾರವನ್ನು ಸೂಜಿಯ ಸಹಾಯದಿಂದ ಅರಿವೆಯ

ಟಿಬ್ಬಿಗೆ ಸೂಜಿಯ ಸಹಾಯದಿಂದ ಜೋತಾಡುವ ಹಾಗೆ ಹೊಲಿಯುತ್ತಾರೆ. ಈ ತೆರನಾದ ಅನೇಕ ಗುಬ್ಬಿಗಳನ್ನು ಜೋತು ಬಿಡುತ್ತಾರೆ. ಟಿಬ್ಬಿನ ಬಾರ್ಡರ್‌ನ್ನು ಕಾಜಿನ ಕೊಳವೆ ಹಾಗೂ ಮುತ್ತು ಹಾಗೂ ಗೊಂಡೆಗಳಿಂದ ಅಲಂಕರಿಸುತ್ತಾರೆ.

ತೊಟ್ಟಿಲು ತೂಗುವಾಗ ಗುಬ್ಬಿ ಚೆಟ್ಟಿನಲ್ಲಿರುವ ಗುಬ್ಬಿಗಳು ನೀಲಾಕಾಶದಲ್ಲಿ ಏಕಕಾಲಕ್ಕೆ ಒಂದೆಡೆ ಹಾರಿಹೋಗುವಂತೆ ಕಾಣುತ್ತವೆ. ಗುಬ್ಬಿಚ್ಚಿಯ ಆಕಾರ ಧ್ವನಿಯನ್ನೆ ಕೇಳದೇ ಮಗು ಕೇವಲ ಹೊಯ್ದಾಡುವದನ್ನು ನೋಡಿ ಆನಂದಿಸಬಹುದು.

ಗುಬ್ಬಿ ಚೆಟ್ಟಿನಲ್ಲಿ ಮಧ್ಯಮಧ್ಯ ದುಂಡಾದ ಹಣ್ಣಿನ ಹಾಗೆ ಕಾಣುವ ಮುತ್ತಿನ ಹೆಣಿಕೆಯ ಕಸೂತಿಯ ದುಂಡುಗಳನ್ನು ತೂಗಿ ಹಾಕಿರುತ್ತಾರೆ. ಚಿಕ್ಕ ಸೂಜಿಯ ಸಹಾಯದಿಂದ ಹಾಲು ಮುತ್ತಿನ ಮಣಿಗಳಿಂದ ಗುಬ್ಬಿಯ ಕೊರಳ ಗೆರೆ ಪಕ್ಕದಗೆರೆ ಹಾಗೂ ಕಣ್ಣುಗಳ ಕಸೂತಿ ಮಾಡಿರುತ್ತಾರೆ.

**ಕುಲಾಯಿ ಕುಂಚಿಗೆಗಳ ಮೇಲೆ ಕಸೂತಿ**

ಚಂದ್ರಕಾಳಿ ಸೀರೆಯಂತೆಯೇ ಮೊದಲು ನೂಲಿನ ದಟ್ಟ ನೀಲಿ ಅಥವಾ ಕಪ್ಪು ಬಟ್ಟೆಯ ಮೇಲೆ ರೇಷ್ಮೆ ದಾರದಿಂದ ಕಸೂತಿ ಹಾಕಿರುವುದನ್ನು ಶತಮಾನಗಳ ಪೂರ್ವದಿಂದ ಹಿಡಿದು ಕಳೆದ ಮುವತ್ತು ವರ್ಷಗಳವರೆಗೆ ನೋಡ ಸಿಗುತ್ತಿದ್ದವು.

ಈ ತೆರನಾದ ಕುಂಚಿಗೆ ಕುಲಾಯಿಗಳು ಬರಬರುತ್ತಾ ಮಖಮಲ್‌ದ ಮೆತ್ತನೆಯ ನೀಲಿ, ಕಂದಿ, ಕೆಂಪು, ವರ್ಣದ ಬಟ್ಟೆಗಳ ಮೇಲೆ ಕಸೂತಿ ಕಾರ್ಯ ಜಯಭೇರಿ ಹೊಡೆದಿದೆ. ಕುಂಚಿಗೆ ಕೇವಲ ತಲೆಯ ಭಾಗವನ್ನು ಅಲಂಕಾರಗೊಳಿಸಿದರೆ, ಕುಲಾಯಿ ತಲೆಯಿಂದ ಕೆಳಗಡೆ ಭುಜಗಳ ಕೆಳಗಿನವರೆಗೆ ಬೆನ್ನಿನ ಭಾಗವನ್ನು ಅಲಂಕರಿಸುತ್ತದೆ.

ಸಾಂಪ್ರದಾಯಿಕ ಕುಂಚಿಗೆ ಕುಲಾಯಿಗಳಲ್ಲಿ ಪ್ರಾಣಿ ಪಕ್ಷಿಗಳ ಅಲಂಕಾರಿಕ ರೂಪಗಳು ಹಾಗೂ ಹೂಬಳ್ಳಿಗಳ ಸುಂದರ ರೂಪಗಳಲ್ಲಿ ರೇಷ್ಮೆಯ ದಾರಗಳು ನೋಡುಗರ ಮನವನ್ನು ರಂಜಿಸುತ್ತವೆ.

ನಂತರದ ದಿನಗಳಲ್ಲಿ ಮುತ್ತಗಳು ಮುಂಚೂಣಿಯಲ್ಲಿ ನಿಂತು ಕುಂಚಿಗೆ ಕುಲಾಯಿಗಳ ಕಸೂತಿ ಕಲೆಯನ್ನು ಮುಂದುವರಿಸಿದವು. ಆ ದಟ್ಟವಾದ ಮಖಮಲ್ ಬಟ್ಟೆಗಳ ಮೇಲೆ ಕಲ್ಮುತ್ತು, ಸಾದಾಮುತ್ತು ಹಾಲ್ಮುತ್ತುಗಳು ನೈಸರ್ಗಿಕ ಅಲಂಕಾರಿಕ ರೂಪಗಳಲ್ಲಿ ರಾರಾಜಿಸ ತೊಡಗಿದವು. ಮುತ್ತಿನ ಕಸೂತಿ ಕಲೆ ಮೆರಗು ಪಡೆಯತೊಡಗಿತು. ಪ್ರತಿಯೊಬ್ಬ ಮಹಿಳೆ ತವರುಮನೆಯಲ್ಲಿ ಬಾಣಂತನ ಮುಗಿಸಿಕೊಂಡು ತೊಟ್ಟಿಲು ತೆಗೆದುಕೊಂಡು ಹೋಗುವಾಗ ಇಂತಹ ನಾಲ್ಕಾರು ಕುಲಾಯಿಗಳನ್ನು ತಯಾರಿಸಿ ಒಂದನ್ನು ಮಗುವಿನ ತಲೆಗೆ ಅಲಂಕಾರಿಕ ವನ್ನಾಗಿಸಿದರೆ ನಾಲ್ಕು ಕುಲಾಯಿಗಳು ತೊಟ್ಟಿಲದ ನಾಲ್ಕು ಮೂಲೆಗಳಲ್ಲಿ ನಾಲ್ಕು ಕುಲಾಯಿ ಗಳು ತೊಟ್ಟಿಲನ್ನು ಅಲಂಕರಿಸುತ್ತವೆ.

ದಟ್ಟ ಬಣ್ಣದ ಹಿನ್ನೆಲೆಯ ಮೇಲೆ ಅಚ್ಚ ಬಿಳಿ ಬಣ್ಣದ ಮುತ್ತುಗಳು ಅಥಾವ ಸುವರ್ಣ ಬಣ್ಣದ ಕಂದಿ ಮುತ್ತುಗಳು ನೋಡುಗರನ್ನು ಆಕರ್ಷಿಸುತ್ತವೆ. ಕೆಲವು ಸಲ ಬಣ್ಣದ ಹಾಲು ಮುತ್ತು ಗಳಿಂದ ಅಲಂಕರಿಸುತ್ತಾರೆ. ಹಾಲು ಮುತ್ತುಗಳು ಕಸಕಸಿಯ ನಾಜೂಕ ನುಣುಪು ಎದ್ದು ಕಾಣುತ್ತವೆ. ಕೆಂಪು ಹಸಿರು, ಹಳದಿ, ಹಾಗೂ ಬಿಳಿಬಣ್ಣದ ಹಾಲ್ಮುತ್ತುಗಳು ಅತೀ ಚಿಕ್ಕ ಸೂಜಿಯಿಂದ ಹಾಯ್ದು ಕುಲಾಯಿ ಕುಂಚಿಗೆಯನ್ನು ಅಲಂಕರಿಸಿದರೆ ಆ ತಾಯಿಯ ಆನಂದಕ್ಕೆ ಪಾರವೇ ಇಲ್ಲ.

ಈ ತೆರನಾದ ಕುಂಚಿಗೆ ಕುಲಾಯಿಗಳು ಕೇವಲ ಮಗುವಿನ ಅಲಂಕಾರವನ್ನು ಹೆಚ್ಚಿಸು ವುದಿಲ್ಲ. ಛಳಿಗಾಲದಲ್ಲಿ ಛಳಿಯನ್ನು ತಡೆಯುತ್ತಾ ಬೇಸಿಗೆಯಲ್ಲಿ ಬಿಸಿಲಿನ ತಾಪ ತಡೆಯುತ್ತಾ ಮಗುವನ್ನು ಹುಣ್ಣಿಮೆಯ ಚಂದ್ರನಂತೆ ಬೆಳಗಿಸುತ್ತವೆ.

### ಝೂಲದ ಕಸೂತಿ

ಕೃಷಿ ಪ್ರಧಾನವಾದ ಗ್ರಾಮಗಳ ದೇಶ ನಮ್ಮದು. ಚಿಕ್ಕ ಹಿಡುವಳಿಗಾರನಿಗೆ ಎರಡೆತ್ತುಗಳು ಭಾಗ್ಯದ ಬಾಗಿಲೇ ಆಗಿರುತ್ತವೆ. ಇವುಗಳನ್ನು ಪ್ರತಿ ಸೋಮವಾರ ಹಾಗೂ ಅಮವಾಸ್ಯೆಗೆ ಮೈತೊಳೆಯುವದು, ಪೂಜೆ ಮಾಡುವುದು ಸರ್ವೆಸಾಮಾನ್ಯ. ಈ ಎತ್ತುಗಳಿಗೆ ತನ್ನಂತೆಯೆ ಬಟ್ಟೆತೊಡಿಸಿ ರೈತ ಆನಂದ ಪಡುತ್ತಾನೆ. ಆ ಎತ್ತುಗಳ ಮೈಮೇಲೆ ಹಾಕುವ ಬಟ್ಟೆಗೆ ಝೂಲಾ ಎಂದು ಅನ್ನುವರು. ಈ ಝೂಲಾ ಸಾಧಾರಣ ಬಟ್ಟೆ ಯಲ್ಲ. ಇದು ತುಂಬಾ ಕಸೂತಿಯ ಅಲಂಕಾರದಿಂದ ಕಂಗೊಳಿಸುತ್ತದೆ. ಮಧ್ಯದಲ್ಲಿ ಆ ಬಸವಣ್ಣನ ಎತ್ತಿನ ಇಣೆ ಬರುವ ಹಾಗೆ ಝೂಲಾವನ್ನು ಕತ್ತರಿಸಿ ದಂಡೆಯನ್ನು ಹೊಲಿದು ಕಸೂತಿಯ ಅಲಂಕಾರಿಕ ರೂಪಗಳಾದ ಹೂವು ಬಳ್ಳಿ, ನಕ್ಷೆಗಳನ್ನು ಬಣ್ಣದ ನೂಲಿನ ದಾರಗಳಿಂದ ಹಾಕಿರುತ್ತಾರೆ. ವಿಶೇಷವಾಗಿ ಬಸವ ಜಯಂತಿ, ಮಣ್ಣೆತ್ತಿನ ಅಮವಾಸ್ಯೆ, ಕಾರಹುಣ್ಣಿಮೆಗಳಲ್ಲಿ ಹಾಗೂ ಜಾತ್ರೆಗೆ ಬಂಡಿ ಕಟ್ಟಿಕೊಂಡು ಹೊಗುವಾಗ, ವಿಶೇಷ ಹಬ್ಬ, ಉತ್ಸವಗಳಲ್ಲಿ ಎತ್ತುಗಳಿಗೆ ಕಲಾತ್ಮಕ ಕಸೂತಿಯ ಝೂಲಾ ಹಾಕುತ್ತಾನೆ.

ಝೂಲಾಗಳ ಮೇಲೆ ವಿಶೇಷವಾಗಿ ಶಿವಲಿಂಗ ಪರಮೇಶ್ವರ, ಓಂಕಾರ, ಗಿಳಿಗಳು ಮುಂತಾದ ಆಕೃತಿಗಳನ್ನು ದಾರದಿಂದ ಹಾಕಿರುತ್ತಾರೆ. ಹಿನ್ನೆಲೆ ದಪ್ಪನೆಯ ಬಟ್ಟೆ ಅದರ ಮೇಲೆ ಬಣ್ಣದ ದಾರಗಳಿಂದ ಸೂಜಿಯ ಮಾಧ್ಯಮದಿಂದ ಕಸೂತಿ ಹಾಕಿರುತ್ತಾರೆ. ಇತ್ತೀಚೆಗೆ ಮಶಿನ್ ಎಂಬ್ರಾಯಡರಿಗಳ ಮುಖಾಂತರ ಕಸೂತಿ ಹಾಕುವ ಕಾರ್ಯ ನಡೆದಿದೆ. ಅಲ್ಲಲ್ಲಿ ಕಾಜಿನ ತುಕಡಿಗಳನ್ನು ಬಳುಸುತ್ತಾರೆ.

### ಬಾರಕೋಲ ಗುಣಿಯ ಕಸೂತಿ

ರೈತನಿಗೆ ಹೆಗಲ ಮೇಲೆ ಅಲಂಕಾರಮಯವಾಗಿ ಕುಳಿತಿರುವ ಬಾರಕೋಲ ರೈತನಿಗೆ ಭೂಷಣ. ಬಾರಕೋಲನ್ನು ಪ್ಲಾಸ್ಟಿಕ್ ದಾರದ ಮಾಧ್ಯಮದಿಂದ ಕಸೂತಿ ಹಾಕಿ ಅಲಂಕಾರ ಮಯವನ್ನಾಗಿಸುತ್ತಾರೆ.

ದಾರಗಳ ಮಾಧ್ಯಮದಿಂದ ಬೆಳ್ಳಿ ಹಾಗೂ ಕಳ್ಳಿಗೆಯ ಕೋಲುಗಳನ್ನು ಕಸೂತಿಯಿಂದ ಅಲಂಕಾರಿಸುತ್ತಾರೆ. ಈ ಬಾರಕೋಲಗಳನ್ನು ಹಿಡಿದು ಹಲಗೆಯ ತಾಳಕ್ಕೆ ಹೆಜ್ಜೆ ಮೇಳಗಳಲ್ಲಿ ರೈತರು ಕುಣೆಯುತ್ತಾರೆ. ಇಲ್ಲಿ ಕಸೂತಿಯ ಕಲಾತ್ಮಕತೆ ನೃತ್ಯ ವಿನ್ಯಾಸದೊಂದಿಗೆ ಇನ್ನಷ್ಟು ಕಲಾತ್ಮಕವಾಗಿ ಕಾಣಿಸುತ್ತದೆ. ಉತ್ತರ ಕರ್ನಾಟಕದಲ್ಲಿ ಇದು ವಿಶೇಷವಾಗಿ ಕಂಡುಬರುತ್ತದೆ.

**ಕಸೂತಿ ಕಲಾವಿದೆ :** ಗುಳೇದಗುಡ್ಡದ ಶ್ರೀಮತಿ ಉಮ್ಮವ್ವಾ ವಿರೂಪಾಕ್ಷಪ್ಪ ಹಗ್ಗದ ಅವರು ಚಂದ್ರಕಾಳಿ ಸೀರೆಗೆ ಕಸೂತಿ ಹಾಕುವುದರಲ್ಲಿ ಅಪ್ರತಿಮ ಕೌಶಲ್ಯ ಪ್ರದರ್ಶಿಸಿದ್ದಾರೆ. ಇಂದು ೮೫ ರ ಇಳಿವಯಸ್ಸಿನಲ್ಲಿರುವ ಅವರು ತಮ್ಮ ಸುದೀರ್ಘ ಜೀವನದಲ್ಲಿ ಸಾಕಷ್ಟು ಸೀರೆಗಳಿಗೆ ಕಸೂತಿ ಹೆಣಿಕೆ ಹಾಕಿಕೊಟ್ಟಿದ್ದಾರೆ. ಶ್ರೀಮತಿ ಹಗ್ಗದ ಅವರಂತೆ ಗುಳೇದಗುಡ್ಡದಲ್ಲಿ ಚಂದ್ರಕಾಳಿ ಸೀರೆಗೆ ಕಸೂತಿ ಹಾಕುವುದರಲ್ಲಿ ಪರಿಣಿತರಾಗಿರುವವರಲ್ಲಿ ಇನ್ನೂ ಹಲವರಿದ್ದಾರೆ. ಶ್ರೀಮತಿಯರಾದ ಶೇಷವ್ವ ಶ್ರೀಶೈಲಪ್ಪ ಪತ್ತಾರ, ಇಂದ್ರವ್ವ ಸುರೇಬಾನ, ಶಾಂತವ್ವ ಬಸಪ್ಪ ಗೋಟ, ಶಿವಗಂಗವ್ವ ಗುಂಡಪ್ಪ ಬಳಿಗೇರ, ನಾಗವ್ವ ಗೊಂದಳೆ, ತಿಪ್ಪವ್ವ ಅಡಿವೆಪ್ಪ ಬೆನಕಿನಾಳ, ರೇಣುಕಾ ಈಶ್ವರ ಗಂಜಿಹಾಳ ಮುಂತಾದವರನ್ನು ಹೆಸರಿಸಬಹುದು.

ಚಂದ್ರಕಾಳಿ ಸೀರೆಯ ತಯಾರಿಕೆಗೆ ಮುಖ್ಯ ಕಚ್ಚಾವಸ್ತು ಬಣ್ಣ ಬಣ್ಣದ ರೇಷ್ಮೆಯ ಎಳೆಗಳು ಹಾಗೂ ಚಿಕ್ಕ ಗಾತ್ರದ ಸೂಜಿ, ಕಸೂತಿ, ಕಲಾವಿದರ ಬಣ್ಣದ ರೇಷ್ಮೆಯ ಎಳೆಗಳನ್ನು ನೇಕಾರರ ಮನೆಯಿಂದ ತರುತ್ತಾರೆ. ಅವರಲ್ಲಿ ಖಣಗಳ ನೇಯ್ಗೆಯ ಪ್ರಕ್ರಿಯೆಯಲ್ಲಿ ಕೆಲವು ಎಳೆಗಳು ಉಳಿದಿರುತ್ತವೆ. ಅಲ್ಲದೇ ರಾಮದುರ್ಗದಿಂದ ಹಸೆ (ಚಾರಮ್) ರೇಷ್ಮೆ ಎಂದು ಬರುತ್ತಿತ್ತು. ಅದನ್ನು ರೇಷ್ಮೆ ವಿತರಕರಿಂದ ಖರೀದಿಸುತ್ತಿದ್ದರು.

ಚಂದ್ರಕಾಳಿ ಸೀರೆಯ ಅಲಂಕಾರ ಸೂಕ್ಷ್ಮ ಕುಸರಿ ಕೆಲಸವನ್ನು ಹೊಂದಿಕೊಂಡು ದೇವರ ಕಸೂತಿಗಳಿಂದ ಅದರ ಬೆಲೆಯಲ್ಲಿ ವ್ಯತ್ಯಾಸಗಳಿವೆ. ದಡಿ ಸೆರಗು ರೇಷ್ಮೆ ಮಧ್ಯದ ಭಾಗ ಚಮಕದ್ದಾದರೆ ೬೦೦ ರಿಂದ ೮೦೦ ರೂಪಾಯಿ ದಡಿ ಸೆರಗು ಹಾಗೂ ಮಧ್ಯದ ಭಾಗ ಎಲ್ಲವೂ ರೇಷ್ಮೆಯದ್ದಾದರೆ ೮೦೦ ರಿಂದ ೧೨೦೦ ರೂಪಾಯಿ. (೧೯೯೦-೯೫)

ಚಂದ್ರಕಾಳಿ ಸೀರೆಯ ಕಸೂತಿ ಕಲೆ ಕೆಲವರಿಗೆ ಹೊಟ್ಟೆ ಹೊರೆಯುವ ವೃತ್ತಿಯಾದರೆ ಇನ್ನು ಕೆಲವರಿಗೆ ಸಾಂಪ್ರದಾಯಿಕ ಹವ್ಯಾಸವಾಗಿದೆ. ಆಧುನಿಕ ಸೀರೆಗಳಿಗೆ ಈ ಜಾನಪದ ಸೀರೆಗಳು ಪ್ರೇರಣೆ ನೀಡಿರಲೂಬಹುದು. ಶಿಷ್ಟ ಸಾಂಪ್ರದಾಯಿಕ ಆಧುನಿಕ ಸೀರೆಗಳಿಗೆ ಭದ್ರ ಬುನಾದಿಯಂತಿರುವ ಈ ಚಂದ್ರಕಾಳಿ ಸೀರೆಗಳ ಕಸೂತಿ ಕಲೆ ಕಣ್ಮರೆಯಾಗುತ್ತಾ ಬಂದಿದೆ. ಈ ಚಂದ್ರಕಾಳಿ ಸೀರೆ ತನ್ನತನವನ್ನು ಕಾಯ್ದುಕೊಳ್ಳುವುದರೊಂದಿಗೆ ವನಿತೆಯರ ಚೆಲುವಿಗೆ ಮೋಹಕ ಮೆರಗು ನೀಡುವ ದಿಸೆಯಲ್ಲಿ ಮಹತ್ವಪೂರ್ಣ ಪಾತ್ರ ವಹಿಸುತ್ತಿದೆ. ಚಂದ್ರಕಾಳಿ ಸೀರೆಯ ಮೇಲಿರುವ ಬಾಲಕ್ಕೆ ಗಂಟೆ ಕಟ್ಟಿಕೊಂಡು, ಕೈಯಲ್ಲಿ ಸಂಜೀವಿನಿ ವನಸ್ಪತಿ ಪರ್ವತ ಹೊತ್ತುಕೊಂಡ ಹನುಮಂತ ಸೀರೆಗೆ ಪಾವಿತ್ರ್ಯತೆ ಗೌರವವನ್ನು ಕೊಡುವ ಸಂಪ್ರದಾಯಬದ್ಧ ಕಸೂತಿ ಇದಾಗಿದೆ.

**ಕಂಬಳಿಯ ಮೇಲೆ ಕಸೂತಿ :** ದೇಶಿ ಕಸೂತಿಯ ಹಾಗೂ ಗುಳೇದಗುಡ್ಡದ ಖಣಗಳ ಮೇಲಿರುವ ಸುಂದರ ಚಿತ್ತಾರಗಳು ರೈತಾಪಿ ಜನರ ಮನ ಕದಡಿದವು. ನಗರಗಳು ಗ್ರಾಮಗಳಲ್ಲಿ ಜೀವಿಸುವ ಕೃಷಿಕನ ಆಧಾರದ ಮೇಲೆ ಆಹಾರ ಎನ್ನುವ ಅವಶ್ಯಕ ವಸ್ತುವನ್ನು ಪೂರೈಸಿ ಕೊಂಡವು. ಕೃಷಿಕನ ರಕ್ಷಣೆಯ ವಸ್ತು ಕಂಬಳಿ ಆ ಕಂಬಳಿಯು ಬರಿ ಕಪ್ಪು ವರ್ಣದ್ದೇಕೆ ಎಂಬ ಭಾವನೆ ಕೃಷಿಕನ ಅರ್ಧಾಂಗಿನಿಯದಾಗಿರಲೇಬೇಕು. ಆ ಭಾವನೆಯೇ ಶೃಂಗಾರದ ಸೌಂದರ್ಯ ಪ್ರಜ್ಞೆಯ ಮೊಳಕೆ ಒಡೆದು ಕಂಬಳಿಯ ಕಸೂತಿಯಾಗಿ ಮಾರ್ಪಟ್ಟಿತು.

ಕೃಷಿ ಪ್ರಧಾನವಾದ ಕುಟುಂಬದಲ್ಲಿ ಜನಿಸಿದ ಈರವ್ವ ಧಾರವಾಡದ ಕಾಮನ ಕಟ್ಟಿ ಗೌಡರ ಓಣಿಯಲ್ಲಿ ಜೀವಿಸುತ್ತಿದ್ದಳು. ದಿವಂಗತ ಈರವ್ವ ತಮ್ಮ ಬಿಡುವಿನ ವೇಳೆಯಲ್ಲಿ ಕಸೂತಿ ಹಾಕುವ ಹವ್ಯಾಸವನ್ನು ಬೆಳೆಸಿಕೊಂಡು ಬಂದರು. ಬಾಲ್ಯಾವಸ್ಥೆಯಲ್ಲಿ ನೆಯ್ಗೆಯ ಬಟ್ಟೆಯ ತುಂಡುಗಳ ಮೇಲೆ ಸಾದಾ ದಾರದಿಂದ ನಕ್ಷೆಗಳನ್ನು ಹಾಕುವದನ್ನು ರೂಢಿಸಿ ಕೊಂಡವಳು.

ಆ ನಕ್ಷೆಗಳು ಮುದ್ದುಮಕ್ಕಳ ಹಾಗೂ ತಾಯಂದಿರ ಹಾಗೂ ರೈತರ ಮನಸ್ಸನ್ನು ಸೂರೆ ಗೊಂಡವು. ಚಿಕ್ಕಮಕ್ಕಳ ಉಡುಪುಗಳ ಮೇಲೆ ರೇಷ್ಮೆ ದಾರದಿಂದ ನಕ್ಷೆಗಳನ್ನು ಹಾಕಿ ಕೊಡ ಹತ್ತಿದರು. ಅನೇಕ ತಾಯಂದಿರರಿಗೆ ಕಸೂತಿ ಹಾಕಿಕೊಟ್ಟರು.

ಮಕ್ಕಳು ಸ್ತ್ರೀಯರಷ್ಟೆ ಏಕೆ ನಕ್ಷೆಯ ಆನಂದ ಅನುಭವಿಸುವದೆಂದು ದೇಶಕ್ಕೆ ಅನ್ನ ನೀಡುವ ರೈತನನ್ನು ಅಲಂಕಾರ ಮಾಡಿ ನೋಡುವ ಹವ್ಯಾಸದಿಂದ ಧಾರವಾಡದ ದಿವಂಗತ ಶ್ರೀಮತಿ ಈರವ್ವ ಪಾಟೀಲ ಅವರು ಕಂಬಳಿಗಳ ಮೇಲೆ ಕಸೂತಿಯನ್ನು ಮುಂದುವರಿಸಿದರು. ಪ್ರಕೃತಿಯ ಅಲಂಕಾರಿಕ ರೂಪಗಳನ್ನು ಹಾಗೂ ಗುಳೇದಗುಡ್ಡದ ಖಣಗಳನ್ನು ನೋಡಿ ಪ್ರಭಾವಿತಳಾದ ಈರಮ್ಮ ಕಸೂತಿ ಕೃತಿಗಳನ್ನು ನಿರ್ಮಿಸಿಕೊಟ್ಟು ಜನರ ಪ್ರೀತಿಗೆ ಪಾತ್ರಳಾಗಿ ದ್ದಾಳೆ.

ಈ ಕಸೂತಿಗಳಲ್ಲಿ ದಂಡೆಗೆ ದಡಿ ನಕ್ಷೆಯಲ್ಲಿ ಹೂವಿನ ಬಾರ್ಡರ್ ನಕ್ಷೆಗೆ ಬಳಸಿದ ಬಣ್ಣಗಳ ದಾರಗಳನ್ನು ನೋಡಿದಾಗ ಸ್ವಲ್ಪ ಅಂತರದವರೆಗೆ ಒಂದು ಬಣ್ಣ ಬಳಸಿದರೆ ಮತ್ತೊಂದು ಸ್ವಲ್ಪ ಅಂತರದವರೆಗೆ ಮತ್ತೊಂದು ವರ್ಣವನ್ನು ಬಳಸಿದ್ದಾರೆ. ಇದು ಜಾನಪದ ಗತ್ತಿನ ವರ್ಣ ಸಂಯೋಜನೆಯಾಗಿದೆ.

ಕಂಬಳಿ ಕಸೂತಿಯಲ್ಲಿ ಪಕ್ಷಿಗಳ ಸಾಲು, ತೇರುಗಳು, ಮನೆಗಳು, ಈಶ್ವರಲಿಂಗ, ತೇರುಗಳ ಕಳಸ, ಚಿಗರಿ, ಎತ್ತುಗಳು, ಹಗ್ಗದಾಟದ ಹುಡುಗಿ, ಬೇರೆ ಬೇರೆ ತರಹದ ಹೂವು ಗಳನ್ನು ಸುಂದರ ವರ್ಣಗಳಿಂದ ಕಂಬಳಿಯ ಎಳೆಗಳನ್ನು ಮೇಲಕ್ಕೆ ಎತ್ತಿ ಸೂಜಿಯ ಸಹಾಯ ದಿಂದ ಕಸೂತಿ ಹಾಕಿ ದಟ್ಟ ಕಪ್ಪು ವರ್ಣದ ಹಿನ್ನೆಲೆಯ ಮೇಲೆ ಮೂಲ ವರ್ಣಗಳ ದಾರದಿಂದ ಸುಂದರವಾಗಿ ಹೆಣಿಕೆ ಹಾಕಿದ್ದಾರೆ.

ಕೃಷಿಕರಿಗೆ ನಿರಂತರ ಜೊತೆಗಾರನಾಗಿರುವ ಎತ್ತುಗಳನ್ನು ಒಂದೇ ಬಣ್ಣದಲ್ಲಿ ಕಸೂತಿಯ ಮುಖಾಂತರ ಮೂಡಿಸಿದ್ದಾರೆ. ಇದು ಪ್ರಾಣಿ ದಯೆಯನ್ನು ಹಾಗೂ ಕೃಷಿಯನ್ನು ಮೆಚ್ಚುವ ಪ್ರೇರಣೆ ಕೊಡುತ್ತದೆ.

ಹಗ್ಗದಾಟ ಆಡುತ್ತಿರುವ ಹುಡುಗಿ ಹೆಣ್ಣುಮಗಳ ಮಹತ್ವವನ್ನು ಹೊರ ಸೂಸುತ್ತದೆ. ಆ ಹುಡುಗಿಗೆ ಉಡಿಸಿರುವ ಲಂಗ ಮತ್ತು ರವಿಕೆಗೆ ಹಾಗೂ ಮೇಲೆ ಹಾರಾಡುತ್ತಿರುವ ಹಗ್ಗಕ್ಕೆ ವರ್ಣದ ದಾರ ಬಳಸಿದ್ದು ಜಾನಪದ ಶೈಲಿಯದ್ದಾಗಿದೆ. ಶಿವಲಿಂಗದ ಪ್ರಭಾವ ಈ ಕಸೂತಿ ಕಲಾವಿದೆಯ ಮೇಲಾಗಿದೆ. ಚೌರಿ ಬಸವಣ್ಣದೇವರ ಗುಡಿಯ ಪಕ್ಕದಲ್ಲೇ ವಾಸಿಸುತ್ತಿರುವ ಈರವ್ವಳಿಗೆ ಈ ಶಿವಲಿಂಗದ ಪ್ರಭಾವ ಬೀರಿದೆ. ಶಿವಲಿಂಗದ ಕಸೂತಿ ಭಕ್ತಿ ಭಾವವನ್ನು ಜನರಲ್ಲಿ ಒಡಮೂಡಿಸುತ್ತದೆ. ಒಂದೇ ಬಣ್ಣದಲ್ಲಿ ಶಿವಲಿಂಗದ ಚಿತ್ತಾರವನ್ನು ಕಸೂತಿಯಲ್ಲಿ ಮೂಡಿಸಿದ್ದಾಳೆ. ಪ್ರಕೃತಿಯಲ್ಲಿ ಕಂಡುಬರುವ ಅನೇಕ ತರಹದ ಹೂವುಗಳನ್ನು ನೋಡಿ ಅದರ ಪ್ರಭಾವದಿಂದ ಅನೇಕ ಬಣ್ಣದ ರೇಷ್ಮೆ ದಾರಗಳನ್ನು ಬಳಸಿ ಹೂವಿನ ಸಾಲುಗಳನ್ನು ಹೆಣೆ ದಿದ್ದಾಳೆ.

ಕಂಬಳಿಯ ದಂಡೆಗೆ ಹಾಕಿರುವ ಕಸೂತಿಯಲ್ಲಿ ಚಿಕ್ಕ ಮಧ್ಯಮ ದೊಡ್ಡಗಾತ್ರದ ನಕ್ಷೆ ಬಾರ್ಡರ್‌ಗಳು ಎದ್ದುಕಾಣುತ್ತವೆ. ಒಂದೊಂದೆ ಎಳೆಗಳನ್ನು ಸೂಜಿಯ ಸಹಾಯದಿಂದ ಮೇಲಕ್ಕೆ ಎತ್ತಿ ತನಗೆ ಮನಬಂದಂತೆ ಹಾಕಿ ಅದನ್ನೇ ನಿರಂತರವಾಗಿ ಮುಂದುವರೆಸಿಕೊಂಡು ನಕ್ಷೆ ಪೂರ್ತಿ ಮಾಡಿದ್ದು ಕಂಡುಬರುತ್ತದೆ.

ಅಡವಿಯಲ್ಲಿ ಏಕಾಂತದಲ್ಲಿದ್ದ ರೈತ ಮಳೆಗಾಲದಲ್ಲಿ ಛಳಿಗಾಲದಲ್ಲಿ ಈ ನಕ್ಷೆಗಳನ್ನು ನೋಡುತ್ತಾ ಪ್ರೀತಿಯಿಂದ ಮಡಿಚಿ ತನ್ನ ಹೆಗಲ ಮೇಲೆ ಹಾಕಿಕೊಂಡು ಹೋಗುವದನ್ನು ನೋಡಿದರೆ ಕೃಷಿ ವಿಶ್ವವಿದ್ಯಾಲಯದ ಪದವಿ ಪಡೆದು ಸನ್ಮಾನಿತಗೊಂಡ ಕೃಷಿಕನಂತೆ ಕಾಣದೇ ಇರಲಾರನು. ಈ ಕಸೂತಿಗಳು ಗ್ರಾಮೀಣ ಬದುಕಿನಲ್ಲಿ ಸೌಂದರ್ಯ ಹಾಗೂ ಸಹನೆ ಶಾಂತತೆಯ ಶಿಸ್ತಿನ ಸಿಪಾಯಿಯಂತೆ ಪಾತ್ರ ವಹಿಸುತ್ತವೆ. ಸದ್ಯ ಕಂಬಳಿಗಳಲ್ಲಿ ಈ ತೆರನಾದ ಕಸೂತಿ ಕಾಣದೆ ದಡಿ ಮಾತ್ರ ಕಾಣುತ್ತದೆ. ಇದೇ ಶೈಲಿಯಲ್ಲಿ ಎತ್ತುಗಳ ಝೂಲಾಗಳನ್ನು ನಿರ್ಮಿಸಿದ್ದಾರೆ.

**ರಟ್ಟಿನ ಮೇಲೆ ಕಸೂತಿ :** ಈ ದೇಶಿ ಕಸೂತಿಯ ಕಾರ್ಯವನ್ನು ನೋಡಿ ಆ ಸೂಕ್ಷ್ಮ ಎಳೆಗಳನ್ನು ಎತ್ತಿ ಅದರಾಳದಲ್ಲಿ ಸೂಜಿ ಪೋಣಿಸಿ ಹೊರತೆಗೆಯುತ್ತಾ ನಿರ್ಮಿಸುವ ಕ್ರಿಯೆಯನ್ನು ಕಂಡು ಯಾವುದೋ ಒಂದು ಮಷಿನ್ ಕಂಪನಿಯು ಗಟ್ಟಿಯಾದ ರಟ್ಟಿಗೆ ಸೂಕ್ಷ್ಮವಾದ ರಂಧ್ರಗಳನ್ನು ಹಾಕಿಸಿ ಕಸೂತಿ ಕಲೆಯ ಆನಂದವನ್ನು ನೋಡಬಯಸಿರಬಹುದು. ಕಸೂತಿ ಕಲಾವಿದರುಗಳು ಈ ನಯ ನಾಜೂಕಿನ ಸೂಕ್ಷ್ಮವಾದ ರಂಧ್ರಗಳನ್ನು ಉಪಯೋಗಿಸಿ ಕಸೂತಿ ಮಾಡಲು ಪ್ರಯತ್ನಿಸುತ್ತಾ ಸುಂದರವಾದ ಕಸೂತಿ ಕಲೆ ನಿರ್ಮಿಸಿರುವುದು ಕಂಡುಬರುತ್ತದೆ. ಪ್ರಸ್ತುತ ಕಸೂತಿ ಕಲೆ ಧಾರವಾಡದ ಗುಲಗಂಜಿಕೊಪ್ಪದ ಕಾಶೀಬಾಯಿ ಹಿರೇಮಠ ಅವರು

ಅರ್ಧಶತಮಾನದ ಹಿಂದೆ ರಚಿಸಿದ ಕಲಾಕೃತಿ ಇದಾಗಿದೆ. ಜೊತೆಗೆ ಶ್ರೀಮತಿ ಗಂಗಮ್ಮ ಹಿರೇಮಠ ಅವರು ಇದ್ದಾರೆ.

೧.೫ x ೧ ಅಡಿಯ ಈ ರಟ್ಟಿನ ಬಣ್ಣ ತಿಳಿಯಾದ ಕಂದುಬಣ್ಣದ್ದಾಗಿದೆ. ಈ ತಿಳಿ ಕಂದುಬಣ್ಣದ ಮೇಲೆ ದಟ್ಟ ಅಥವಾ ತಿಳಿಯಾದ ಬಣ್ಣಗಳಾದ ಕಸೂತಿ ಹೆಣೆದು ಅದರ ಹೊರ ರೇಖೆಯನ್ನು ಅದೇ ವರ್ಣದ ದಟ್ಟ ಬಣ್ಣದಿಂದ ಹಾಕಲಾಗಿದೆ.

ಆ ರಟ್ಟಿನ ಮೇಲೆ ಹಾಕಲ್ಪಡುವ ಪ್ರಾಣಿಯ ಅಥವಾ ಪಕ್ಷಿಯ ಹೂ ಬಳ್ಳಿಗಳ ರೂಪ ಗಳನ್ನು ಮೊದಲೇ ಮೂಡಿಸಿಕೊಂಡಿರುತ್ತಾರೆ. ನಂತರ ತಮಗಿಷ್ಟವೆನಿಸಿದ ಬಣ್ಣಗಳಿಂದ ಸೂಕ್ಷ್ಮ ವಾದ ಸೂಜಿಯಿಂದ ಮೇಲಿನ ಭಾಗ ಪೂರ್ತಿಯಾಗಿ ಸರಿಯಾಗಿ ಕಾಣುವ ಹಾಗೆ ದಾರದಿಂದ ತುಂಬಿದ್ದು ಗೋಚರಿಸುತ್ತದೆ.

ಪ್ರಸ್ತುತ ದಿವಂಗತ ಕಾಶೀಬಾಯಿ ಹಿರೇಮಠ ಅವರ ರಟ್ಟಿನ ಕಲಾಕೃತಿ "ಕೇಸರಿ" (ಸಿಂಹ) ನೋಡಿಸಿಕೊಳ್ಳುವಂತಹ ಕಲಾತ್ಮಕ ಸಂಯೋಜನೆಯಾಗಿದೆ. ನಾಲ್ಕು ಮೂಲೆಗಳಿಗೆ ಸುಂದರ ವಾದ ನಕ್ಷಾ ಆಕಾರಗಳನ್ನು ಮೂಡಿಸಿದ್ದಾರೆ. ನಕ್ಷೆಯ ಆಕಾರಗಳಲ್ಲಿ ಹೂವು, ಎಲೆ, ಬಳ್ಳಿ ಹಾಗೂ ದೇಟಿನಕಾರ್ಯ ಅತೀ ಸೂಕ್ಷ್ಮವಾದುದ್ದಾಗಿದೆ. ತಿಳಿಗುಲಾಬಿ ಹಾಗೂ ಬಿಳಿಬಣ್ಣದ ಹೂವುಗಳು ಕಸೂತಿಗೆ ಕಳೆಕಟ್ಟಿವೆ. ತಿಳಿ ಹಸಿರಿನ ಬಣ್ಣದ ಎಲೆಗಳು ಹಾಗೂ ಮೊಗ್ಗು, ಬಿಳಿ ಬಣ್ಣದ ಹೂವುಗಳು ಹಾಗೂ ಮೊಗ್ಗುಗಳು ಪ್ರಕೃತಿಯ ಬೆಳವಣಿಗೆಯ ಸಂಕೇತಗಳಾಗಿವೆ. ಐದು ದಳದ ಗುಲಾಬಿ ದೊಡ್ಡಗಾತ್ರದ ಹೂವಾಗಿದ್ದರೆ ಆ ಕಂದು ರಟ್ಟಿನ ಮೇಲೆ ಪರಿಶುದ್ಧ ಬಿಳಿ ಬಣ್ಣದ ಚಿಕ್ಕ ಗಾತ್ರದ ಹೂವುಗಳು ಕಸೂತಿ ಕಲೆಗೆ ಮೆರಗು ತಂದಿವೆ.

ಮಧ್ಯದಲ್ಲಿರುವ ಸಿಂಹದ ಆಕಾರ ವಾಸ್ತವಿಕವಾಗಿ ಮೂಡಿಬಂದಿದೆ. ಠೀವಿಯಿಂದ ಹಿಂದೆ ಸರಿದು ಒಂದು ಕಾಲನ್ನು ಮೇಲಕ್ಕೆತ್ತಿ ನಾಲಿಗೆಯನ್ನು ಹೊರಚಾಚಿ ಹಿಂಬದಿಗೆ ನೋಡುವುದು ಹಾಗೂ ಆ ಸಿಂಹದ ಕತ್ತಿನ ಮೇಲಿರುವ ಕೇಶರಾಶಿಗಳು ಸುಂದರಿಯ ಮುಂಗುರುಳಿನಂತೆ ಸಿಂಹಕ್ಕೆ ಕಳೆಕಟ್ಟಿವೆ. ಸ್ವಲ್ಪ ಸ್ವಲ್ಪ ಭಾಗಕ್ಕೆ ದಟ್ಟ ಗೆರೆಗಳಿಂದ ಅಲಂಕರಿಸಿರುವುದು ರಮ್ಯತೆ ಯನ್ನುಂಟು ಮಾಡಿದೆ. ಸಿಂಹದ ಚಿತ್ತಾರದ ಈ ಕಸೂತಿ ವನರಾಜನ ವರ್ಣನೆಯೇ ಆಗಿದೆ.

ಪ್ರಾಣಿ ಪ್ರಪಂಚದ ಪಾವಿತ್ರ್ಯವನ್ನು ಹಾಗೂ ಪ್ರಾಣಿ ದಯಾ ಪಂಥವನ್ನು ಹೊರಸೂಸುವ ಕಾರ್ಯವನ್ನು ಈ ಕಸೂತಿ ಕಲೆ ಮಾಡುತ್ತದೆ. ಸಿಂಹದ ಪ್ರಮಾಣಬದ್ಧ ಆಕಾರ ಮೂಡಿ ಬಂದಿದ್ದರೂ ಸಿಂಹದ ಬಾಯಿ ಹಾಗೂ ತೆರೆದ ಬಾಯಿಂದ ಹೊರಬಂದ ನಾಲಿಗೆ ನೋಡಿದರೆ ಜಾನಪದ ಗತ್ತಿನ ಚಿತ್ರದಂತೆ ಗೋಚರಿಸುತ್ತದೆ.


ಸಿಂಹದ ಬಾಲ, ಬಾಲವನ್ನು ಠೀವಿಯಿಂದ ಮೇಲೆತ್ತಿರುವ ಒಂದು ಚಿತ್ರ ಕಸೂತಿಕಲೆಯ ಪ್ರೌಢಿಮೆ ಮೆರೆದಿದೆ. ಈ ಕಸೂತಿಯ ಸೂಕ್ಷ್ಮತೆಯನ್ನು ತಿಳಿಯಬೇಕಾದರೆ ಸಿಂಹದ ಬಾಲದ ತುದಿಗಿರುವ ಕೇಶರಾಶಿಯ ಅಲಂಕಾರವನ್ನು ವೀಕ್ಷಿಸಬೇಕಾಗುತ್ತದೆ. ಆ ಸಿಂಹದ ಮೈಬಣ್ಣ




ಲಕ್ಷ್ಮಿ, ಗಣೇಶ, ಸರಸ್ವತಿ




ಆಂಜನೇಯ



ಕಸೂತಿ ಕಲೆಯ ಒಂದು ಚಿತ್ರ



ಇಳಕಲ್ ಸೀರೆಯ ಮೇಲೆ ಕಸೂತಿ ಕಲೆ



ಗಾಜಿನ ಚೌಕಟ್ಟಿನಲ್ಲಿ ಕಸೂತಿ




ಪರದೆಯ ಮೇಲೆ ಕಸೂತಿ



ಪರದೆಯ ಮೇಲೆ ಕಸೂತಿ



ಪರದೆಯ ಮೇಲೆ ಕಸೂತಿ



ಕಸೂತಿ ಕಲೆಯ ಒಂದು ಚಿತ್ರ




ಬಾಗಿಲು ಪರದೆ ಕಸೂತಿ



ಪಿಲ್ಲೋಕವರಿನಲ್ಲಿ ಕಸೂತಿ ವಿನ್ಯಾಸ



ಬಾಗಿಲು ತೋರಣದ ಕಸೂತಿ ಕಲೆ

ವಾಸ್ತವಿಕ ವಾದುದ್ದಾಗದೆ ಸಿಂಹದ ಮೈಬಣ್ಣವನ್ನು ವಾಸ್ತವನ್ನಾಗಿ ತೋರ್ಪಡಿಸಲು ಪ್ರಯತ್ನಿಸಿದ್ದಾನೆ. ಇದರಲ್ಲಿ ನೆರಳು-ಬೆಳಕಿನ ಕಲ್ಪನೆ ಮೂಡದೇ ಇರುವದು ಜಾನಪದ ಸೊಗಡನ್ನು ಹೊರ ಸೂಸುತ್ತದೆ.

ಆ ಕೇಸರಿಯ ಅಕ್ಕಪಕ್ಕದಲ್ಲಿ ನಕ್ಷೆಯ ಅಲಂಕಾರಿಕ ರೂಪಗಳು ಉಳಿದೆರಡು ಮೂರು ಮೂಲೆಗಳ ನಕ್ಷೆಗಳನ್ನು ಟ್ರೆಸ್ ಮಾಡಿದಂತೆ ಗೋಚರಿಸುತ್ತವೆ. ಈ ನಕ್ಷೆಯ ಕೋಮಲತೆ ಹಾಗೂ ಮಧ್ಯದಲ್ಲಿರುವ ಸಿಂಹ ಇವೆರಡೂ ಒಂದಕ್ಕೊಂದು ಸಾದೃಶ್ಯವಿಲ್ಲದಿರುವುದು ಎದ್ದು ಕಂಡರೂ ಇದೊಂದು ಉತ್ತಮ ಕಸೂತಿ ಎಂಬುದು ಮಾತ್ರ ಸತ್ಯವಾದುದ್ದಾಗಿದೆ.

ಈ ರಂಧ್ರಗಳ ರಟ್ಟು ಏನೆಲ್ಲಾ ಆಕೃತಿಯನ್ನು ಸೃಷ್ಟಿಸುವಂತಹ ಶಕ್ತಿಯನ್ನು ಹೊಂದಿದೆ. ಆದರೆ ಈ ರಂಧ್ರದ ರಟ್ಟಿನ ನಿರ್ಮಾತೃನಿಗೆ ಇರುವ ಕಸೂತಿ ಸೌಂದರ್ಯ ಪ್ರಜ್ಞೆ ಯನ್ನು ಮೆಚ್ಚುವಂತಹದಾಗಿದೆ. ಆ ರಂಧ್ರದ ರಟ್ಟಿನ ಉಪಯೋಗ ಮಾಡಿಕೊಂಡು ಹೊಸದನ್ನು ಸೃಷ್ಟಿಸಿಕೊಟ್ಟಿರುವ ಹಿರೇಮಠ ಅವರಂತಹ ಕಸೂತಿಗಾರ್ತಿಯರೂ ಸಮಾಜದ ಜನರ ಆನಂದಕ್ಕೆ ಕೊಟ್ಟ ಕಾಣಿಕೆ ನಿಜವಾದ ಕಾಣಿಕೆಯಾಗಿದೆ. ಇದೇ ದೇಶೀಯ ಕಸೂತಿಯನ್ನೇ ಆಧರಿಸಿ ಹೊಸ ದೊಂದು ಕಸೂತಿ ಅವಿಷ್ಕರಿಸಿತು. ಆ ಕಸೂತಿ ಇಂದು ಪ್ರಖ್ಯಾತಿಯನ್ನು ಪಡೆದಿದೆ. ಇದು ಇಂದು ಎಲ್ಲಾ ಮನೆಗಳಲ್ಲಿ ಸರ್ವೇ ಸಾಮಾನ್ಯವಾಗಿದೆ.

**ಶಾರ್ಟ್ ಅಂಡ್ ಲಾಂಗ್ ಸ್ಟಿಚ್ (ಚಿಕ್ಕ ದೊಡ್ಡ ಟೆಬ್ಬಿಗಳ ಕಸೂತಿ) :** ಈ ಕಸೂತಿ ನೆರಳು ಬೆಳಕಿನ ಪ್ರಭಾವದಿಂದ ತನ್ನ ಕ್ಷೇತ್ರವನ್ನು ಇನ್ನೂ ವ್ಯಾಪಿಸಿಕೊಳ್ಳಹತ್ತಿದೆ. ಧಾರವಾಡದ ಮರಾಠಾ ಕಾಲಿನಿಯಲ್ಲಿ ಕಳೆದ ಅರ್ಧ ಶತಮಾನದ ಹಿಂದೆ ಜೀವಿತಾವಸ್ಥೆಯ ಬಾಳ ಸಂಜೆ ಗಳನ್ನು ಶ್ರೀಮತಿ ರುದ್ರವ್ವ ಸಿದ್ರಾಮಯ್ಯಮಠದ ಅವರು ದೇಶಿಯ ಕಸೂತಿಯಿಂದಲೇ ಆಸಕ್ತಿ ಬೆಳೆಸಿಕೊಂಡವರು. ಮುಂದುವರಿದು ಮೆಂತೆ, ಗಂಟೆಹೆಣಿಕೆ, ಸಿಂಧಿ ಮೊದಲಾದ ಕಸೂತಿ ಗಳನ್ನು ಮಾಡುತ್ತಾ ಸಾದಾ ಬಟ್ಟೆಯ ಮೇಲೆ ಅತೀ ಸೂಕ್ಷ್ಮವಾದ ಸೂಜಿಯನ್ನು ಬಳಕೆ ತಿಳಿಯಾದ ಬಣ್ಣದ ಬಟ್ಟೆಯ ಮೇಲೆ ದಟ್ಟವರ್ಣಗಳ ದಾರಗಳನ್ನು ಬಳಸಿ ಮನ ಮೋಹಕವಾದ ಕಸೂತಿಗಳನ್ನು ನಿರ್ಮಿಸ ಹತ್ತಿದರು.

ದಿವಂಗತ ರುದ್ರವ್ವನವರ "ಶಾರ್ಟ್ ಲಾಂಗ್ ಸ್ಟಿಚ್" ಕಸೂತಿಯಲ್ಲಿ ದೇವರ ದೇವತೆ ಯರ ಆಕಾರಗಳನ್ನು ಮೂಡಿಸಿರುವುದು ಧಾರ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ೨.೫ ಅಡಿ ಗಾತ್ರದ್ದಾಗಿದೆ.

ಲಕ್ಷ್ಮಿ, ಗಣಪತಿ, ಸರಸ್ವತಿಯವರ ಕಸೂತಿ ನೋಡಿದಾಗ ಇದರ ಚಿತ್ತಾರವನ್ನು ಚೆನ್ನಾಗಿ ಚಿತ್ರಸ ಬಲ್ಲವರ ಸಹಾಯದಿಂದ ಚಿತ್ರಿಸಿಕೊಂಡು ತದನಂತರ ತಾಳ್ಮೆಯಿಂದ ದಾರಗಳನ್ನು ತುಂಬಿದ್ದಾರೆ. ಲಕ್ಷ್ಮಿಗೆ ದಟ್ಟ ಕೆಂಪುವರ್ಣವನ್ನು ಬಳಸಿದ್ದಾಗಿದೆ. ಸರಸ್ವತಿಗೆ ತಿಳಿನೀಲಿ ಬಣ್ಣ ವನ್ನು ಬಳಸಿ ವರ್ಣ ಸಂಯೋಜನೆಯ ಪ್ರೌಢತೆಯನ್ನು ಮೆರೆದು ಲಕ್ಷ್ಮಿಯ ಚಂಚಲತೆ ಸರಸ್ವತಿಯ ಶಾಂತ ಹಾಗೂ ವಿಶಾಲತೆಯ ಭಾವ ಅದರಲ್ಲಿ ಗೋಚರಿಸುತ್ತದೆ. ಮಧ್ಯದಲ್ಲಿ

ಬಳಸಿದ ಗಣಪತಿಯ ಚಿತ್ರದಲ್ಲಿ ಕೇಸರಿ ಬಳಸಿರುವುದು ನೋಡಿದರೆ ತ್ಯಾಗದ ಪ್ರತೀಕ ಇದಾಗಿದೆ. ಎಲ್ಲಾ ಆಭರಣಗಳಿಗೆ ಸರಿಯಾಗಿ ಚಿತ್ರಿಸಿ ಸುವರ್ಣದ ಭಾವಕೊಡುವ ಹಳದಿ ಕೇಸರಿಯಿಂದ ಪೂರ್ಣಗೊಳಿಸಿದ್ದಾರೆ.

**ರೇಖಾ ವಿನ್ಯಾಸ ಹಾಗೂ ನೆರಳು ಬೆಳಕು :** ರುದ್ರವ್ವಳು ತೀಕ್ಷ್ಣವಾದ ರೇಖಾ ವಿನ್ಯಾಸದಿಂದ ಚಿತ್ರ ಚಿತ್ರಿಸಿಕೊಂಡ ನೆರಳು ಬೆಳಕಿನ ಕಲ್ಪನೆ ಕೊಡುವ ಕಮಲಗಳು ನೋಡಿಸಿಕೊಳ್ಳುತ್ತವೆ. ಸರಸ್ವತಿ ಹಾಗೂ ಲಕ್ಷ್ಮೀಯ ಸೀರೆಯ ಕಸೂತಿಯಲ್ಲಿ ಸುಂದರವಾದ ನೆರಳು ಬೆಳಕಿನ ಕಲ್ಪನೆಗಳು ಮೂಡಿವೆ. ಕಮಲದ ಹೂವುಗಳಲ್ಲಿ ನೆರಳು ಬೆಳಕಿನ ಕಲ್ಪನೆ ಸ್ವಲ್ಪ ಅಸ್ತವ್ಯಸ್ತತೆ (ನೀಟಾಗದೇ) ಇರುವುದು ಕಂಡುಬಂದಿದೆ. ಕಟಿ ಕಂಠಾಭರಣಗಳಲ್ಲಿ ಸೂಕ್ಷ್ಮತೆ ಮೆರೆದಿದ್ದಾರೆ. ಸರಸ್ವತಿ ತನ್ನ ಕೈಯಲ್ಲಿ ಹಿಡಿದಿರುವ ತಂಬೂರಿಯಲ್ಲಿ ನೆರಳು ಬೆಳಕಿನ ಕಲ್ಪನೆಯನ್ನು ಚೆನ್ನಾಗಿ ಮೂಡಿಸಿದ್ದಾರೆ. ಈ ದೇವರ ಆಕಾರಗಳು ಕೈ ಬೆರಳು, ಕಾಲ್ಬೆರಳು ಹಾಗೂ ಮುಖದ ಭಾವದಲ್ಲಿ ಕಣ್ಣು, ಮೂಗು, ತುಟಿಗಳನ್ನು ಚೆನ್ನಾಗಿ ಕಸೂತಿ ಮಾಡಿದ್ದು ತೀಕ್ಷ್ಣವಾದ ಭಾವ ಅದರಲ್ಲಿರುವುದನ್ನು ಕಾಣುತ್ತೇವೆ.

ಲಕ್ಷ್ಮೀ ಸರಸ್ವತಿಯರ ಮಧ್ಯದಲ್ಲಿರುವ ಗಣಪತಿಯ ವಾಹನ ಇಲಿಯ ಚಿತ್ರ ವಾಸ್ತವಿಕತೆಯ ಪರಾಕಾಷ್ಠೆಯನ್ನು ತಲುಪಿದೆ. ಈ ಕಸೂತಿಕಲಾವಿದೆ ಚಿತ್ರವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾಳೆ. ದಟ್ಟ ವರ್ಣದ ಹಿನ್ನೆಲೆಗೆ ತಿಳಿಯಾದ ಬಣ್ಣಗಳ ಹೊರರೇಖೆಗಳನ್ನು ಹಾಗೂ ತಿಳಿಯಾದ ಹಿನ್ನೆಲೆಗೆ ದಟ್ಟವಾದ ಬಣ್ಣದ ಹೊರರೇಖೆಗಳನ್ನು ಹಾಕುತ್ತಾ ಕಸೂತಿಯನ್ನು ಪೂರ್ತಿ ಮಾಡಿದ್ದಾರೆ. ದಟ್ಟವಾದ ಕಪ್ಪುಬಣ್ಣದ ದಾರವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಕೂದಲು ಹಾಗೂ ಕಣ್ಣರೆಪ್ಪೆ, ಗುಡ್ಡೆಗಳಲ್ಲಿ ಕಪ್ಪು ಬಳಸಿದ್ದಕ್ಕೆ ದೇವರುಗಳ ತಲೆಯ ಮೇಲಿರುವ ಆಭರಣವಾದ ಕಿರೀಟ ಹಾಗೂ ಕಂಠಾಭರಣಗಳು ಎದ್ದು ಕಾಣುತ್ತವೆ. ೨' x ೩' ಗಾತ್ರದ ಕಸೂತಿ ಇದಾಗಿದೆ.

ಪ್ರಸ್ತುತ ಸುಂದರ ಕಲಾಕೃತಿ ನಿರ್ಮಿಸಲು ಅಧಿಕ ಸಮಯವನ್ನು ತೆಗೆದುಕೊಂಡಿರಬೇಕು. ಅನೇಕ ಜನ ಸಖಿಯರು ಸೇರಿಕೊಂಡು ಏಕಕಾಲಕ್ಕೆ ತಮ್ಮ ತಮ್ಮ ಕಸೂತಿಗಳನ್ನು ನಿರ್ಮಿಸಿಕೊಂಡಿರುವುದು ಈ ಕಲಾಕೃತಿ ನಿರ್ಮಾಣಕ್ಕೆ ತೊಡಗಿಸಿದ ತಾಳ್ಮೆಯಿಂದ ಖಚಿತಪಡುತ್ತದೆ. ಸಮೂಹ ಮಾಧ್ಯಮದಿಂದ ಸ್ನೇಹ ಸೌಹಾರ್ದತೆಯಿಂದ ಮಾತ್ರ ಇಂತಹ ಕೃತಿಗಳ ನಿರ್ಮಾಣವಾಗುತ್ತದೆ. ಕೃತಿಗಳು ತಾಳ್ಮೆಗುಣವನ್ನು ಬೆಳೆಸದೆ ಇರಲಾರವು.

ಈ ಶಾರ್ಟ್ ಅಂಡ್ ಲಾಂಗ್ ಸಾಯಿಜ್ ಸ್ಟಿಚ್‌ದ ಕಸೂತಿಯನ್ನು ಧಾರವಾಡದ ಶ್ರೀಮತಿ ಜಮುನಾ ಚೆನ್ನು ಮಠದ ಪ್ರಕೃತಿಯ ಸುಂದರ ರೂಪಗಳನ್ನು ಹಾಗೂ ಪಕ್ಷಿ ಹೂವು ಬಳ್ಳಿಗಳನ್ನು ಚೆನ್ನಾಗಿ ಸಂಯೋಜಿಸಿ ಕಸೂತಿಹಾಕಿ ಸುಂದರ ಕಲಾಕೃತಿಗಳನ್ನು ದಟ್ಟವಾದ ಕಪ್ಪು ಬಣ್ಣದ ಬಟ್ಟೆಯ ಮೇಲೆ ರಚಿಸಿದ್ದಾರೆ.

ದೆಹಲಿಯಲ್ಲಿ ಕೇಂದ್ರ ಸರಕಾರದ ಕಾರ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಇವರ ಪತಿಯವರಾದ ಶ್ರೀ ಚೆನ್ನು ಅವರು ಈ ಕಸೂತಿ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಿ ಕಸೂತಿ

ಕಲೆಯ ಮಹತ್ವವನ್ನು ದೆಹಲಿಯಲ್ಲಿ ಬಿತ್ತರಿಸಿದ್ದಾರೆ. ಶ್ರೀಮತಿ ಜಮುನಾ ಕಲಾ ಅಧ್ಯಯನ ಶಾಸ್ತ್ರೋಕ್ತವಾಗಿ ನಡೆಸದಿದ್ದರೂ ಕನ್ನಡನಾಡಿನ ಕಸೂತಿ ಕಲಾಕೃತಿಗಳನ್ನು ಸದಾ ಮಾಡಿ ನೋಡಿ ಆನಂದಿಸುತ್ತ ಜೀವನ ಸಾಗಿಸುತ್ತಿದ್ದಾರೆ. ಈ ಗುಬ್ಬಿ ಹೂಗಳು ಕೃತಿ ೨' x ೨' ಗಾತ್ರದ್ದಾಗಿದೆ. ದಟ್ಟ ಕಂದು ಅಥವಾ ಕಪ್ಪು ಬಟ್ಟೆಯ ಮೇಲೆ ಹೊಳಪುಳ್ಳ ದಾರದ ಸಹಾಯದಿಂದ ಕಸೂತಿ ಹಾಕಿ ಕಸೂತಿ ಕಲಾಕೃತಿಗಳದ್ದೇ ಪ್ರದರ್ಶನ ಏರ್ಪಡಿಸಿ ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಿಸಿಕೊಂಡಿರುವುದನ್ನು ನೋಡಿದರೆ ಸಂಪ್ರದಾಯ ಬದ್ಧವಾಗಿ ನಮ್ಮ ನಾಡಿನಲ್ಲಿ ನಡೆದ ಕಸೂತಿ ಕಲೆಯ ಸಂಪ್ರದಾಯವನ್ನು ಆಧುನಿಕ ಸಮಾಜ ಹಾಗೂ ಯುವಪೀಳಿಗೆ ಮಹತ್ವ ಕೊಡುತ್ತಿರುವುದು ಸೌಂದರ್ಯ ಪ್ರಜ್ಞೆಗೆ ಹಿಡಿದ ಕೈಗನ್ನಡಿಯಾಗಿದೆ.

ಇವರ ಕಸೂತಿ ಕಲಾಕೃತಿಗಳಲ್ಲಿ ಕರ್ನಾಟಕದ ದಾಸ್ವಾಳ ಹೂವಿನ ಅದರಲ್ಲೂ ಕೆಂಪು ದಾಸ್ವಾಳ ಹೂವಿನ ಹಾಗೂ ಗುಬ್ಬಿಗಳ ವರ್ಣ ಸ್ವಚ್ಛ ಹಾಗೂ ನೆರಳು ಬೆಳಕಿನ ಕಲ್ಪನೆಯೊಂದಿಗೆ ಕಸೂತಿ ಹಾಕಲ್ಪಟ್ಟಿದೆ. ಎಲೆ ದೇಟುಗಳ ಮೇಲಿರುವ ನೆರಳು ಬೆಳಕನ್ನು ನೋಡಿದರೆ ದಾರವನ್ನು ಕಸೂತಿಯಲ್ಲಿ ಬಳಸಿ ವರ್ಣಚಿತ್ರದ ಕಲ್ಪನೆ ಬರುವ ತೆರದಿ ಕೃತಿಗಳ ಸೃಷ್ಟಿಯಾಗಿವೆ. ಇದರಲ್ಲೇ "ಲಾಂಗ್ ಬಟನ್ ಹೋಲ ಸ್ಟಿಚಿಸ್" ಎಂಬ ಉಬ್ಬುಗಂಟುಗಳ ಹೆಣಿಕೆ ಇಲ್ಲಿ ಹೊಸ ಸಂಶೋಧನೆಯಾಗಿದೆ. ಸಿಂಧಿ ಕಸೂತಿಯು ಪ್ರಬಲವಾಗಿ ಬೆಳೆಯ ಹತ್ತಿದೆ.

**ಕ್ರಾಸ್ ಸ್ಟಿಚ್ (ಕತ್ತರಿ ಹೆಣಿಕೆ) :** ಮೊಟ್ಟ ಮೊದಲು ಹೆಣಿಕೆಯನ್ನು ಪ್ರಾರಂಭಿಸುವದಕ್ಕೆ ಮೊದಲು ಬಹುಶ: ದೊಡ್ಡ ನೂಲಿನ ತಟ್ಟನ್ನು ಅಂದರೆ ನಾರಿನ ಅಥವಾ ಸುತಳಿಯ ಮಾಧ್ಯಮದಿಂದ ರಚಿಸಿದ ತಟ್ಟನ್ನು ಆಧಾರವಾಗಿಟ್ಟುಕೊಂಡು ಅದರ ಮೇಲೆ ಕ್ರಾಸ್ ಸ್ಟಿಚ್ ಎಂಬ ಕತ್ತರಿ ಕಸೂತಿ ಹಾಕಿ ನೋಡಹತ್ತಿದರು. ಇಂತಹ ಸರಳ ಹಾಗೂ ಸುಂದರ ಕಸೂತಿಗೆ ಧಾರವಾಡದ ಹೊಸಲ್ಲಾಪುರದ ಶ್ರೀ ವೆಂಕಟೇಶ ದೇವಸ್ಥಾನದ ಹತ್ತಿರ ವಾಸಿಸುತ್ತಿರುವ ಶ್ರೀಮತಿ ಲೀಲಾವತಿ ರಾಘವೇಂದ್ರರಾವ್ ದೇಶಪಾಂಡೆಯವರು ಕಳೆದ ಐವತ್ತು ವರ್ಷಗಳ ಹಿಂದೆ ತಯಾರಿಸಿದ ಈ ಕತ್ತರಿ ಹೆಣಿಕೆಯ ಕಸೂತಿ ಗಮನಾರ್ಹವಾಗಿದೆ.

ಇಲ್ಲಿ ಎಲ್ಲಾ ಹೆಣಿಕೆಗಳು ತಮ್ಮನ್ನು ಮೇಲ್ಗಡೆಗೆ ಕಾಣದಂತೆ ಕಾರ್ಯ ಮಾಡಿವೆ. ಪ್ರತಿಹಂತದಲ್ಲಿ ಕತ್ತರಿಯಾಗಿ ದಾರ ಬಂದಿದೆ ತಪ್ಪಿಯೂ ಸಮಾಂತರವಾಗಿ ದಾರ ಬಂದಿಲ್ಲ ದೊಡ್ಡ ತಟ್ಟಿನ ಮೇಲೆ ಭೂಮಿತಿ ಗಾತ್ರ, ಸ್ವಸ್ತಿಕ, ಪಾತರಗಿತ್ತಿಗಳು, ಚಿಗರಿಗಳು ಹಾಗೂ ಹೂವಿನ ಕುಂಡಗಳೂ ಚೆನ್ನಾಗಿ ಗೋಚರಿಸಿವೆ. ಪಾತಾರಗಿತ್ತಿಯ ದೇಹ, ಮೀಸೆ ಹಾಗೂ ಪಂಖಗಳು ಚೆನ್ನಾಗಿ ಎರಡೇ ಬಣ್ಣಗಳಲ್ಲಿ ಸುಂದರವಾಗಿವೆ. ಚಿಗರಿ ಹಾಗೂ ಅದರ ಕಣ್ಣು ಜೊತೆಗೆ ನರ್ತಿಸುವ ಚಿಗರಿ ಹಾಗೂ ಹಿನ್ನೆಲೆ ದಟ್ಟ ಹಸಿರು ಬಣ್ಣದ ಹಿನ್ನೆಲೆ ಮುಂತಾದವುಗಳು ವರ್ಣ ಸಂಯೋಜನೆಯಿಂದೊಡಗೂಡಿದೆ. ೫' x ೭' ಗಾತ್ರದ್ದಾಗಿದೆ.

ಪ್ರಾಥಮಿಕ ವರ್ಣಗಳಾದ ನೀಲಿ, ಹಳದಿ, ಕೇಸರಿ, ದ್ವಿತೀಯ ವರ್ಣಗಳನ್ನು ಬಳಸಿರುವುದು ಬಣ್ಣದ ಮೇಲಿರುವ ಹಿಡಿತ, ಬಣ್ಣದ ಜ್ಞಾನವಿರುವುದು ಅದರ ಜೊತೆಗೆ ಜಾನಪದಿಯ

ಆಕಾರಗಳನ್ನು ಶಿಷ್ಟಕ್ಕೆ ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ಈ ಕಸೂತಿ ಹೊಂದಿದ ಬಟ್ಟೆಯನ್ನು ಹಾಸಲು ಹೊದಿಯಲು ಅಲಂಕಾರಿಕ ಕಾರ್ಯಕ್ಕೆ ಉಪಯೋಗಿಸುತ್ತಾರೆ.

ಇದೇ ಆಧಾರದಿಂದ "ಪರ್ಫೋರೇಟೆಡ್ ಬೋರ್ಡ್" ಎಂಬ ಗ್ರಾಫಿಕ್ ಬೋರ್ಡುಗಳು ರಟ್ಟಿನ ಮೇಲೆ ನಿರ್ಮಾಣವಾದವು. ಕ್ರಿ.ಶ.೧೯೨೫-೩೫ ರಲ್ಲಿ ಈ ತೂತುಗಳುಳ್ಳ ರಟ್ಟಿನ ಬೋರ್ಡಿನ ಆಧಾರದಿಂದ ಕ್ರಾಸ್ ಸ್ಟಿಚ್‌ಗಳನ್ನು ಮಾಡುವದಲ್ಲಿದೆ. ಅನೇಕ ನೈಸರ್ಗಿಕ ಹಾಗೂ ಅಲಂಕಾರಿಕ ರೂಪಗಳನ್ನು ಭಾರತೀಯ ಕಲಾವಿದರುಗಳು ಕಸೂತಿಯಲ್ಲಿ ನಿರ್ಮಿಸಿದ್ದಾರೆ.

ಈ ತೆರನಾದ ಅನೇಕ ಗಟ್ಟಿಮುಟ್ಟಾದ ದಾರಗಳ ಅರಿವೆಗಳನ್ನು ಉಪಯೋಗಿಸಿ ಕ್ರಾಸ್ ಸ್ಟಿಚ್ ಮಾಡಿರುವುದು ಕಂಡುಬರುತ್ತದೆ. ನಂತರ ತಟ್ಟಾಗಲಿ ಪ್ಲಾಸ್ಟಿಕ್ ದಾರವಾಗಲಿ ಕಾಣದ ಹಾಗೆ ಅರಿವೆ ಹೊಲಿಯುವುದು ವಿಶೇಷ.

**ಮೆಂತೆ ಹೆಣಿಕೆ :** ಗುಳೇದಗುಡ್ಡದ ಶ್ರೀಮತಿ ಶಶಿಕಲಾ ಮಹಾದೇವ ಜಗತಾಪ ಅವರ ಪತ್ನಿ ಅಂದರೆ ಬಾಗಲಕೋಟದ ಯಲ್ಲೂಬಾಯಿ ಜಾಧವ ತನ್ನ ಬಾಲ್ಯಾವಸ್ಥೆಯಿಂದ ಹೆಣಿಕೆಯಲ್ಲಿ ಆಸಕ್ತಿ ಹೊಂದಿದವಳು. ಮೆಂತೆ, ಡಬಲ್ ಮೆಂತೆ ಕಸೂತಿ ಮಾಡುವುದೆಂದರೆ ಎಲ್ಲಿಲ್ಲದ ಆನಂದ.

ಪ್ರಸ್ತುತ ಚಿತ್ರಗಳನ್ನು ಮೆಂತೆ (ಮೇಟಿ) ಬಟ್ಟೆಯ ಮೇಲೆ ಚೆನ್ನಾಗಿ ಮೂಡಿಸಿಕೊಂಡು ಕತ್ತರಿ ಹೆಣಿಕೆ ಹಾಕಿರುವುದನ್ನು ನಾವು ನೋಡಿದರೆ ಈ ಮೊದಲು ತಟ್ಟಿನ ಮೇಲೆ ದಪ್ಪ ನೂಲಿನ ದಾರದಿಂದ ಕ್ರಾಸ್ ಸ್ಟಿಚ್ ಮಾಡಿ ಸಫಲತೆ ಪಡೆದದ್ದು ತಿಳಿದು ಆನಂದವೆನಿಸುತ್ತದೆ.

ಶ್ರೀಮತಿ ಜಗತಾಪ ಅವರು ಹಾಕಿದ "ಬಲಮುರುಗಿ ಸೊಂಡಿ ಗಣಪ" ಮಂಡೆಗಾಲಿಕ್ಕಿದ ಹಾಗೂ ಕಡಗೋಲು ಕೃಷ್ಣನ ಡಬಲ್ ಮೆಂತೆ ಹೆಣಿಕೆಗಳಲ್ಲಿ ದಟ್ಟ ಕಪ್ಪುವರ್ಣವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಗಣಪತಿಯ ಎದುರಿಗೆ ಪೂಜಾ ಥಾಲಿ, ಗಂಟೆ, ತಂಬಿಗೆ, ದೀಪ ಚೆನ್ನಾಗಿ ಮೂಡಿಬಂದಿದೆ. ಗಣಪತಿಯ ಹಿನ್ನೆಲೆ ದಟ್ಟವರ್ಣದ ಹಿನ್ನೆಲೆ ಮೇಲೆ ಛತ್ರಿ ನೋಡಲು ಚೆನ್ನಾಗಿ ಮೂಡಿಬಂದಿದೆ. ಬಾಲಕೃಷ್ಣರ ಚಿತ್ರಗಳು ಹಾಗೂ ತಲೆಗೂದಲಿಗೆ ಬಳಸಿದ; ದಟ್ಟ ಬಣ್ಣ ಹಾಗೂ ಬೆಣ್ಣೆಗೆ ಬಳಸಿದ ಬಿಳಿ ಬಣ್ಣ ಬಹಳ ಚೆನ್ನಾಗಿ ಕಸೂತಿಯಾಗಿದೆ. ಕಡಗೋಲಿನಿಂದ ಬೆಣ್ಣೆಯ ಕಡೆಯುವ ಕೃಷ್ಣ, ಅಂಬೆಗಾಲಿಕ್ಕಿ ಬೆಣ್ಣೆ ತಿನ್ನುವ ಬಾಲಕೃಷ್ಣನ ಚಿತ್ರಗಳು ಗಮನ ಸೆಳೆಯುತ್ತವೆ.

ಕಮಲದ ಮೇಲೆ ಕುಳಿತ ಗಣಪತಿಯ ಸೊಂಡಿಲು ಬಲಬದಿಗೆ ಹೊರಳಿದ್ದು, ನಾಲ್ಕು ಭುಜಗಳು ಅದರಲ್ಲಿ ಬಲಗೈ ಆಶೀರ್ವಾದದ್ದು ಹಾಗೂ ಎಡಗೈಯಲ್ಲಿ ಮೋದಕವಿದ್ದರೆ ಇನ್ನೆರಡು ಕೈಗಳಲ್ಲಿ ಪಾಶು ಅಂಕುಶಗಳಿರುವುದು ಕಂಡುಬರುತ್ತದೆ.

ದೇವತೆಯರಾದ ಶಿವಪಾರ್ವತಿ, ಲಕ್ಷ್ಮೀ, ಅಂಬಾಭವಾನಿ, ತುಳಜಾಭವಾನಿ, ಶಿವಲಿಂಗ ಮುಂತಾದವುಗಳೊಂದಿಗೆ ಪ್ರಾಕೃತಿಕ ಸೌಂದರ್ಯವನ್ನು ಬಿಂಬಿಸುವ ಪಾತರಗಿತ್ತಿ, ನವಿಲು, ಪಾರಿವಾಳ, ಹೂವು ಬಳ್ಳಿಗಳನ್ನು ಈ ಡಬಲ್ ಮೆಂತೆದಲ್ಲಿ ಮಾಡಿದ್ದಾರೆ.

ಬಾರ್ಡರ್ ನಕ್ಷೆಗೆ ಬಣ್ಣದ ನಾಲ್ಕುದಳದ ಹೂವು ಅವುಗಳ ಹೊಂದಾಣಿಕೆಗೆ ಬಳ್ಳಿ ಉತ್ತಮ ಸಂಯೋಜನೆಯಾಗಿದೆ. ಧಾರವಾಡದ ದಿವಂತಗ ಶ್ರೀಮತಿ ರುದ್ರವ್ವ ಮಠದ ಅವರು ಕಳೆದ ಎಂಭತ್ತು ವರ್ಷಗಳ ಹಿಂದೆ ಮೆಂತೆ ಹೆಣಿಕೆಯಲ್ಲಿ ಚಿಗರಿ, ಹುಲಿ ಮುಂತಾದ ಪ್ರಾಣಿಗಳನ್ನು ಡಬಲ್ ಮೆಂತೆಯಲ್ಲಿ ಹೆಣೆದಿದ್ದು ನೋಡಿದರೆ ಪ್ರಾಣಿಪ್ರಪಂಚವನ್ನು ಪ್ರೀತಿಸುವುದು ತಿಳಿಯುತ್ತದೆ.

ಹೆಣಿಕೆಯಲ್ಲಿ ಚಿಗರೆಯ ಠೀವಿ ಹಾಗೂ ಅದರ ಕೋಡಿನಲ್ಲಿ ಕ್ರಾಸ್ ಸ್ಟಿಚ್, ಮೆಂತೆ ಹೆಣಿಕೆ ತನ್ನ ಅಲಂಕಾರವನ್ನು ಪ್ರದರ್ಶಿಸುತ್ತದೆ. ಚಿಗರಿಯ ಕೆಳಭಾಗದಲ್ಲಿರುವ ಸಸಿ ಹಾಗೂ ಹುಲ್ಲಿನ ಗರಿಗಳು ಕಲಾ ಪ್ರೌಢಿಮೆ ಕಸೂತಿಯ ತಾಳ್ಮೆಗೆ ಹಿಡಿದ ಕೈಗನ್ನಡಿಯಾಗಿವೆ.

ಇನ್ನೊಂದು ಕಸೂತಿ "ಹುಲಿ"ಯನ್ನು ನೋಡಿದಾಗ ಹುಲಿಯ ಮೈಬಣ್ಣ ಹಾಗೂ ಬಾಲದ ಭಾಗದಲ್ಲಿ ನಂತರ ಸುಂದರವಾದ ಪ್ರಕೃತಿಯಲ್ಲಿ ವರ್ಣ ಸಂಯೋಜನೆ ಚೆನ್ನಾಗಿ ಮಾಡಿದ್ದಾರೆ. ಆಕಾಶದ ನೀಲಿಯಲ್ಲಿ ಜಾಂಬಳಿ ಬೆರೆತಿರುವುದು ಹಾಗೂ ಟೆಂಗಿನ ಗರಿಗಳ ಮಧ್ಯೆ ಆ ಬಣ್ಣ ಗೋಚರಿಸುತ್ತಿರುವುದು ನೋಡಲು ಬಲು ರಮ್ಯವೇ ಸರಿ. ಈ ಮೆಂತೆ ಕಸೂತಿಯಲ್ಲಿ ದಟ್ಟ ಹಸಿರು ಹಾಗೂ ಕರೆ ಬಣ್ಣದ ದಾರಗಳನ್ನು ಅವಶ್ಯವಿದ್ದಲ್ಲಿ ಚೆನ್ನಾಗಿ ಬಳಸಿಕೊಂಡಿದ್ದಾರೆ.

ಈ ರೀತಿಯ ಮೆಂತೆ ಹೆಣಿಕೆಯಲ್ಲಿ ಕೇವಲ ಹಿಂದೂ ಧರ್ಮದ ದೇವತೆಯರ ಚಿತ್ರಗಳಷ್ಟೇ ಮೂಡಿಬಂದಿಲ್ಲ. ಖುರಾನ್‌ದ ಕಲಾತ್ಮಕಗಳ ಅಕ್ಷರಗಳನ್ನು ಕೂಡಾ ಈ ಕಸೂತಿ ಮೈಗೂಡಿಸಿಕೊಂಡಿದೆ. ಈ ಕಸೂತಿಯ ಪ್ರಭಾವ ಕ್ರೈಸ್ತ ಧರ್ಮದ ಏಸುಕ್ರಿಸ್ತನನ್ನು ಸಹಿತ ಇಂತಹ ಮೆಂತೆ ಕಸೂತಿಯಲ್ಲಿ ಮೂಡಿಸಿರುವುದು ಅಲ್ಲಲ್ಲಿ ಕಂಡುಬರುತ್ತವೆ. ಈ ಕಸೂತಿ ಮೆಂತೆ ಕಸೂತಿ ಎಂಬ ದೇಶಿ ಹೆಸರಿನಿಂದ ಖ್ಯಾತಿ ಪಡೆದದ್ದಾಗಿದೆ.

ಇದನ್ನೇ ೧೯೮೦ರಲ್ಲಿ ಗ್ರೇಟ್ ಬ್ರಿಟನ್ ದವರು ಸರಳವಾಗಿ ಕಸೂತಿ ಹಾಕಲು ಬರುವ ಹಾಗೆ ರಟ್ಟನ್ನು ತಯಾರಿಸಿ "ಸೆಲೆಬ್ರೆಶನ್ ಆಫ್ ಕ್ರಾಸ್ ಸ್ಟಿಚ್" ಎಂಬ ಪುಸ್ತಕವನ್ನು ಡೆವಿಡ್ ಅಂಡ್ ಚಾರ್ಲ್ಸ್ ಎಂಬುವರು ಪ್ರಕಾಶಿಸಿದ್ದಾರೆ. ಈ ಕ್ರಾಸ್ ಸ್ಟಿಚ್ ಕುರಿತು ಅನೇಕ ಪುಸ್ತಕಗಳು ಹೊರಬಂದಿರುವುದಕ್ಕೆ ಆ ಮೊದಲಿನ ಕತ್ತರಿ ಹೆಣಿಕೆಯೇ ಮೆಂತೆ ಕಸೂತಿಯಾಗಿದೆ. ಇದುವೆ ನಂತರ ಕ್ರಾಸ್ ಸ್ಟಿಚ್ ಎಂಬ ಹೆಸರಿನಿಂದ ಖ್ಯಾತಿ ಪಡೆದಿದೆ.

ಸಿಂಧಿ ಹೆಣಿಕೆ : ಬೆಳಗಾಂವದ ಶ್ರೀಮತಿ ಮುಕ್ತಾ ಅಶೋಕ ಹೆಗಡಿಯವರು ಗುಳೇದಗುಡ್ಡದ ಲಕ್ಷ್ಮೀ ಕೋ-ಆಪ್ ಬ್ಯಾಂಕಿನಲ್ಲಿ ಉದ್ಯೋಗಿಗಳಾಗಿದ್ದರೂ ಸಹಿತ ತಮ್ಮ ಬಿಡುವಿನ ವೇಳೆಯಲ್ಲಿ "ಸಿಂಧಿ ಕಸೂತಿ"ಯನ್ನು ಸತತವಾಗಿ ಹಾಕುತ್ತಾ ಅದರಲ್ಲಿ ಪ್ರೌಢಿಮೆ ಪಡೆದಿದ್ದಾರೆ. ಸಾದಾ ಬಟ್ಟೆಯ ಮೇಲೆ ಚಿತ್ತಾರ ಬಿಡಿಸಿಕೊಂಡು ಆ ಚಿತ್ತಾರಗಳಿಗೆ ಹೊರರೇಖೆಗಳನ್ನು ಒಂದೆಳೆ ಅಥವಾ ಎರಡೆಳೆಗಳ ಮುಖಾಂತರ ಹೆಣಿಕೆ ಹಾಕುವುದೇ ಸಿಂಧಿ ಕಸೂತಿ ಎಂದು ಹೆಸರು ಪಡೆದಿದೆ. ಕಾಶ್ಮೀರಿ ಕಸೂತಿ, ಬಟನ್ ಹೋಲ್, ಕಡ್ಡಿ ಹೊಲಿಗೆ, ಸರಪಳಿ ಹೊಲಿಗೆ, ಸ್ಯಾಟಿನ್ ಸ್ಟಿಚ್, ಗೋದಿ ಹೆಣಿಕೆ ಎಂಬ ಹೆಸರಿನಿಂದ ಬೇರೆ ಬೇರೆ ನಮೂನೆಯ ಕಸೂತಿಗಳನ್ನು

ಹಾಕಬಹುದು ಎನ್ನುವ ಮುಕ್ತಾ ಅವರಿಗೆ ಅವರ ಅಜ್ಜಿಯವರಾದ ದಿವಂಗತ ಶ್ರೀಮತಿ ಗಂಗಮ್ಮಾ ವಿರೂಪಾಕ್ಷಿಯವರ ಪ್ರೇರಣೆಯಾಗಿದೆ. ಗಂಗಮ್ಮ ನವರು ನೇಯ್ಗೆ ಕಸೂತಿಯಲ್ಲಿ ಸಿದ್ಧಹಸ್ತರಿದ್ದರು.

ಶ್ರೀಮತಿ ಮುಕ್ತಾ ಅವರು ಬಾಲ್ಯಾವಸ್ಥೆಯಿಂದ ನೇಯ್ಗೆಯಲ್ಲಿ ಆಸಕ್ತಿ ಹೊಂದಿರುವುದು ಅವರ ಅಜ್ಜಿಯವರು ಹಾಕುತ್ತಿರುವ ನೇಯ್ಗೆ ಕಸೂತಿಯಿಂದ ಮುಂದುವರಿದು ಮುಕ್ತಾ ಅವರು ಸಿಂಧಿ ಹಾಗೂ ಗುಜರಾತಿ ಎಂಬ ನಾಮಾಂಕಿತ ಕಸೂತಿಯನ್ನು ಹಾಕುವುದರಲ್ಲಿ ಪರಿಣತಿ ಪಡೆದಿದ್ದಾರೆ. ಸಾಂಪ್ರದಾಯಿಕ ಕಸೂತಿ ಕಲೆಯು ತನ್ನ ತನವನ್ನು ತೊರೆದು ಹೊಸ ಪಂಥಗಳನ್ನು ಹುಡುಕೊಕೊಂಡು ಹೋಗಿರುವ ಈ ಸಿಂಧಿ ಟಾಕಿ ಕಸೂತಿಯು ಧಾರವಾಡದ ಕಸೂತಿಯನ್ನು ಬುನಾದಿಯನ್ನಾಗಿಟ್ಟುಕೊಂಡು ಮುಂದುವರಿದಂತಿದೆ. ಸೀರೆ, ಟೇಬಲ್ ಕ್ಲಾಥ್, ಬಾಗಿಲ ಪರದೆ, ದಿಂಬಿನ ಕವರಗಳು, ದುಬಟಿ, ಕೈಚೀಲ ಏನೆಲ್ಲಾ ವಸ್ತುಗಳ ಮೇಲೆ ಬಣ್ಣದ ದಾರಗಳಿಂದ ಸಣ್ಣ ಸೂಜಿಯ ಮಾಧ್ಯಮದಿಂದ ಕೆಳಗಿನಿಂದ ಚುಚ್ಚಿ ಸೂಜಿಯನ್ನು ಮೇಲಕ್ಕೆ ತೆಗೆದುಕೊಂಡು ಅದಕ್ಕೆ ಸುತ್ತಿದ ದಾರವನ್ನು ಪದೇ ಪದೇ ಸುತ್ತುವುದರ ಮುಖಾಂತರ ಸರಪಳಿ ಕಸೂತಿ ನಿರ್ಮಾಣ ಕ್ರಾಸ್, ಗೋದಿ, ಪಂಜಾಬಿ, ಸಿಂಧಿ, ಗುಜರಾತಿ ಎಂಬ ಅನೇಕ ನಮೂನೆಯ ಕಸೂತಿಗಳನ್ನು ಹಾಕಿದ್ದಾರೆ.

ಬಟ್ಟೆಯ ಮೇಲೆ ಚಿತ್ರವನ್ನು ಕಾರ್ಬನ್ ಸಹಾಯದಿಂದ ಮೂಡಿಸಿಕೊಂಡು (ಚಿತ್ರಗಳ ಪುಸ್ತಕಗಳು ಮಾರ್ಕೆಟ್‌ನಲ್ಲಿ ಲಭ್ಯ) ಆ ಚಿತ್ರಗಳ ಮುಖಾಂತರ ಪೂರ್ತಿ ತುಂಬುದಾರ ಹಾಕುವದು, ಒಂದೆ ಎಳೆದಾರ ಹಾಕುವದು, ಎರಡೆರಡು ಸಾಲುಗಳ ಮುಖಾಂತರ ಕಸೂತಿ ಹಾಕುವದು ನೋಡಿದರೆ ಕೇವಲ ರೇಖಾವಿನ್ಯಾಸ ಪ್ರಧಾನವಾದ ಕಸೂತಿ ಇದಾಗಿದೆ. ಧಾರವಾಡದ ಕಸೂತಿಯನ್ನು ಹೋಲುತ್ತದೆ.

ಶ್ರೀಮತಿ ಮುಕ್ತಾ ಅವರಿಗೆ ಟೆಕ್ ಆಪ್ ಎಜೆನ್ಸಿ ೧೬೬, ನಾಗದೇವಿ ಸ್ಟ್ರೀಟ್, ಬಾಂಬೆ ಇವರು ಮಾಡಿದ ಕಸೂತಿ ಪುಸ್ತಕ ಹೊಸಹೊಸ ನಮೂನೆಯ ಕಸೂತಿಗಳನ್ನು ಸೃಷ್ಟಿಸಲು ಸಹಾಯಕಾರಿಯಾಗಿದೆ. ಸಾಂಪ್ರದಾಯಿಕ ಕಸೂತಿಗಳ ಆಧಾರದಿಂದ ಟೆಕ್ ಆಪ್ ಎಜೆನ್ಸಿಸ್ ಅವರು ಪುಸ್ತಕಗಳನ್ನು ಪ್ರಕಟಿಸಿ ಕಸೂತಿ ಕಲೆಯನ್ನು ಬೆಳೆಸಿ ಉಳಿಸಿಕೊಂಡು ಹೋಗುವಲ್ಲಿ ಸಹಾಯಕಾರಿಯಾಗಿವೆ. ಇವರು ನವದೆಹಲಿಯ ಮೊಡರ್ನ್ ಎಂಬ್ರಾಯಡರಿ ಸಿರಿಜ್, ಕಾಂತಾ ಕಲಾನಿಕೇತನ ಮುಂತಾದ ಪುಸ್ತಕಗಳನ್ನು ಆಧರಿಸಿ ಹೊಸ ಹೊಸ ಕಸೂತಿಗಳನ್ನು ರಚಿಸಿದ್ದಾರೆ. ತಿಳಿ ದಟ್ಟವಾದ ಬಣ್ಣದ ಬಟ್ಟೆಗಳ ಮೇಲೆ ವಿರುದ್ಧ ದಿಸೆಯಲ್ಲಿ ಬಳಸಿದ್ದಾರೆ.

ಈ ಸಿಂಧಿ, ಕಸೂತಿಯಲ್ಲಿ ಹೂವು, ಎಲೆ, ಭೂಮಿತಿ ಆಕಾರಗಳು ಹಾಗೂ ಹೂವಿನ ಎಲೆಯ ದಳಗಳನ್ನು ದಾರಗಳ ಮಧ್ಯಮದಿಂದ ಸಮಾನ ಅಂತರದಿಂದ ಒಂದರಮೇಲೊಂದು ಎಳೆಗಳನ್ನು ಹಾಕಿ ಸುಂದರವಾದ ಕಸೂತಿ ಶೋಧಿಸಿದ್ದಾಗಿದೆ.

ಬಾಗಿಲ ಪರದೆ : ಗುಳೇದಗುಡ್ಡದ ಕುಮಾರಿ ಮಾಲಾ ಶರಣಬಸಪ್ಪ ತಾಂಡೂರ ಹಾಗೂ ಶ್ರೀಮತಿ ಸುಭದ್ರಾಬಾಯಿ, ಭವಾನಿರಾವ್ ಜಿ. ಸೋನಾರ ಮುಂತಾದವರು ಉಲನ್

ದಾರದಿಂದ "ಬಾಗಿಲ ಹಣೆಪಟ್ಟಿಗೆ ಬಳಸುವ ಅಲಂಕಾರಿಕ ಬಾಗಿಲ ಪರದೆ" ಹಾಗೂ ಸ್ವೆಟರ್, ಮಫ್ಲರ್ ಹಾಗೂ ಮಳೆಗಾಲ, ಚಳಿಗಾಲದಲ್ಲಿ ಹೊದ್ದುಕೊಳ್ಳಲು ಶಾಲು, ಮದುಮಗಳಿಗೆ ಹೊದ್ದುಕೊಳ್ಳಲು ಬಣ್ಣಬಣ್ಣದ ಶಾಲುಗಳನ್ನು ನಿರ್ಮಿಸಿದ್ದಾರೆ.

ಇಲ್ಲಿ ಹೆಚ್ಚಾಗಿ ನೂಲಿನದಾರ ಹಾಗೂ ಉಲನ್ ದಾರದಿಂದ ಈ ಕಸೂತಿಗಳು ನಿರ್ಮಾಣವಾಗುತ್ತವೆ. ದಾರದ ಬಾಗಿಲಪರದೆಯಲ್ಲಿ ಅಲಂಕಾರಿಕ ರೂಪಗಳಾದ ಹೂವು ಬಳ್ಳಿ, ಹಗ್ಗದಾಟ ಆಡುವ ಹುಡುಗಿ, ನವಿಲು, ಗಿಳಿ, ಹಡಗು, ಬಾತುಕೋಳಿ, ದೇವರ ಮೂರ್ತಿಗಳಾದ ಲಕ್ಷ್ಮೀ, ಈಶ್ವರಲಿಂಗ, ಸಾಕಳಿ ಹೆಣಿಕೆ ಇವೆಲ್ಲವು ಬಾಗಲ ಕಮಾನ ಪರದೆ ಹೆಣಿಕೆಗಳಾಗಿವೆ.

ಆಧುನಿಕ ಬಾಗಿಲ ಪರದೆಗಳಲ್ಲಿ ಬಣ್ಣ ಬಣ್ಣದ ಉಲನ್ ದಾರ ಬಳಸಿಕೊಂಡು ಚೆಂಡು ಹೂವು, ದ್ರಾಕ್ಷಿಬಳ್ಳಿ, ಮಾವಿನಕಾಯಿ, ಮಾವಿನ ಎಲೆ ಹೋಲುವ ಸುಂದರವಾದ ಬಾಗಿಲ ಪರದೆಯನ್ನು ನಿರ್ಮಿಸಿದ್ದಾರೆ. ಕಸೂತಿಯು ನೋಡುಗರನ್ನು ಮನಸೆಳೆಯುವಂತೆ ಮಾಲಾ ಅವರು ಕಸೂತಿ ಹಾಕಿದ್ದಾರೆ. ಸಾಂಪ್ರದಾಯಿಕ ಮೆಂತೆ ಬೀಜಗಳಂತೆ ಕಂಡದ್ದರಿಂದ ಇದು ಮೆಂತೆ ಕಸೂತಿ ಎಂಬ ಹೆಸರು ಪಡೆದುಕೊಂಡಿದೆ.

**ಆಧುನಿಕ ಉಲನ್ ಕಸೂತಿಗಳು :** ಟವಲ್ ಬಟ್ಟೆ ಅಥವಾ ಬಿಡಿಬಿಡಿ ನೂಲಿರುವ ಬಟ್ಟೆ, ಮೇಟಿ ಬಟ್ಟೆ, ನೆಟ್ (ಜಾಳಿಗೆ) ಬಟ್ಟೆ, ಪ್ಲಾಸ್ಟಿಕ್‌ದ ಗಟ್ಟಿದಾರದ ಪ್ಲಾಸ್ಟಿಕ್ ಬಟ್ಟೆಯನ್ನು ಮೂಲ ತಳವನ್ನಾಗಿಸಿಕೊಂಡು ಅದರ ಮೇಲೆ ಉಲನ್ ದಾರಗಳನ್ನು ಉಪಯೋಗಿಸುತ್ತಾ ಸಂಯೋಜನಾತ್ಮಕವಾಗಿ ಕಸೂತಿಯನ್ನು ಮಾಡುತ್ತಾರೆ.

ಈ ಕಸೂತಿಗಳನ್ನು ಧಾರವಾಡದ ಹೊಸೆಲ್ಲಾಪುರದಲ್ಲಿರುವ ಶ್ರೀ ಕೇಸರಕರ ಗುರುಗಳು ಹಾಕಿದ್ದಾರೆ. ದೇವಾನುದೇವತೆಯರಲ್ಲಿ ಗಣಪತಿಯ ಉಲನ್ ಕಸೂತಿ ಆಕರ್ಷಕವಾಗಿದೆ. ಬಾಗಿಲ ಪರದೆಯ ಗಾತ್ರ ೭' x ೪' ಅಡಿ ಇದೆ. ಇದರ ಅಂಚಿಗೆ ಉತ್ತಮವಾದ ನಕ್ಷೆಯನ್ನು ಒಂದೇ ಬಣ್ಣದಲ್ಲಿ ಸುಂದರವಾಗಿ ಎಳೆಗಳ ಎಣಿಕೆಯಿಂದ ಪೂರ್ತಿಗೊಳಿಸಿದ್ದಾರೆ. ಎಡ ಬಲ ಹಾಗೂ ಕೆಳಗೆ ಮೂರು ಭಾಗಗಳಲ್ಲಿ ನಕ್ಷೆಗಳಿದ್ದರೆ ಮೇಲ್ಬದಿಗೆ ಒಂದೇ ಭಾಗಕ್ಕೆ ಮಾತ್ರ ಖುಲ್ಲಾ ಬಿಡಲಾಗಿದೆ. ಅಲ್ಲದೇ ಆ ಭಾಗಕ್ಕೆ ಮುಖ್ಯವಾಗಿ ಭಾರತೀಯ ಸಂಪ್ರದಾಯದ ಪ್ರಕಾರ "ಅತಿಥಿ ದೇವೋಭವ" ಎನ್ನುವ ಹಾಗೆ ಮಧ್ಯದಲ್ಲಿ 'ವೆಲ್ ಕಮ್' ಎಂದು ಬರೆಯಲಾಗಿದೆ. ಹಿಂದೆ ಮೆಂತೆ ಕಸೂತಿಯಲ್ಲಿರುವ ಗಣಪತಿಗೂ ಈ ಗಣಪತಿಗೂ ಬಹಳಷ್ಟು ಹೋಲಿಕೆ ಇದೆ. ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಬಲ ಮುರಗಿ ಸೊಂಡಿಲು, ದೇವರ ತಲೆಯ ಮೇಲಿರುವ ಛತ್ರ ಚಾಮರ ಹೋಲುತ್ತವೆ. ಇದರಿಂದ ಕಸೂತಿ ಸಂಪ್ರದಾಯ ಅನುಕರಣೆ ಮಾಡುತ್ತಾ ಮುಂದುವರೆದ ಕಲೆಯಾಗಿದೆ ಎಂದು ಹೇಳಬೇಕಾಗುತ್ತದೆ.

ಇತ್ತೀಚೆಗೆ ಇದೇ ರೀತಿಯ ಉಲನ್ನನ್ನು ಬಳಸಿ "ಏರ್ ಇಂಡಿಯಾ" ಗೊಂಬೆಯನ್ನು ಹಾಗೂ ಪಾಶ್ಚಾತ್ಯರ "ಬ್ಯಾಲೆ" ನೃತ್ಯದ ಕಲಾಕಾರರನ್ನು ತಿಳಿಯಾದ ಬಣ್ಣ ಹಾಗೂ ದಟ್ಟ

ಬಣ್ಣದ ಉಲನ್ ದಾರ ಬಳಸಿಕೊಂಡು ಕಸೂತಿ ಮಾಡಿರುವುದು, ನಮ್ಮ ಕಸೂತಿ ಕಲೆಯ ಹೊಸದಿಕ್ಕುಗಳೆಂದೇ ಹೇಳಬೇಕಾಗುತ್ತದೆ. ನೇಯ್ಗೆಯ ಸೂಕ್ಷ್ಮವಾದ ಕಸೂತಿಯು ಸಾಂಪ್ರದಾಯಿಕ ಚಿಕಣಿ ಚಿತ್ರಗಳಂತೆ (ಕಿರುರೂಪಿ) ಭಾಸವಾದರೆ ಈ ಉಲನ್ ದಾರದ ಕಸೂತಿಗಳು ಬೃಹದಾಕಾರದ ಆಧುನಿಕ ಚಿತ್ರಕೃತಿಗಳಂತೆ ಭಾಸವಾಗುತ್ತವೆ.

ಈ ತೆರನಾದ ನಕ್ಷಾ ಕಸೂತಿಗಳು ಮನೆಗೆ ಆಗಮಿಸುವ ಅತಿಥಿಗಳನ್ನು ಸದಾ ಹಸನ್ಮುಖ ದಿಂದ ಸ್ವಾಗತಿಸುತ್ತವೆ. ಹೆಚ್ಚಾಗಿ ಆಧ್ಯಾತ್ಮಿಕ ಚಿತ್ರಗಳನ್ನು ಈ ಉಲನ್ ಬಾಗಿಲು ಪರದೆಯ ಮೇಲೆ ಹಾಕುತ್ತಾರೆ. ಎಲ್ಲ ಧರ್ಮೀಯ ಜನರು ಈ ಕಾರ್ಯ ಮಾಡುತ್ತಾರೆ.

ಶ್ರೀಮತಿ ಶಶಿಕಲಾ ಮಹಾದೇವ ಜಗತಾಪ ಅವರು ಮೇಟಿ ಬಟ್ಟೆ, ಟವಲ್ ಬಟ್ಟೆಯ ಮೇಲೆ ಸುಂದರ ಆಕಾರಗಳನ್ನು ಮೂಡಿಸಿಕೊಂಡು ಸರಳ ಹಸ್ತ ಚಿತ್ರಕಲೆಯ ರೂಪಗಳನ್ನು ಚೆನ್ನಾಗಿ ಆಕರ್ಷಕ ಬಣ್ಣದ ಉಲನ್‌ದಿಂದ ಟೇಬಲ್ ಕ್ಲಾಥ್, ತಾಟಿನ ಮೇಲೆ ಹೊದಿಕೆ ಕೈಚೀಲಗಳನ್ನು ಹಾಕುವುದರಲ್ಲಿ ಸಿದ್ಧ ಹಸ್ತರು. ಈ ಕಸೂತಿಯಲ್ಲಿ ಬರುವ ಹೂವು-ಬಳ್ಳಿಗಳು-ನಕ್ಷೆಗಳು ಎಲ್ಲವೂ ಆ ಸಾದಾ ಬಟ್ಟೆಗೆ ಕಳೆಕಟ್ಟಿ ಅದರ ಮೌಲ್ಯವನ್ನು ಹೆಚ್ಚಿಸುವಲ್ಲಿ ಮುಖ್ಯ ಪಾತ್ರವಹಿಸುತ್ತವೆ.

ಆ ಕೈಚೀಲಗಳ ಒಳಗಿರುವ ಪ್ಲಾಸ್ಟಿಕ್ ಗಟ್ಟಿದಾರದ (ಗೊಬ್ಬರ ಅಥವಾ ರಾಸಾಯನಿಕ ವಸ್ತುಗಳು) ಚೀಲಗಳನ್ನು ಕಚ್ಚಾವಸ್ತುವನ್ನಾಗಿ ಬಳಸಿ ಗಟ್ಟಿಯಾದ ಆಕರ್ಷಕ ಭೂಮಿತಿಯ ಅಲಂಕಾರಿಕ ರೂಪಗಳನ್ನು ಉಪಯೋಗಿಸಿ ದಟ್ಟವರ್ಣದ ಉಲನ್ ದಾರದಿಂದ ಕಸೂತಿ ಹೆಣೆದಿರುವುದು, ಕಸೂತಿಕಲೆ ವಾಣಿಜ್ಯಕ್ಕೆ ತಿರುಗುತ್ತಿರುವುದೇ ಆರೋಗ್ಯಕರ ಬೆಳವಣಿಗೆ ಯಾಗಿದೆ. ಈ ಕಸೂತಿ ಪಂಥಗಳಲ್ಲೆ 'ಹ್ಯಾಂಡ್ ಎಂಬ್ರಾಯಿಡರಿ' ಹೊಸದಿಕ್ಕನ್ನು ಹುಡುಕಿದೆ.

**ಕೊಳವೆ ಸೂಜಿಯಿಂದ ಹ್ಯಾಂಡ್ ಎಂಬ್ರಾಯಿಡರಿ :** ಒಂದು ಕೊಳವೆ ಆಕಾರದ ಸೂಜಿ ಆ ಸೂಜಿಗೆ ಮುಂದೆ ಒಂದು ಸೂಕ್ಷ್ಮರಂಧ್ರ, ಆ ರಂಧ್ರದಿಂದಲೇ ದಾರ ಬಟ್ಟೆಯ ಒಳಗೂ ಹೊರಗೂ ಹೋಗುವಂತೆ ಮಾಡುತ್ತದೆ. ಈ ಸೂಜಿಯನ್ನು ಸರಿಯಾಗಿ ಕೈಯಲ್ಲಿ ಹಿಡಿಯಲು ಮಧ್ಯದಲ್ಲಿ ಪ್ಲಾಸ್ಟಿಕ್ ಮುತ್ತಿನ ಆಸರೆ ಇರುತ್ತದೆ ನಕ್ಷೆಗೆ ಬೇಕಾಗುವ ದಾರ ಆ ಸೂಜಿಯ ಹಿಂಬದಿಗೆ ಸಾಕಷ್ಟು ಹೆಚ್ಚಿಗೆ ಜೋತು ಬಿದ್ದಿರುತ್ತದೆ. ಆ ದಾರವೆಲ್ಲಾ ಆ ನಕ್ಷೆಯ ಮಧ್ಯಭಾಗ ವನ್ನು ಆಕ್ರಮಿಸುತ್ತದೆ. ಆ ಆಕ್ರಮಿಸುವ ದಾರವನ್ನು ಕತ್ತರಿಯಿಂದ ಸರಿಯಾಗಿ ಕತ್ತರಿಸಿ ತೆಗೆದಾಗ ಅಖಂಡದಾರ ಕತ್ತರಿಸಲ್ಪಟ್ಟು ಆ ದಾರ ಪೂರ್ತಿ ಉಲನ್ ಬಟ್ಟೆಯಂತೆ ಹಾಕಿರುವ ನಕ್ಷೆಗೆ ಉಬ್ಬು ಭಾವ ತೋರುತ್ತಾ ಜೀವಂತಿಕೆಯನ್ನು ತುಂಬುತ್ತಾ ಈ 'ಹ್ಯಾಂಡ್ ಎಂಬ್ರಾಯಿಡರಿ' ಎಂಬ ಕಸೂತಿ ನಿರ್ಮಾಣವಾಗುತ್ತದೆ.

ಗುಳೇದಗುಡ್ಡದ ಶಶಿಕಲಾ ಅವರು ಚಿಗರಿಗಳು, ಗಿಳಿಗಳು ಹಾಗೂ ತಾಜಮಹಲ್, ಧಾರ್ಮಿಕ ಕಸೂತಿಗಳಾದ ಖುರಾನ ಪಠಿಸುವ ಸ್ತ್ರೀ ಹಾಗೂ ತಾಜಮಹಲ್ ಗೋಳಗುಮ್ಮಟ ಮುಂತಾದವುಗಳನ್ನು ಹೆಣಿಕೆ ಮಾಡಿದ್ದಾರೆ.

ಕಪ್ಪು ಬಟ್ಟೆಯಮೇಲೆ ವರ್ಣಮಯ ಚಿಗರಿಗಳು ಉತ್ತಮ ಸಂಯೋಜನೆಯಾಗಿದೆ. ಚಿಗರಿಯ ಮುಖಚರ್ಯೆ ವರ್ಣಸಂಯೋಜನೆ ಕಸೂತಿಯ ಮೇಲೆ ಕೈಯಾಡಿಸುವ ತವಕ ನೋಡುಗರಿಗೆ ಆಗದೆ ಇರಲಾರದು.

**ಗಂಟು ಹೆಣಿಕೆ :** ಕಸೂತಿಯ ಅನೇಕ ಶೈಲಿಗಳಲ್ಲಿ ದಾರ ಸೂಜಿಯ ಮಾಧ್ಯಮದಿಂದ ಮೇಲ್ಗಡೆಗೆ ಸೂಜಿ ಬಂದ ನಂತರ ಅದರ ಸಹಾಯದಿಂದ ಗಂಟುಗಳನ್ನು ಹಾಕಿದ್ದು ನೋಡಿದರೆ ಬಟ್ಟೆಯ ಮೇಲೆ ಮುತ್ತುಗಳನ್ನು ಹೊಂದಿಸಿದಂತೆ ಗೋಚರಿಸುತ್ತದೆ. ಅತೀ ಸೂಕ್ಷ್ಮಗಂಟು ಹೆಣಿಕೆ ಎಂದರೆ ಒಂದೆಳೆ ದಾರದಿಂದ ಮಾಡುತ್ತಾರೆ. ಹೆಚ್ಚು ದಪ್ಪ ಎಂದರೆ ಆರೆಳೆಯಿಂದಲೂ ಗಂಟು ಹೆಣಿಕೆಯ ಕಸೂತಿಯನ್ನು ಹಾಕುತ್ತಾರೆ.

ದಟ್ಟ ನೀಲಿ, ಕಂದು, ಕೆಂಪು ಬಣ್ಣದ ಅರಿವೆಯ ಮೇಲೆ ಚಿತ್ರಕಲೆ ಬಲ್ಲವರಿಂದ ಮೇಣದ ಬಣ್ಣದ ಸಹಾಯದಿಂದ ಚಿತ್ತಾರ ಮೂಡಿಸಿಕೊಂಡು ಬಿಳಿ, ಹಳದಿ, ಕೇಸರಿ ಒಂದೇ ತಿಳಿಯಾದ ಬಣ್ಣದಿಂದ ಗಂಟ ಹೆಣಿಕೆಯನ್ನು ಹಾಕುತ್ತಾರೆ. ದೂರದಿಂದ ನೋಡಿದಾಗ ಒಂದೇ ಬಣ್ಣದ ಹೊರ ರೇಖೆಗಳಂತೆ ಗೋಚರಿಸುತ್ತವೆ.

ಬಾಲಕೃಷ್ಣನ ಚಿತ್ತಾರವನ್ನು ಬಾದಾಮಿಯ ಶ್ರೀಮತಿ ಪೂರ್ಣಿಮಾ, ಮಂಜುನಾಥ, ಗೋಸಾವಿ ಎಂಬುವರು ಬೇರೆ ಬೇರೆ ಬಣ್ಣದ ದಾರಗಳನ್ನು ಬಳಸಿ ತಯಾರಿಸಿದ್ದಾರೆ. ಟೇಬಲ್ ಕ್ಲಾಥ್, ಬಾಗಿಲ ಪರದೆ, ಪಿಲ್ಲೋ ಕವರ್ಸ್‌ಗಳನ್ನು ಗಂಟುಹೆಣಿಕೆಯಲ್ಲಿ ಏಕವರ್ಣ ಹಾಗೂ ಬಹುವರ್ಣಗಳಲ್ಲಿ ಕಸೂತಿ ಮಾಡಿತೋರಿಸಿದ್ದಾರೆ.

ಸೂಕ್ಷ್ಮಭಾಗದಲ್ಲಿ ಒಂದೆಳೆಯಿಂದ ಗಂಟಗಳನ್ನು ಹಾಕುತ್ತಾ ಹೋಗಿ ಎಲ್ಲಿ ದೊಡ್ಡ ಭಾಗವಿದೆಯೋ, ದೊಡ್ಡಗಾತ್ರದ ನಕ್ಷೆ ಇದೆಯೋ, ಆ ಕಸೂತಿಯನ್ನು ಉಲನ್‌ದಾರ ದಿಂದಲೂ ಹಾಕುತ್ತಾರೆ. ಇವರ ಉಲನ್ ದಾರದಿಂದ ತಯಾರಿಸಿದ "ಪದ್ಮ ಸುಂದರಿ" ಎಂಬ ಬಾಗಿಲ ಪರದೆ "ಸರೋವರದಲ್ಲಿ ದೇಟು, ಅದರ ಮೇಲೆ ಕಮಲ, ಅದರಲ್ಲಿ ಸರ್ವಾಂಗ ಸುಂದರಿ ಕುಳಿತಿರು ವುದು" ನೋಡುಗರನ್ನು ಆಕರ್ಷಿಸುತ್ತದೆ. ಚಾಕಲೇಟ್ ಹಾಗೂ ದಟ್ಟನೀಲಿ ಬಟ್ಟೆಯಲ್ಲಿ ಹಾಕಿದ ಸರಳ ಗೈ ಚಿತ್ರಗಳಂತೂ ಬಹಳ ಚೆನ್ನಾಗಿ ಗೋಚರಿಸುತ್ತವೆ.

ಈ ಬಾಲಕೃಷ್ಣನ ಕುಳಿತ ಭಂಗಿ ಅವನ ದಟ್ಟವರ್ಣದ ತಲೆಗೂದಲು, ತಿಲಕ ಹಾಗೂ ನೆಲುವಿನ ಮೇಲಿನ ಬೆಣ್ಣೆಯ ಕುಡಿಕೆಗಳು ನೋಡುಗರಿಗೆ ಆನಂದವನ್ನುಂಟು ಮಾಡುವ ಉತ್ತಮ ಸಂಯೋಜನೆ ಇದಾಗಿದೆ. ಎದುರಿಗೆ ಕೊಳಲು ಹಾಗೂ ಬೆಣ್ಣೆಯ ಗಡಿಗೆಯ ಮೇಲೆ ಗಿಳಿಯನ್ನು ಕಸೂತಿಯಲ್ಲಿ ತೋರಿಸಿದ್ದೆ ಕಲಾಪ್ರೌಢಿಮೆಯ ಸಂಕೇತವಾಗಿದೆ.

**ಗಾಜಿನ ಕಟ್ಟಿನಲ್ಲಿ ಹಾಕುವ ಕಸೂತಿ :** (ಹಾಲುಮುತ್ತಿನ ಮಣಿಗಳಿಂದ ಕಸೂತಿ) ಧಾರವಾಡದ ಮಾಳಾಪುರದಲ್ಲಿ ಶ್ರೀಮತಿ ಕಾಶಿಬಾಯಿ ಹಿರೇಮಠ ಕಳೆದ ಎಂಭತ್ತು ವರ್ಷಗಳ ಹಿಂದೆ ಚಿಕ್ಕಗಾತ್ರದ ಬಣ್ಣ ಬಣ್ಣದ ಮುತ್ತು ಹೊಳಪುಳ್ಳ ದೊಡ್ಡಗಾತ್ರದ ಹಾಗೂ ಗಾಜಿನ ಕೊಳವೆ ನೂಲಿನ ಗೊಂಡೆಗಳ ಮಾಧ್ಯಮದಿಂದ ದೇವಾನು ದೇವತೆಯರ ಹಾಗೂ ಭೂಮಿತಿ

ಅಲಂಕಾರಿಕ ಆಕಾರಗಳನ್ನು ಹಾಗೂ ಪ್ರಕೃತಿಯಲ್ಲಿನ ಸುಂದರ ಪ್ರಾಣಿ ಪಕ್ಷಿಗಳನ್ನು ಹಾಲು ಮುತ್ತಿನ ಮಣಿಯ ಕಸೂತಿ ಕಲೆಗೆ ಬಳಸಿದ್ದಾರೆ. ಅಷ್ಟಕೋನದ ಭೂಮಿತಿಯ ನಕ್ಷೆ ನೋಡಿದರೆ ದಟ್ಟ ನೀಲಿ ಹಳದಿ, ಕೆಂಪು ಮುತ್ತುಗಳನ್ನು ಬಳಸಿದ್ದು ಹಾಗೂ ಭೂಮಿತಿ ಅಲಂಕಾರ ರೂಪ ನಿಯಮಿತವಾಗಿರದೇ ಇದ್ದುದ್ದೇ ಜಾನಪದ ಶೈಲಿಯಾಗಿದೆ. ಇದೇ ಗತ್ತಿನ ಜಾನಪದ ಕೃತಿ "ಸಂಜೀವಿನಿ ಪರ್ವತವನ್ನು ಎತ್ತಿದ ಪ್ರಾಣದೇವರು (ಹನುಮನ) ಮುತ್ತಿನ ಕಸೂತಿ ಧಾರ್ಮಿಕ ಶ್ರೇಷ್ಠತೆಯ ಉತ್ತುಂಗ ಶಿಖರವಾಗಿದೆ. ಒಂದುವರೆ ಅಡಿ ಗಾತ್ರದ್ದಿದೆ.

ಎಡಗೈಯಲ್ಲಿ ಪರ್ವತವಿದ್ದರೆ ಬಲಗೈಯಲ್ಲಿ ಗದೆ ಇದೆ. ಬಾಲ ಕಲಾತ್ಮಕವಾಗಿದ್ದರೆ, ಬಾಲಕ್ಕೆ ಗಂಟೆ ಗೋಚರಿಸುತ್ತದೆ. ಅಕ್ಕ ಪಕ್ಕದಲ್ಲಿ ಹೂವಿನ ಗಿಡಗಳು ಅಲಂಕಾರಿಕ ಕಂಬಗಳು ಮಾವುಗಳನ್ನು ತಿನ್ನುತ್ತಿರುವ ಕೆಂಪು ಚುಂಚಿನ ಗಿಳಿಗಳು, ಕೆಳಗಡೆ ನಕ್ಷಾಪಟ್ಟಿ ಎಲ್ಲವೂ ಕಲಾತ್ಮಕ ವಾಗಿವೆ. ಹೊರಗಡೆಗೆ ಮುತ್ತನ್ನು ಹೆಣೆದುಕೊಂಡು ನಂತರ ಆ ಹೆಣಿಕೆಯನ್ನು ಒಂದು ಬಿಳಿ ಧಾತುವಿನ ಹಾಳೆಯ ಮೇಲೆ ದಾರದ ಸಹಾಯದಿಂದ ಅಥವಾ ಅಂಟಿನ ಸಹಾಯದಿಂದಲೂ ಅಂಟಿಸಿದ್ದಾರೆ. ಆ ಧಾತುವಿನ ಹೊಳಪು ಆ ಹಾಲು ಮುತ್ತಿನ ಮಣಿಗಳಿಗೆ ವಿಶೇಷ ಹೊಳಪನ್ನು ಕೊಡುತ್ತದೆ.

ದಿವಂಗತ ಶ್ರೀಮತಿ ಕಾಶೀಬಾಯಿ ಹಿರೇಮಠ ಅವರು ಗಾಜಿನ ಕಟ್ಟಿನಲ್ಲಿ ಸುರಕ್ಷಿತವಾಗಿ ಹೆಣೆದಿಟ್ಟ ಅನೇಕ ನಮೂನೆಯ ಕಸೂತಿಗಳು ಇಲ್ಲಿವೆ. ಗುಂಡಿ (ಬಿರಡೆ) ಹಾಗೂ ಮುತ್ತಿನಿಂದ ಮಾಡಲ್ಪಟ್ಟ ಮೊಲ. ಇದು ನೋಡುಗರನ್ನು ಆನಂದದಲ್ಲಿ ಮುಳುಗಿಸುತ್ತದೆ. ಜೀವಂತ ಮೊಲವನ್ನು ಹಿಡಿದ ಆನಂದ ಈ ಕಸೂತಿಯಲ್ಲಿ ಅಡಗಿದೆ ಅದರ ಕೆಳಗಡೆಗೆ ದಾರದಿಂದ ಎಲೆಬಳ್ಳಿಗಳನ್ನು ಮಾಡಲಾಗಿದೆ.

ಹಾಲುಮುತ್ತಿನ ಮಣಿಗಳ ಅಲಂಕಾರಿಕ ಕೃತಿಗಳು, ತ್ರಿಕೋನ, ಚೌರಸ, ಆಯತಾಕಾರ, ಷಷ್ಠಕೋನ, ಅಷ್ಟಕೋನಗಳಲ್ಲಿ ಅನೇಕ ಅಲಂಕಾರಿಕ ರೂಪಗಳನ್ನು ಈ ಕಸೂತಿಯಲ್ಲಿ ನಿರ್ಮಿಸಿದ್ದಾರೆ. ತೇರು, ಮುತ್ತಿನ ಬಳೆಗಳು ಇವುಗಳ ಹಿಂದುಗಡೆ ಹಾಕಲ್ಪಟ್ಟ ಬಣ್ಣದ ಬ್ಯಾಗಡಿ ಆ ಮುತ್ತಿನ ಮೇಲೆ ತನ್ನ ನೆರಳನ್ನು ಛಾಯೆಯನ್ನು ಬಿಡುವುದರ ಮೂಲಕ ಆ ಮುತ್ತುಗಳ ಅಲಂಕಾರವನ್ನು ಹೆಚ್ಚಿಸಿದೆ. ಸಣ್ಣ ತೂತಿರುವ ಸೂಕ್ಷ್ಮವಾದ ಮುತ್ತುಗಳನ್ನು ಸೂಕ್ಷ್ಮವಾದ ಸೂಜಿ ಹಾಗೂ ಗಟ್ಟಿ ತಿಳಿಯಾದ ದಾರದಿಂದ ಪೋಣಿಸುತ್ತಾ ಹೋಗಿ ಒಂದು ಉತ್ತಮವಾದ ಹಿನ್ನೆಲೆಯ ಮೇಲೆ ಈ ಕೃತಿಗಳನ್ನು ದಾರ ಅಥವಾ ಅಂಟಿನಿಂದ ಕೂಡಿಸಿರುವುದು ಕೂಡಾ ಒಂದು ಉತ್ತಮ ಕಲಾಕಾರ್ಯವಾಗಿದೆ.

ಈ ಕಲಾಕೃತಿಗಳು ಮನೆಗೆ ಬರುವ ಅತಿಥಿಗಳ ಆನಂದ ಹೆಚ್ಚಿಸದೇ ಇರಲಾರವು. ಹಾಗೂ ಮನೆ ಎಂಬ ವಾಸ್ತುಶಿಲ್ಪಕ್ಕೆ ಈ ಕಸೂತಿಗಳು ಕಳೆಕಟ್ಟುತ್ತವೆ. ಕಸೂತಿ ನಿರ್ಮಿಸಿದದವಳಿಗಂತೂ ಧ್ಯಾನದ ಕಲ್ಪನೆಯಿಂದ ತಾಳ್ಮೆ ಶಕ್ತಿಯನ್ನು ಜಾಗೃತಗೊಳಿಸಿಕೊಂಡು ತನ್ನ ಬದುಕನ್ನು ಸಫಲ ವಾಗಿ ಬದುಕುತ್ತಾಳೆ.

**ಟಿಕಳಿ ಹಾಗೂ ಮುತ್ತಿನಿಂದ ಕಸೂತಿ :** ಬಣ್ಣದ ಟಿಕಗಳಿಗಳನ್ನು ಉಪಯೋಗಿಸಿ ಹಿಂದೂ, ಇಸ್ಲಾಂ, ಕ್ರೈಸ್ತ ಎಲ್ಲಾ ಧರ್ಮೀಯರು ತಮ್ಮ ತಮ್ಮ ಧಾರ್ಮಿಕ ಸಂಕೇತಗಳನ್ನು ಹಾಗೂ ಪ್ರಾಕೃತಿಕ ಅಲಂಕಾರಿಕ ರೂಪಗಳನ್ನು ಟಿಕಳಿ ಹಾಗೂ ಮುತ್ತಿನ ಮಾದ್ಯಮದಿಂದ ಅನೇಕ ಕಸೂತಿಗಳನ್ನು ನಿರ್ಮಿಸಿದ್ದಾರೆ. ಈ ಭಾರತೀಯ ಕನ್ನಡ ಕಸೂತಿಗಳು ಮಾನವಾಕಾರಗಳಿಗೆ ಮಹತ್ವ ಕೊಡದ ಇಸ್ಲಾಂ ಧರ್ಮದಲ್ಲಿ ತನ್ನ ಪ್ರಭಾವ ಬೀರಿ ಕುರಾನ ಓದುವವರು ಕುರಾನಿನ ಉಕ್ತಿಗಳನ್ನು ಹಾಗೂ ಕ್ರೈಸ್ತಧರ್ಮದ ಏಸುವಿನನ್ನು ಅಥವಾ ಶಿಲುಬೆಯನ್ನು ಕಸೂತಿಯಲ್ಲಿ ಹಾಕಿರುವುದನ್ನು ನಾವು ಕಾಣುತ್ತೇವೆ. ಕಸೂತಿ ಕಲೆ ಸಮಾಜದ ಸುಧಾರಣಾ ಶುಭದಾಯಕ ಕಲೆಯಾಗಿದೆ. ಇಲ್ಲಿರುವ ಇಸ್ಲಾಂ ಕಸೂತಿಗಳನ್ನು ಗುಳೇದಗುಡ್ಡದ ಮಲಕವ್ವಾ, ಜನ್ನವ್ವಾ, ಚಾಂದಬೀಬಿ, ಬಿಬಿಜಾನ, ಜುಲೇಖಾ, ಶಬಾನ, ಮಜ್ಜಿಗೆಗೌಡರು ಈ ಕಸೂತಿ ಕಲೆಯಲ್ಲಿ ನಿಪುಣರಾಗಿದ್ದಾರೆ.

**ಬಾಟಲಿಯಲ್ಲಿ ಚೆಂಡು ಇಳಿಸುವ ಕಸೂತಿ :** ಚಿಕ್ಕ ಬಾಯಿ ಇರುವ ಒಂದು ಬಾಟಲಿಯಲ್ಲಿ ಎರಡು ಅಥವಾ ಮೂರು ಕಸೂತಿಯ ದೊಡ್ಡ ಚೆಂಡುಗಳನ್ನು ಇಳಿಸಿದ್ದು ಶತಮಾನ ಗತಿಸಿದ ಮನೆಗಳಲ್ಲಿ ಅಲ್ಲಲ್ಲಿ ಕಾಣುತ್ತೇವೆ. ಈ ಬಾಟಲಿಯೊಳಗಿನ ಚೆಂಡುಗಳು ಚಿಕ್ಕ ಮಕ್ಕಳಿಗಂತೂ ಕುತೂಹಲವೇ ಸರಿ. ಎರಡು ಚೆಂಡುಗಳಿದ್ದರೆ ಈ ಸಂಕೀರ್ಣವಾದ ದೊಡ್ಡ ಜಗತ್ತನ್ನು ಚಿಕ್ಕ ಬಾಯಿ ಇರುವ ಬಾಟಲಿಗೆ ಹೋಲಿಸಿದರೆ ಇಲ್ಲಿ ಹರಿ ಹರ ಎಲ್ಲರೂ ಏಕರೂಪದಿಂದ ಅನ್ಯೋನ್ಯವಾಗಿ ಬಾಳಿರಿ ಎಂಬ ಸಾಂಕೇತಿಕ ಪ್ರತಿಮೆಯಾಗುತ್ತದೆ. ಮೂರು ಚೆಂಡುಗಳನ್ನು ಇಳಿಸಿದ್ದು ಆ ಚೆಂಡುಗಳ ಮೇಲೆ ಬಳಸಿದ ಬಣ್ಣದ ದಾರಗಳು ಸತ್ಯಂ, ಶಿವಂ, ಸುಂದರಂದ ಸಂಕೇತಗಳಾಗಿವೆ. ಅಲ್ಲದೆ ಬ್ರಹ್ಮ, ವಿಷ್ಣು, ಮಹೇಶ್ವರನ ಸಂಕೇತವೂ ಹೌದು.

ಚೆಂಡನ್ನು ಹೇಗೆ ಇಳಿಸುವುದು? ಮೊದಲು ಎರಡು ಅರ್ಧ ವರ್ತುಳದ ಕಸೂತಿಯ ಭಾಗಗಳನ್ನು ಹೆಣೆದು ನಂತರ ಸ್ವಲ್ಪ ಬಾಯಿ ಬಿಟ್ಟು ಉಳಿದೆಲ್ಲಾ ಭಾಗ ಹೊಲಿದು ಬರಿ ಚೀಲಗಳನ್ನು ಬಾಟಲಿಯಲ್ಲಿ ನೀರಿಗೆ ರೂಪದಲ್ಲಿ ಮಡಿಚಿ ಬಾಟಲಿಗೆ ಇಳಿಸಿ ಅದರ ಬಾಯಿಯನ್ನು ತೂತುಗಳ ಮಾಧ್ಯಮದಿಂದ ಬಾಟಲಿಯ ಒಳಗೆ ಸ್ವಲ್ಪ ತೆಗೆಯಿಸಿ ಅರಳೆಯನ್ನು ಸ್ವಲ್ಪ ಸ್ವಲ್ಪ ಸೇರಿದು ಅದು ದುಂಡಾದ ನಂತರ ಬಾಯಿಗೆ ಕಟ್ಟಿರುವ ದಾರಗಳನ್ನು ಕಾಲಿನ ಹೆಬ್ಬೆರಳಿನಿಂದ ಹಿಡಿದಿದ್ದು ಬಿಡಿಸಿ ಕಗ್ಗಂಟುಗಳನ್ನು ಹಾಕಿ ಒಳಗಡೆಗೆ ಚಿಮಟಗಿಯಿಂದ ದಾರ ಕತ್ತರಿಸಿ ಒಳಗೆ ಬಿಡುವುದು. ಒಂದರ ಮೇಲೊಂದು ಚೆಂಡುಗಳನ್ನು ಇದೇ ರೀತಿ ಇಳಿಸುತ್ತಾರೆ.

**ಕಸೂತಿ ಚಿತ್ರ ವಿನ್ಯಾಸಗಳು :** ಕಸೂತಿ ಚಿತ್ರ ವಿನ್ಯಾಸಗಳು ವೈವಿಧ್ಯಮಯವಾಗಿದ್ದು, ಇವುಗಳನ್ನು ೧ ಧಾರ್ಮಿಕ ಕಸೂತಿ ಕಲೆ ೨. ಧಾರ್ಮಿಕೇತರ ಕಸೂತಿ ಕಲೆ ಎಂದು ವರ್ಗೀಕರಿಸಿ ಈ ಕೆಳಗಿನಂತೆ ವಿವೇಚನೆ ಮಾಡಬಹುದು.

**೧. ಧಾರ್ಮಿಕ ಕಸೂತಿ ಕಲೆ :** ಧಾರ್ಮಿಕ ಕಸೂತಿ ಚಿತ್ರಕಲೆಯಲ್ಲಿ ಸ್ತ್ರೀಯರು ಹಾಕುವ ಕಸೂತಿಗಳು ಹಾಗೂ ಪುರುಷರು ಹಾಕುವ ಕಸೂತಿ ಚಿತ್ರಗಳು ಬೇರೆ ಬೇರೆ ಬರುತ್ತವೆ. ಇಲ್ಲಿ ಪುರುಷರು ಕಸೂತಿಗಳನ್ನು ಹಾಕುವುದು ವಿರಳ. ಎತ್ತುಗಳ ಇಣೆಯ ಹಿಂದೆ ಹಾಕವು ಜೂಲದ ಹೆಣಿಕೆ. ಮೈಲಾರ ದೇವರ ಭಕ್ತರಾದ ಗೊರವಯ್ಯಗಳು ಹಾಕಿಕೊಳ್ಳುವ ವೇಷ-ಭೂಷಣಗಳಲ್ಲಿ ಮಾತ್ರ ಪುರುಷರ ಕಸೂತಿಯನ್ನು ಕಾಣುತ್ತೇವೆ. ಧಾರ್ಮಿಕ ಚಿತ್ರಗಳಲ್ಲಿ ೧. ದೇವತೆಗಳ ಚಿತ್ರ ೨. ಪೌರಾಣಿಕ ಘಟನೆಗಳ ಕಸೂತಿಗಳು ೩. ರಾಮಾಯಣದ ಕಸೂತಿ ೪. ಮಹಾಭಾರತದ ಕಸೂತಿ ೫. ಧಾರ್ಮಿಕ ಸ್ಥಳ ಗುಡಿಗೋಪುರ ಮುಂತಾದವುಗಳನ್ನು ಹೆಸರಿಸಬಹುದು.

**೨. ಧಾರ್ಮಿಕೇತರ ಕಸೂತಿ ಕಲೆ :** ೧. ಐತಿಹಾಸಿಕ ೨. ಸಾಮಾಜಿಕ ೩. ರಾಜಕೀಯ ೪. ಅಲಂಕಾರಿಕ ಇವುಗಳನ್ನು ಸ್ಥೂಲವಾಗಿ ಇಲ್ಲಿ ವಿವರಿಸಬಹುದು.

**೧. ಐತಿಹಾಸಿಕ ಚಿತ್ರ :** ಬಸವೇಶ್ವರ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಸಿದ್ಧರಾಮ, ಬುದ್ಧ, ಮಹಾವೀರ, ಪೈಗಂಬರ, ಅಶೋಕ ಚಕ್ರವರ್ತಿ, ಕೃಷ್ಣದೇವರಾಯ, ಕುಮಾರರಾಮ, ಪುಲಿಕೇಶಿ, ಟಿಪ್ಪುಸುಲ್ತಾನ, ಸಿಂಧೂರ ಲಕ್ಷ್ಮಣ, ಸಂಗೊಳ್ಳಿರಾಯಣ್ಣ, ಬೆಳವಡಿ ಮಲ್ಲಮ್ಮ, ಛತ್ರಪತಿ ಶಿವಾಜಿ, ಕಿತ್ತೂರು ಚೆನ್ನಮ್ಮ, ಗಾಂಧಿ, ನೆಹರು, ಸುಭಾಶಚಂದ್ರ ಹಾಗೂ ಲಾಲ್ ಬಹಾದ್ದೂರ್‌ರನ್ನು ಕಸೂತಿಯಲ್ಲಿ ಹೆಣೆಯಲ್ಪಟ್ಟಿರುತ್ತದೆ. ಸೀರೆಯ ಸೆರಗಿನಲ್ಲಿ ಗಾಂಧಿ, ನೆಹರು, ಶಾಸ್ತ್ರೀಯವರನ್ನು ಕಮತಗಿಯ ಶ್ರೀ ಮುಸರಿ ಎಂಬುವರು ನೇಯ್ಗೆಗೆ ನೂಲಿನ ಗುಂಟ ಕಸೂತಿ ಕಲೆ ಮಾಡಿ ಪ್ರದರ್ಶಿಸಿದ್ದಾರೆ.

**೨. ಸಾಮಾಜಿಕ ಚಿತ್ರ :** ಮನೆ, ಮದುವೆ, ಮದುವೆಯ ಹಂದರ, ಮಂದಿರ, ಮಶ್ಚಿದ್, ಗಿರಿಜಾಘರ, ಮಕ್ಕಳು, ಭಿಕ್ಷೆಯ ವ್ಯಕ್ತಿ, ದೇವಸ್ಥಾನಕ್ಕೆ ಹೋಗುವವರು, ಜಾತ್ರೆ, ಉತ್ಸವ, ಆರತಿ ತಾಟಿನೊಂದಿಗೆ ಹೊರಟವರು, ದೀಪಾವಳಿಯಲ್ಲಿ ದೀಪಹಚ್ಚುವರು ಇತರೆ ಸಾಮಾಜಿಕ ಸನ್ನಿವೇಶಗಳನ್ನು ಕಸೂತಿಕಲೆಯಲ್ಲಿ ಮಾಡಿದ್ದಾರೆ.

**೩. ರಾಜಕೀಯ ಚಿತ್ರ :** ಇಂದಿರಾಗಾಂಧಿ, ಅಂಬೇಡ್ಕರ್, ಸ್ವಾಮಿ ವಿವೇಕಾನಂದ, ಗಾಂಧೀಜಿ, ಸುಭಾಷ್‌ಚಂದ್ರ ಬೋಸ್, ಜಯಪ್ರಕಾಶ ನಾರಾಯಣ, ರಾಷ್ಟ್ರೀಯ ಮಹಾ ಪುರುಷರು ಕಸೂತಿಯಲ್ಲಿ ಹೆಣೆಯಲ್ಪಟ್ಟಿವೆ.

**೪. ಅಲಂಕಾರಿಕ ಚಿತ್ರ :** ನದಿ, ಕೆರೆ, ಬಾವಿ, ಗಿಡಮರಬಳ್ಳಿ, ನಕ್ಷತ್ರ, ಸೂರ್ಯಚಂದ್ರ, ಹೂ, ಬಳ್ಳಿ, ಎಲೆ, ಕಾಯಿ, ಪಶು ಪಕ್ಷಿ, ತ್ರಿಕೋನ, ಚೌಕ ಭೂಮಿತಿಯ ಅನೇಕ ಅಲಂಕಾರಿಕ ರೂಪಗಳು, ಮಕ್ಕಳ ಕುಲಾಯಿ ಹಾಸಿಗೆ ಹೊದಿಕೆ, ಸಲವಾರ ಕಮೀಜ, ಅಂಗಿಗಳ ಮೇಲೆ ತೊಟ್ಟಿಲು ಚೆಟ್ಟು, ಕೈಚೀಲ, ಬಾಗಿಲು ತೋರಣಗಳಲ್ಲಿ, ತಲೆದಿಂಬಿನ ಕವರ್‌ಗಳಲ್ಲಿ ಮುಂತಾ ದವುಗಳಲ್ಲಿ ಮಂದಸ್ಮಿತ ಬೀರುವ ಬಣ್ಣದ ಕಸೂತಿಗಳು ಕಂಗೊಳಿಸುತ್ತವೆ.

ಕರ್ನಾಟಕದ ಕಸೂತಿಗಳು ಕನ್ನಡದ ಕಸೂತಿಗಳೆಂದೇ ಪ್ರಸಿದ್ಧಿ ಪಡೆದಿವೆ. ಬಿಜಾಪುರ, ಕಲಬುರ್ಗಿ, ಬೀದರ, ರಾಯಚೂರು, ಬಳ್ಳಾರಿ ಭಾಗದಲ್ಲಿ ಮುಸ್ಲಿಂ ಶೈಲಿಯ ದಟ್ಟವಾದ

ಅಲಂಕರಣಗಳು ಕಸೂತಿಕಲೆಯಲ್ಲಿ ಚಿತ್ರ ವಿನ್ಯಾಸಗಳಿರುತ್ತವೆ. ಬಳ್ಳಾರಿ ಭಾಗದ ಕಸೂತಿ ಚಿತ್ರಗಳಲ್ಲಿ ವಿಜಯನಗರ ಶೈಲಿಯ ಶಿಲ್ಪಗಳ ಶೈಲಿಯಲ್ಲಿವೆ. ಗೋಳಗುಮ್ಮಟ, ಬಂದೇ ನವಾಜ್, ಶರಣಬಸವೇಶ್ವರ, ಗೋಲಗೇರಿ, ಗೊಲ್ಲಾಳೇಶ್ವರ, ಬಾಗೇವಾಡಿ ಬಸವೇಶ್ವರ, ಕಡಕೋಳ ಮಡಿವಾಳಪ್ಪ, ತಿಂಥಿಣಿ ಮೌನಪ್ಪ ಕಸೂತಿಯಲ್ಲಿರುವ ಪುಣ್ಯ ವಿಶೇಷ.

ಅಥಣಿಯ ಶಿವಯೋಗಿಗಳು, ಸಾವಳಿಗಮಠದ ಸ್ವಾಮಿಗಳು, ಸವದತ್ತಿ ಯಲ್ಲಮ್ಮ, ಜೋಗಳಬಾವಿ ಸತ್ಯವ್ವ, ಗರಗದ ಮಡಿವಾಳಪ್ಪ, ಮುರುಘಾಮಠದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು, ಹುಬ್ಬಳ್ಳಿಯ ಶ್ರೀ ಸಿದ್ಧಾರೂಢರು, ಶ್ರೀ ಮೂರುಸಾವಿರಮಠ, ಗದುಗಿನ ಶ್ರೀ ತೋಂಟದಾರ್ಯ ಮಠದ ಸಿದ್ಧಲಿಂಗೇಶ್ವರರು, ಶಿರಹಟ್ಟಿ ಫಕೀರೇಶ್ವರರು, ಹಂಪೆಯ ತೇರು, ವಿರುಪಾಕ್ಷೇಶ್ವರ ಗುಡಿ, ಉಳುವಿ ತೇರು ಮುಂತಾದ ಧಾರ್ಮಿಕ ಪುಣ್ಯಪುರುಷರ ಸ್ಥಳಗಳು. ಧಾರವಾಡ, ಬೆಳಗಾವಿ ಭಾಗದ ಕಸೂತಿ ಕಲೆಯಲ್ಲಿ ಒಡಮೂಡಿದೆ. ಇವೆಲ್ಲ ಇಲ್ಲಿನ ಜನರ ಧಾರ್ಮಿಕ ಭಾವನೆಗಳಿಗೆ ಇಂಬುಕೊಡುತ್ತವೆ.

ಕಾರವಾರದ ಪ್ರದೇಶದ ಕಸೂತಿಯಲ್ಲಿ ಇಡಗುಂಜಿ ಗಣಪತಿ, ಸಿರಸಿ ಮಾರಿಕಾಂಬಾ ದೇವಾಲಯ, ಜೋಗ ಜಲಪಾತದ ದೃಶ್ಯ, ಗೋಕರ್ಣದ ಮಹಾಬಲೇಶ್ವರ, ಕೋಟಿತೀರ್ಥ, ಸಮುದ್ರ ದೃಶ್ಯ, ಅಡಿಕೆ, ತೆಂಗಿನ ಗಿಡಗಳ ಸಾಲುಗಳು ಕಂಡುಬರುತ್ತವೆ. ಮುಸ್ಲಿಂ, ಕ್ರಿಶ್ಚಿಯನ್, ಹಿಂದುಗಳು ತಮ್ಮ ತಮ್ಮ ಧರ್ಮಕ್ಕೆ ಸಂಬಂಧಿಸಿದ ಚಿತ್ರಗಳನ್ನೇ ಕಸೂತಿಯಲ್ಲಿ ಚಿತ್ರಿಸಿದ್ದಾರೆ. ಕೆಲವು ಸಲ ಅವುಗಳನ್ನು ಸಾಂಕೇತಿಕವಾಗಿ ಚಿಹ್ನೆಗಳ ಮುಖಾಂತರ ಸೂಚಿಸುವುದುಂಟು. ಅನ್ಯಧರ್ಮದ ಚಿತ್ರಗಳನ್ನು ಕೈ ಕಸೂತಿಯಿಂದ ಅಥವಾ ಯಂತ್ರ ಕಸೂತಿಯ ಮೂಲಕ ಚಿತ್ರಿಸಿ ಅನ್ಯ ಧರ್ಮವನ್ನು ಅಪಾರ ಪ್ರೀತಿಯಿಂದ ಗೌರವಿಸಿದ್ದು ಕಸೂತಿಕಲೆಯ ಪ್ರಭಾವ ವಾಗಿದೆ.

ಲಂಬಾಣಿ ಸ್ತ್ರೀಯರಲ್ಲಿ ಮಾತ್ರ ಕಸೂತಿ ಹತ್ತಿರದ ಸಂಬಂಧಿಯಂತಿದೆ. ಲಂಬಾಣಿ ಹೆಣ್ಣುಮಕ್ಕಳು ಕಸೂತಿ ಇಲ್ಲದೆ ಅರಿವೆ ತೊಡುವುದಿಲ್ಲ; ತೊಡಲೇಬಾರದು ಎನ್ನುವ ನಂಬಿಕೆ ಇದೆ. ಮದುವೆ, ಹಬ್ಬ-ಹರಿದಿನ, ಉತ್ಸವಗಳಲ್ಲಿ ತೊಡುವ ಅವರ ಉಡುಗೆ-ತೊಡುಗೆಗಳು ಕಸೂತಿ ವೈಭವಪೂರ್ಣವಾಗಿರುತ್ತವೆ.

ಹಿಂದುಗಳಲ್ಲಿ ಮದುವೆಯಾಗಿ ಗಂಡನ ಮನೆಗೆ ಹೋಗುವಾಗ ಸುಮಂಗಲೆಯರಿಗೆ ಶುಭ ಸೂಚಕವೆಂದು ಕನ್ನಡ ಕಸೂತಿಯ ಕರಿ ಚಂದ್ರಕಾಳಿ ಸೀರೆಯನ್ನು ಕೊಡುವ ಪದ್ಧತಿಯಿದೆ. ಹಾಗೆಯೇ ಚೊಚ್ಚಲ ಗರ್ಭವತಿಗೆ ಕಳ್ಳ ಮಗ್ಗಿಯನ್ನು ಮಾಡುವಾಗ ಬಿಳಿ ಬಟ್ಟೆಯ ಮೇಲೆ ಕಸೂತಿ ತೆಗೆದು ತೊಡಿಸುವ ರೂಢಿಯೂ ಇದೆ. ಬಟ್ಟೆಯ ತುಂಬ ಕಸೂತಿ ತೆಗೆಯುವುದು ಸಾಧ್ಯವಾಗದಿದ್ದಲ್ಲಿ ಕೇವಲ ತೋಳಿನ ಮೇಲೆ "ಹೂ"ಗಳನ್ನು ಕಸೂತಿಯಿಂದ ಅಲಂಕೃತ ಗೊಳಿಸಿ ಅವರ ಬಯಕೆಗಳನ್ನು ಪೂರ್ಣಗೊಳಿಸುತ್ತಾರೆ. ಹೆಣ್ಣುಮಕ್ಕಳ ಕೋಮಲ

ಮನಸ್ಸಿನಲ್ಲಿ ಮೂಡಿಬಂದ ಕ್ರೂರಪ್ರಾಣಿಗಳು ಕಸೂತಿಯಲ್ಲಿ ಸೌಮ್ಯ ಪ್ರಾಣಿಗಳಾಗಿ ಚಿತ್ರಣ ಗೊಂಡಿರುವುದು, ಈ ಭಾಗದ ಪ್ರಮುಖ ಶೈಲಿಯೆಂದು ಹೇಳಬಹುದು.

ಕವಲುದಾರಿಯಲ್ಲಿ ಕಸೂತಿ ಕಲೆ : ಚಂದ್ರಕಾಳಿ ಸೀರೆಯಂತೆ ತಾಳ್ಮೆಯಿಂದ ಕಸೂತಿ ಮಾಡು ವವರ ಸಂಖ್ಯೆ ಕಡಿಮೆಯಾಗಿ ಅದೇ ತರಹದ ಬಣ್ಣಗಳಿಂದ ಪ್ರಿಂಟಿಂಗ್ ಮಾಡಿದ ಚಂದ್ರಕಾಳಿ ಸೀರೆ ಇಂದು ಮಾರ್ಕೆಟ್‌ನಲ್ಲಿ ಲಭ್ಯವಾಗಿವೆ. "ಕಸೂತಿ ಕಲೆಯನ್ನು ಸಬಲೀಕರಣಗೊಳಿಸು ವತ್ತ ಆಗುತ್ತಿರುವ ಪ್ರಯತ್ನಗಳಲ್ಲಿ ಬುಡಕಟ್ಟು ಜನಾಂಗದ ಮೂಲ ಸೃಜನಶೀಲ ಕಲೆಗೆ ಅಗತ್ಯವಾದ ಆಧುನಿಕ ಕಸಿಯನ್ನು ಮಾಡಿಕೊಂಡು ಆ ಉತ್ಪನ್ನಗಳ ಮಾರಾಟವನ್ನು ತ್ವರಿತ ಗತಿಯಲ್ಲಿ ಮಾಡುತ್ತಿರುವುದು ಮತ್ತು ಒಳ್ಳೆಯ ಮಾರುಕಟ್ಟೆಯನ್ನು ಇವುಗಳಿಗಾಗಿ ಸೃಷ್ಟಿಸುತ್ತಿರುವುದು ಸೇರಿವೆ. ಇದರ ರೂವಾರಿಗಳಾಗಿ ಸ್ತ್ರೀಪರ ಕಾಳಜಿಯ ಸ್ವಯಂ ಸೇವಾ ಸಂಸ್ಥೆಗಳು ಕೆಲಸ ಮಾಡುತ್ತಿವೆ."

ಶಾಂತಾಬಾಯಿಯವರು ಉತ್ತರ ಕರ್ನಾಟಕದ ಸಂಡೂರಿನವರು. ಕನ್ನಡ, ಹಿಂದಿ ಮತ್ತು ಲಂಬಾಣಿ ಭಾಷೆ ಬಲ್ಲ ಬುಡಕಟ್ಟು ಜನಾಂಗದ ಕಸೂತಿ ಕಲಾವಿದೆ. ಕುಶಲ ಕಲಾಕೃತಿಗಳಿಗೆ ಸಿಗುವ ಬೆಲೆಯೂ ಹೆಚ್ಚು ಬೇಡಿಕೆಯೂ ಏರುತ್ತಿದೆ ಎನ್ನುತ್ತಾರೆ.

ಮೂಲ ಲಂಬಾಣಿ ಕಸೂತಿಯಲ್ಲಿ ಮಿರರ್ ವರ್ಕ್, ಪ್ಯಾಚ್ ವರ್ಕ್ ಮತ್ತು ಬೇರೆ ಬೇರೆ ಬಗೆಯ ಹೊಲಿಗೆಗಳೇ ಪ್ರಮುಖ ಇವುಗಳನ್ನು ಲಂಗ, ದುಪ್ಪಟ್ಟಾ, ಮತ್ತು ಇತರ ಮಹಿಳೆಯರು ಮೇಲ್ಭಾಗದಲ್ಲಿ ತೊಡುವ ಉಡುಗೆಗಳಿಗೆ ಹೆಚ್ಚಾಗಿ ಬಳಸುವುದು ರೂಢಿ. ಆದರೆ ದೆಹಲಿಯ ಎನ್.ಜಿ.ಓ. 'ದಸ್ತಕರ್' ಈ ಮಹಿಳೆಯರಿಗೆ ಸಾಂಪ್ರದಾಯಿಕ ಬಣ್ಣ ಹೊಲಿಗೆಗಳನ್ನು ಆಧುನಿಕ ಉಪಯೋಗಕ್ಕೆ ಅಳವಡಿಸಿಕೊಳ್ಳಲು ಸಹಾಯ ಮಾಡಿತು.

ಕಸೂತಿ ಕಲೆಯ ಈ ಬಗೆಯ 'ಪುನರುತ್ಥಾನ' ಶಾಂತಾಬಾಯಿಯಂತಹ ಮಹಿಳೆಯರಿಗೆ ಹೊಸಲೋಕವನ್ನೇ ತೆರೆದಿದೆ. ಅವರ ಆತ್ಮವಿಶ್ವಾಸ ಹೆಚ್ಚಾಗಿದೆ. ವ್ಯವಹಾರ ಶೈಲಿ ಸುಧಾರಿಸಿದೆ. ಶಾಂತಬಾಯಿಗೆ ಈ ವರ್ಷದ "ರಾಷ್ಟ್ರೀಯ ಕುಶಲಕಲಾ ಪ್ರಶಸ್ತಿ" ದೊರೆತದ್ದಂತೂ ಈ ದಿಸೆಯಲ್ಲಿ ಗಮನಾರ್ಹ ಬೆಳವಣಿಗೆ. ಸ್ವತಂತ್ರವಾಗಿ ಚಿಂತಿಸಲು, ಬೆಳೆಯಲು ಕಸೂತಿ ಕಲಾವಿದರಿಗೆ ಅನುವು ಮಾಡಿಕೊಡಬೇಕು ಎಂದು ದಸ್ತಕರ್ ಸಂಸ್ಥೆಯ ಅಧ್ಯಕ್ಷೆ ಲೈಲಾ ತ್ಯಾಬ್ಜಿ ಅಭಿಪ್ರಾಯ ಪಡುತ್ತಾರೆ.

"ಗ್ರಾಮೀಣ ಪ್ರದೇಶದ ಮನೆಗಳಲ್ಲಿ ಮದುವೆ ನಿಶ್ಚಯವಾಗುತ್ತಲೇ ಮನೆಯ ಗೃಹಿಣಿ ಮೊದಲು ಸಿದ್ಧಗೊಳಿಸಿ, ಸಿದ್ದವಾಗಿಟ್ಟುಕೊಳ್ಳುವ ಕಸೂತಿಗಳಲ್ಲಿ ಮುತ್ತಿನ ಕಲೆ ಮಹತ್ವದ್ದು. ಇಂದಿನ ಸಿದ್ದ ವಸ್ತುಗಳ ಭರಾಟೆಯಲ್ಲಿ ಈ ಅಪರೂಪದ ಕಲೆ ಬಹುತೇಕ ಮೂಲೆಗುಂಪಾ ಗುತ್ತಿದೆ. ಇಂದು ಉತ್ತರ ಕರ್ನಾಟಕದ ಅನೇಕ ಮನೆಗಳಲ್ಲಿ ಕಾಣಬರುತ್ತಿರುವ ಕನ್ನಡಿ ಹಳ್ಳ ದಲ್ಲಿರುವ ಅಲಂಕಾರಿಕ ಮುತ್ತಿನ ಕಸೂತಿಗಳು ಮಧುಮಗಳು ತಂದಂತಹ ಮಸೂಟ ಸಾಮಾನಿನ ಬೆಲೆಬಾಳುವ ಸರಕಾಗಿದೆ.

ಬಣ್ಣ ಬಣ್ಣದ ಮುತ್ತಿನ ಮಣಿಗಳಿಂದ ನಾಜೂಕಾಗಿ ನೇಯ್ದ ಕಸೂತಿ. ಆರತಿ ಕಟ್ಟು, ಬೀಸಾಳೆ, ವರಗಾಯಿ, ಬಾಗಿಲ ತೋರಣ ಇಂತವೆಲ್ಲ ಇಲ್ಲವೆಂದರೆ ಗ್ರಾಮೀಣ ಮದುವೆ ಸಮಾರಂಭ ತೀರಾ ಸಪ್ಪೆ. ಉತ್ತರ ಕರ್ನಾಟಕದ ಪ್ರತಿ ಲಗ್ನದಲ್ಲಿ ಮಧುಮಗಳು ತಯಾರಿಸಿ ಕೊಳ್ಳುವ ಮಸೂಟ ಸಾಮಾನುಗಳಲ್ಲಿ ಅರ್ಧದಷ್ಟು ಕಸೂತಿಗೆ ಸಂಬಂಧಪಟ್ಟ ಸಾಧನೆಗಳೇ ಇರುತ್ತವೆ. ಕರ್ನಾಟಕದ ದಕ್ಷಿಣಭಾಗದಲ್ಲಿ ಮನೆಯಲ್ಲಿ ಶುಭಕಾರ್ಯ ನಿಶ್ಚಯವಾಗುತ್ತಲೇ ಮನೆಯ ಗೃಹಿಣಿ ಮೊದಲು ಸಿದ್ಧಗೊಳಿಸಿ ಸಿದ್ದವಾಗಿಟ್ಟುಕೊಳ್ಳುವ ಕಸೂತಿಗಳಲ್ಲಿ ಮುತ್ತಿನ ಕಸೂತಿ ಕಲೆಯು ಮಹತ್ವದ್ದು. ಇಂದಿಗೂ ಮಲೆನಾಡಿನ ಕೆಲವು ಹಳ್ಳಿಗಳಲ್ಲಿ ನಯ ನಾಜೂಕಿನ ಈ ಕಸೂತಿ ಕಲೆ ಉಳಿದು ಬಂದಿದೆ.

ಬಿಡುವಿನ ಹೊತ್ತಿನಲ್ಲಿ ಮನೆ ಹೊರಗಿನ ಹೊಸ್ತಿಲಲ್ಲಿ ಕುಳಿತು ನಾಜೂಕಾಗಿ "ಮುತ್ತು" ನೇಯುತ್ತಾ ಕಸೂತಿ ರೂಪದಲ್ಲಿ ಕಲೆ ಅರಳಿಸುವ ಆಕೃತಿಗಳು ಮಹಿಳೆಯರಿಗೆ ಸಂತೋಷ ಕೊಡುತ್ತವೆ. ಈ ವಸ್ತುಗಳು ಮುಂದೆ ಮಕ್ಕಳ ಶುಭಕಾರ್ಯಗಳಲ್ಲಿ ಉಪಯೋಗವಾದರೆ ಅದೇ ಸಂತೋಷ ಎಂಬ ಮಹಾದಾಸೆಯಿಂದ ತನ್ನ ಮನಸ್ಸನ್ನು ಶಾಂತಗೊಳಿಸಿಕೊಂಡು ತಾಳ್ಮೆಯಿಂದ ತಯಾರಿಸುವ ಕಸೂತಿ ಕಲಾಕೃತಿಗಳು ಮಹಿಳೆಯರಲ್ಲಿ ತಾಳ್ಮೆ ಹಾಗೂ ಸಮು ದಾಯದಲ್ಲಿ ಸೌಂದರ್ಯಪ್ರಜ್ಞೆ ಒಡಮೂಡಿಸುತ್ತವೆ.

## ಹವ್ಯಾಸದಿಂದ ಗಳಿಕೆಯತ್ತ ಮುತ್ತಿನ ಕಸೂತಿ

ಉತ್ತರ ಕನ್ನಡದ ಶಿರಸಿ ಸನಿಹದಲ್ಲೇ 'ತೋಡಿಕೊಪ್ಪ' ಎಂಬ ಹಳ್ಳಿಯಿದೆ. ಈ ಹಳ್ಳಿಯಲ್ಲಿ ಗೃಹಿಣಿ ಶ್ರೀಮತಿ ಸುಜಾತಾ ಜಿ.ಹೆಗಡೆಯವರಿಗೆ ಮುತ್ತಿನ ಕಸೂತಿ ಕಲಾಕೃತಿಗಳನ್ನು ತಯಾರಿಸು ವದೆಂದರೆ ಎಲ್ಲಿಲ್ಲದ ಆನಂದ. ತನ್ನ ತಾಯಿ ಹಾಗೂ ಅಜ್ಜಿಯವರಿಂದ ರೂಢಿಸಿಕೊಂಡ ಈ ಕಲೆ ಇವರಿಗೆ ಕರಗತವಾಗಿದೆ. ಅಡಿಕೆ ಕೃಷಿಕರಾದ ಇವರಿಗೆ ವರ್ಷದಲ್ಲಿ ನಾಲ್ಕಾರು ತಿಂಗಳು ಬಿಡುವು ಸಿಗುತ್ತದೆ. ಇವರು ತಮ್ಮ ದೈನಂದಿನ ಕೆಲಸ ಮುಗಿಸಿಕೊಂಡು ವಿವಿಧ ಬಣ್ಣದ ಮುತ್ತುಗಳಿಂದ ಆರತಿ ತಾಟು, ಬೀಸಾಳೆ, ವರಗಯಿ ಬಾಗಿಲ ತೋರಣಗಳನ್ನು ನೆಯುತ್ತಾ ಕೂಡ್ರುವುದು ಹವ್ಯಾಸವಾಗಿ ಬಿಟ್ಟಿದೆ. ಈ ಹವ್ಯಾಸ ಬರಬರುತ್ತಾ ಒಂದು ವಾಣಿಜ್ಯದ ವಸ್ತುವಾಗಿ ಪರಿವರ್ತನೆಗೊಂಡಿದೆ.

ಸರಾಸರಿ ರೂಪಾಯಿ ೭೦೦ ಕ್ಕೆ ಆರತಿಕಟ್ಟು, ಬೀಸಾಳೆ ಬಾಗಿಲು ತೋರಣ ತಯಾರಿಸಿ ಕೊಟ್ಟ 'ಗಳಿಕೆ' ಮಾಡುತ್ತಿದ್ದಾರೆ. ವಾಸ್ತವಿಕವಾಗಿ ಈ ಹಣ ಆ ಕಲೆಗೆ ಹೋಲಿಸುವುದು ಎಳ್ಳಷ್ಟು ಸರಿಯಿಲ್ಲ. ಈ ಕಸೂತಿ ಕಲಾಕೃತಿಗಳು ನಮ್ಮ ಬದುಕಿನಲ್ಲಿ ಸಾಂಸ್ಕೃತಿಕ ರಾಯಭಾರಿ ಗಳಂತೆ ಆಗಮಿಸಿ ಸಾಧನೆಯನ್ನು ಪ್ರದರ್ಶಿಸುತ್ತವೆ. ಈ ಕಸೂತಿಗಳು ಕೈಯ್ಯಾರೆ ನಿರ್ಮಾಣ ವಾಗುವಾಗ 'ಕಲೆಗಾಗಿ ಕಲೆ' ಎಂಬ ಪಂಥದಲ್ಲಿ; ಕಲಾ ಸಂಸ್ಕೃತಿಯನ್ನು, ಸಮುದಾಯದಲ್ಲಿ ಆನಂದವನ್ನು ಮೂಡಿಸುತ್ತದೆ.

ಈ ಕಲೆಗಳು ತಾಂತ್ರಿಕ ರೂಪ ಧರಿಸಿ ವಾಣಿಜ್ಯ ವಸ್ತುಗಳು ವ್ಯಾಪಾರಿ ಸಂಸ್ಕೃತಿಯ ವಸ್ತುಗಳಾಗಿ ಪರಿವರ್ತನೆಯಾಗುತ್ತವೆ. ಹೀಗೆ ಕಸೂತಿ ಕಲೆಯು ಪರಿವಾರದಿಂದ ಸಮುದಾಯ, ರಾಜ್ಯ, ದೇಶ, ಅಂತರ್ದೇಶಗಳಲ್ಲಿ ಮಹಿಳೆಯರ, ಮುದ್ದು ಮಕ್ಕಳ ಉಡುಗೆಯಾಗಿ, ಮನಃ ಶಾಂತಿಯಾಗಿ, ಮಂಗಲಕರ ಚಿಹ್ನೆಯಾಗಿ ಕಂಗೊಳಿಸುವುದೇ ಕಸೂತಿ ಕಲೆಯ ಒಳಗುಟ್ಟಾಗಿದೆ.*

## ಆಧಾರ ಗ್ರಂಥಗಳು


೧. ಡಾ. ಎಸ್.ಸಿ.ಪಾಟೀಲ "ಕರ್ನಾಟಕದ ಜನಪದ ಚಿತ್ರಕಲೆ" ಪಿಎಚ್.ಡಿ. ಮಹಾಪ್ರಬಂಧ, ಪುಟ ೧೪೧-೧೫೦

೨. "ಸಂಯುಕ್ತ ಕರ್ನಾಟಕ" ದಿನಾಂಕ ೧೭.೫.೯೪ರ "ಮೋಹಕ ಬೆಡಗಿನ ಚಂದ್ರಕಾಳಿ ಸೀರೆ" (ಸಾಪ್ತಾಹಿಕ ಸೌರಭ) ಮ.ಮಾ.ಜಗತಾಪ

೩. ಸಂಯುಕ್ತ ಕರ್ನಾಟಕ, ದಿನಾಂಕ ೧೦.೭.೯೨ "ಬಾಳ ಸಂಜೆಗೆ ಕಸೂತಿ ಸಂಗಾತಿ" (ಕಲಾ ಸೌರಭ)

೪. "ಕನ್ನಡ ಪ್ರಭ" ದೈನಿಕ ಪತ್ರಿಕೆ ಗುಳೇದಗುಡ್ಡದ ಚಂದ್ರಕಾಳಿ ಸೀರೆ, ೧೮.೫.೧೯೯೮ (ವಾಙ್ಮಯ ವಿಶೇಷ, ಪುಟ ೧೦) ಮ.ಮಾ.ಜಗತಾಪ

೫. "ಶೆಲೆಬ್ರೆಶನ್ ಆಪ್ ಕ್ರಾಸ್ ಸ್ಟಿಚ್" ಶ್ರೀಮತಿ ಜೆನ್ ಗ್ರೇನ್ ಆಪ್ (Mrs, JENEGREENOFF ) ಪ್ರಕಾಶಕರು ಡೆವಿಡ್ ಅಂಡ್ ಚೆರ್ಲ್ಸ್ ಗ್ರೇಟ್ ಬ್ರಿಟನ್, ೧೯೯೬

೬. ಟೆಕ್ಸ್ಟಬುಕ್ ಎಜೆನ್ಸಿ, ೧೬೬, ನಾಗದೇವಿ ಸ್ಟ್ರೀಟ್, ಬಾಂಬೆ

೭. ಮೊಡರ್ನ್ ಎಂಬ್ರಾಯಿಡರಿ ಸಿರಿಜ್, ದೆಹಲಿ-೩೨

೮. ಕಾಂತಾ ಕಲಾನಿಕೇತನ, ದೆಹಲಿ-೩೧

೯. "ವಿಜಯ ಕರ್ನಾಟಕ" ದೈನಿಕ ಪತ್ರಿಕೆ, ಮಂಗಳವಾರ ೩೦ ಮೇ ೨೦೦೩, ಮಹಿಳಾ ವಿಜಯ, ಲಲಿತಾ ಶ್ರೀಧರ

೧೦. "ಪ್ರಜಾವಾಣಿ" ದೈನಿಕ ಪತ್ರಿಕೆ, ೨೨ನೇ ಸೆಪ್ಟೆಂಬರ್ ಸಾಪ್ತಾಹಿಕ ಪುರವಣಿ "ಕೇಳೆ ಗೆಳತಿ" ಚಿತ್ರ ಲೇಖನ : ಜಿ.ಎಂ.ಬೊಮ್ಮನಳ್ಳಿ


---

* ಕಸೂತಿ ಕಲೆಯ ಅನೇಕ ವಿಷಯಗಳನ್ನು ಡಾ.ಎಸ್.ಸಿ.ಪಾಟೀಲರವರ ಕರ್ನಾಟಕದ ಜನಪದ ಚಿತ್ರಕಲೆ ಗ್ರಂಥದ ಸಹಾಯವನ್ನು ಪಡೆದಿರುವೆ. ಅವರಿಗೆ ನಾನು ಚಿರಋಣಿ.



೧೯೫೭ರಲ್ಲಿ ಜನಿಸಿದ ಮಹಾದೇವ ಮ. ಜಗತಾಪ ಇವರು ಈಗ ಗುಳೇದಗುಡ್ಡದ ವೆಂಕಟೇಶ್ವರ ಹಿಂದಿ ಹೈಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ, ಚಿತ್ರ ಕಲಾವಿದರಾಗಿ, ಕಲಾ ಬರಹಗಾರರಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಸಾಹಿತಿಯಾಗಿ ಅನೇಕ ಲೇಖನ ಮತ್ತು ಕವನಗಳನ್ನು ಬರೆದುದಲ್ಲದೆ, ಅನೇಕ ಸಂಘ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಅನೇಕ ಕಲಾ ಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಲ್ಲದೆ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ವಿದ್ಯಾರ್ಥಿಗಳಿಗೆ ಬೇಸಿಗೆಯಲ್ಲಿ ಕಲಾಶಿಬಿರಗಳನ್ನು ಏರ್ಪಡಿಸಿರುವುದಲ್ಲದೆ ವಿವಿಧ ರೀತಿಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಜನರ ಗಮನ ಸೆಳೆದಿದ್ದಾರೆ. ಕ್ರಿಯಾಶೀಲ ವ್ಯಕ್ತಿತ್ವದ ಜಗತಾಪರವರು ಅನೇಕ ದಿನ ಪತ್ರಿಕೆ, ವಾರ ಪತ್ರಿಕೆಗಳಿಗೆ ಕಲೆ ಕಲಾವಿದರ ಕುರಿತಾದ ಲೇಖನಗಳನ್ನು ಬರೆದಿದ್ದಾರೆ. ವಿವಿಧ ವಿಚಾರ ಸಂಕಿರಣ, ಕಮ್ಮಟಗಳಲ್ಲಿ ಭಾಗವಹಿಸಿದ್ದಾರೆ. ಇವರು ಎಮ್.ಎ. ಹಿಂದಿ ಮತ್ತು ಎ.ಎಮ್.ಜಿ.ಡಿ. ಆರ್ಟ್ ಪದವಿಗಳನ್ನು ಪಡೆದುಕೊಂಡಿದ್ದು ಈಗ ಬಿ.ಈಡಿ. ಪರೀಕ್ಷೆಗೆ ಕುಳಿತಿದ್ದಾರೆ. ಅಕಾಡೆಮಿಗಾಗಿ 'ಕಸೂತಿ ಚಿತ್ರಕಲೆ'ಯನ್ನು ಕುರಿತು ಕ್ಷೇತ್ರ ಕಾರ್ಯ ಮಾಡಿ ಈ ಪುಸ್ತಕವನ್ನು ಬರೆದುಕೊಟ್ಟುದಕ್ಕಾಗಿ ಅಕಾಡೆಮಿ ಅವರನ್ನು ಅಭಿನಂದಿಸುತ್ತದೆ.

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - 560 002